ಕರ್ನಾಟಕ
# ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ

Karnataka
# Scout & Guide
Monthly Magazine

Vol -66 Issue -03 March 2025 Pages: 36 Annual Subscription: ₹ 100/-

ಸಂಪುಟ: 66 ಸಂಚಿಕೆ: 03 ಮಾರ್ಚ್ 2025 ಪುಟಗಳು: 36 ವಾರ್ಷಿಕ ಚಂದ ರೂ. 100/-






17ನೇ ಮಾರ್ಚ್ 2025 ರಂದು ಬೆಂಗಳೂರು ರಾಜಭವನದಲ್ಲಿ ರಾಜ್ಯ ಸಂಸ್ಥೆಯಿಂದ ಏರ್ಪಡಿಸಿದ 2023-24ನೇ ಸಾಲಿನ 'ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ'ದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಹಾಗೂ ರಾಜ್ಯ ಸಂಸ್ಥೆಯ ಪೋಷಕರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಕಬ್ಸ್ ಮತ್ತು ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಚತುರ್ಥ ಚರಣ್, ಹೀರಕ್ ಪಂಖ್, ರಾಜ್ಯಪುರಸ್ಕಾರ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.

ಶ್ರೀ ಯು.ಟಿ ಖಾದರ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ, ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು, ಕರ್ನಾಟಕ, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




8ನೇ ಮಾರ್ಚ್ 2025 ರಂದು ರಾಜ್ಯ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮೈಸೂರಿನಲ್ಲಿ ಏರ್ಪಡಿಸಿದ್ದ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ ಸುತ್ತೂರು ಸಂಸ್ಥಾನದ ಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀಕ್ಷೇತ್ರ ಸುತ್ತೂರು ಮಠ, ಮೈಸೂರು ಇವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿದವರೆಲ್ಲರಿಗೂ ಶುಭಹಾರೈಸಿದರು.

ಶ್ರೀ ಯು.ಟಿ. ಖಾದರ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ, ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅಭಿನಂದಿಸಲ್ಪಟ್ಟ ಇಸ್ರೋ ಸಂಸ್ಥೆಯ ಹಿರಿಯ ನಿವೃತ್ತ ವಿಜ್ಞಾನಿ ಶ್ರೀಮತಿ ಟಿ.ಕೆ. ಅನುರಾಧ, ಬೆಂಗಳೂರು ಹಾಗೂ ರಾಜ್ಯ ಮತ್ತು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳು, ದಳನಾಯಕಿಯರು ಹಾಗೂ ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




ಮಾರ್ಚ್ 24 ರಿಂದ 28ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನಡೆದ **National Level Advance Workshop on SDGS for Rovers and Rangers and Young Leader** ಶಿಬಿರದಲ್ಲಿ ಶ್ರೀ ಯು.ಟಿ. ಖಾದರ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಅರುಣ್ ಕುಮಾರ್ ಶೆಟ್ಟಿ, ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಶ್ರೀ ಕೃಷ್ಣಸ್ವಾಮಿ, ಮಾಜಿ ನಿರ್ದೇಶಕರು, ರಾಷ್ಟ್ರೀಯ ಸಂಸ್ಥೆ, ಶ್ರೀ ಅನಲೇಂದ್ರ ಶರ್ಮ, ಸಹಾಯಕ ನಿರ್ದೇಶಕರು, ರಾಷ್ಟ್ರೀಯ ಸಂಸ್ಥೆ ರಾಜ್ಯ ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ರೋವರ್ಸ್, ರೇಂಜರ್ಸ್‌ಗಳು ಮತ್ತು ಇತರರು ಚಿತ್ರದಲ್ಲಿದ್ದಾರೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 03 March 2025

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
2025 ಏಪ್ರಿಲ್ ತಿಂಗಳ ಕಾರ್ಯಕ್ರಮಗಳ ವಿವರಗಳು ...05
ಸಂಪಾದಕೀಯ ...06
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ...07
ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ ...08
ಆಯುಕ್ತರ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ ...09
ಚಾರಣ ಮತ್ತು ಪ್ರಕೃತಿ ಅಧ್ಯಯನದ ರಾಜ್ಯ ಮಟ್ಟದ ಶಿಬಿರ ...10
ರಾಜ್ಯ ಮಟ್ಟದ ಕಡಲ ತೀರ ಚಾರಣ, ಪ್ರಕೃತಿ ಅಧ್ಯಯನ ಹಾಗೂ ಸ್ವಚ್ಛತಾ ಶಿಬಿರ ...11
ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಐತಿಹಾಸಿಕ ಮತ್ತು ಪರಿಚಯಾತ್ಮಕ ಶಿಬಿರ ...12
ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಐತಿಹಾಸಿಕ ಮತ್ತು ಪರಿಚಯಾತ್ಮಕ ಶಿಬಿರ ...13
ಜಿಲ್ಲಾ ವಾರ್ತೆಗಳು ...14
ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು-6 ...32
ಭಾರತ ಮತ್ತು ಅಮೇರಿಕಾದಲ್ಲಿ ಸ್ಕೌಟಿಂಗ್ ಚಟುವಟಿಕೆ-ಒಂದು ತುಲನೆ ...33
ಶ್ರದ್ಧಾಂಜಲಿ ...34

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್‌ನ ಪುಸ್ತಕಗಳನ್ನು ಓದಲು ಕೆಳಗಿನ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಕಲ ಸ್ಕೌಟ್ಸ್ ಗೈಡ್ಸ್ ಬಂಧುಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.** ಈ ಸಂವತ್ಸರವು ಎಲ್ಲರಿಗೂ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ. ಸ್ಕೌಟ್ಸ್ ಗೈಡ್ಸ್ ಚಳುವಳಿಯು ಮತ್ತಷ್ಟು ಬೆಳೆದು ಪ್ರಭಾವಶಾಲಿಯಾಗಲಿ ಎಂದು ಹಾರೈಸುತ್ತೇನೆ. ನಮ್ಮ ಸಂಸ್ಥೆಯಿಂದ ನಡೆಸುವ ಎಲ್ಲ ಕಾರ್ಯಕ್ರಮಗಳು, ಚಟುವಟಿಕೆಗಳ ಹಿಂದಿನ ದೃಢವಾದ ಉದ್ದೇಶ, ನಮ್ಮ ಯುವಶಕ್ತಿಗೆ ಮಾನವೀಯ ಮೌಲ್ಯಗಳನ್ನು ತಲುಪಿಸುವುದು. ಇಂತಹ ಉದಾತ್ತ ಗುರಿಯನ್ನು ಸಾಧಿಸಲು, ನಮ್ಮ ನೈತಿಕ ಜವಾಬ್ದಾರಿಯ ಅರಿವಿನೊಂದಿಗೆ ಅತ್ಯಂತ ಸಂತೋಷ ಮತ್ತು ಹೊಸ ಭರವಸೆಗಳಿಂದ ಈ ಸಂವತ್ಸರವನ್ನು ಬರಮಾಡಿಕೊಳ್ಳೋಣ.

ಮಾರ್ಚ್ ತಿಂಗಳು ನಮ್ಮ ರಾಜ್ಯ ಸಂಸ್ಥೆ ಅನೇಕ ಮಹತ್ವಪೂರ್ಣ ಸಾಧನೆಗಳನ್ನು ದಾಖಲಿಸುವ ಮಾಸವಾಗಿದೆ. ಈ ಶೈಕ್ಷಣಿಕ ವರ್ಷದಲ್ಲಿ 8 ಲಕ್ಷ ಗಣತಿಯ ಗುರಿಯೊಂದಿಗೆ ಪ್ರಾರಂಭವಾದ ನಮ್ಮ ಪ್ರಯತ್ನ ಶೇ. 95 ರಷ್ಟು ಅಂದರೆ, 7.8 ಲಕ್ಷ ಗಣತಿಯನ್ನು ಸಾಧಿಸಿ, ಸಾರ್ವಕಾಲಿಕ ದಾಖಲೆ ಮಾಡಲಾಗಿದೆ. ಇದರ ಪ್ರೇರಣೆಯೊಂದಿಗೆ ಮುಂಬರುವ ವರ್ಷದಲ್ಲಿ 10 ಲಕ್ಷ ಗಣತಿ ಸಂಗ್ರಹದ ಗುರಿಯೊಂದಿಗೆ ನಾವು ಇದೇ ರೀತಿಯ ಯಶಸ್ಸು ಕಾಣುವ ಭರವಸೆ ನನಗಿದೆ.

ರಾಜ್ಯ ಪುರಸ್ಕಾರ ಪರೀಕ್ಷೆಗಳಲ್ಲಿ ಭಾಗವಹಿಸಿದ 10 ಸಾವಿರ ಕಬ್ಸ್ ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಲ್ಲಿ 7 ಸಾವಿರ ಮಕ್ಕಳು ರಾಜ್ಯ ಪುರಸ್ಕಾರಕ್ಕೆ ಅರ್ಹರಾಗಿದ್ದು, ಇದು ಮತ್ತೊಂದು ದಾಖಲೆಯನ್ನು ಸೃಷ್ಟಿಸಿದೆ. ಈ ಬಾರಿ ನಡೆದ ರಾಜಭವನದ ಕಾರ್ಯಕ್ರಮವೂ ಸಹ ಕೆಲವು ಪ್ರಥಮಗಳಿಗೆ ಸಾಕ್ಷಿಯಾಗಿದೆ. ಕಾರ್ಯಕ್ರಮದ ಆಯೋಜನಗೆ ನಮಗೆ ಸಿಕ್ಕಿದ ಕೇವಲ 7 ದಿನಗಳ ಕಾಲಾವಧಿಯಲ್ಲಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಯಿತು.

ಪ್ರತಿ ವರ್ಷ ಒಂದು ಗಂಟೆ ಅವದಿಗೆ ಸೀಮಿತವಾಗುತಿದ್ದ ರಾಜಭವನದ ಕಾರ್ಯಕ್ರಮ ಈ ಬಾರಿ ಒಂದೂವರೆ ಗಂಟೆ ಅವದಿಯವರೆಗೆ ನಡೆಸಲು ಅನುಮತಿಸಿ, ರಾಜ್ಯ ಸಂಸ್ಥೆಗೆ ಹೆಚ್ಚುವರಿ ಮುಖ್ಯ ಆಯುಕ್ತರಾಗಲು ಸಮ್ಮತಿಸಿದ ಈ ಚಳುವಳಿಯ ಪ್ರೋತ್ಸಾಹಕರು ಮತ್ತು ರಾಷ್ಟ್ರಪತಿ ಸ್ಕೌಟ್ ಆಗಿರುವ ಕರ್ನಾಟಕ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಅವರು ಈ ಸಮಾರಂಭದಲ್ಲಿಯೇ ಗೌರವಾನ್ವಿತ ರಾಜ್ಯಪಾಲರಿಂದ ನೇಮಕ ಪತ್ರ ಸ್ವೀಕರಿಸಿದರು. ಪ್ರತಿಯೊಂದು ಜಿಲ್ಲೆಯಿಂದ ನಿಗದಿತ ಸಂಖ್ಯೆಯ ಮಕ್ಕಳ ನಿಯೋಜನೆ, ಪ್ರಥಮ ಬಾರಿಗೆ ಹಲವು ಜಿಲ್ಲೆಗಳ ಮುಖಂಡರುಗಳು, ಪದಾಧಿಕಾರಿಗಳು, ಶಿಕ್ಷಕರು ಹಾಗೂ ಮಕ್ಕಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ನಮ್ಮ ಚಳುವಳಿಯ ಮಹತ್ವವನ್ನು ಮತ್ತಷ್ಟು ಪುನರುಚ್ಚರಿಸಿತು. ಇಂತಹ ಹಲವು ಮಹತ್ವಪೂರ್ಣ ಬೆಳವಣಿಗೆಗಳಿಗೆ ಸಾಕ್ಷಿಯಾದ ಈ ಸಾಲಿನ ರಾಜ್ಯ ಪುರಸ್ಕಾರ ಸಮಾರಂಭ ಸ್ಕೌಟ್ ಗೈಡ್ ಚಳವಳಿಯ ಪ್ರಗತಿಯನ್ನು ಮತ್ತು ಸಂಸ್ಥೆಯ ಭವಿಷ್ಯದ ಬಲವನ್ನು ಪ್ರದರ್ಶಿಸಿದೆ.

ಗೌರವಾನ್ವಿತ ರಾಜ್ಯಪಾಲರ ಮತ್ತು ಮಾನ್ಯ ಸಭಾಧ್ಯಕ್ಷರ ಭಾಷಣ ಸಭೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರೋತ್ಸಾಹ ಹಾಗೂ ಹೊಸ ಆತ್ಮವಿಶ್ವಾಸವನ್ನು ಮೂಡಿಸಿತು. ಪೋಷಕರಲ್ಲಿ ಚಳುವಳಿ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಿತು. ಗೌರವಾನ್ವಿತ ರಾಜ್ಯಪಾಲರಿಗೆ ಮತ್ತು ಶ್ರೀ ಯು.ಟಿ. ಖಾದರ್ ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಯು.ಟಿ. ಖಾದರ್ ಅವರು ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ನಮ್ಮ ರಾಜ್ಯ ಸಂಸ್ಥೆಗೆ ದೊಡ್ಡ ಬಲವನ್ನು ನೀಡಿದೆ. ಅವರ ನೇಮಕಕ್ಕೆ ಅನುಮೋದನೆ ನೀಡಿದ ರಾಷ್ಟ್ರ ಸಂಸ್ಥೆಗೆ ಹಾಗೂ ಸಹಮತ ವ್ಯಕ್ತಪಡಿಸಿದ ರಾಜ್ಯ ಸಂಸ್ಥೆಯ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸಮಾರಂಭದಲ್ಲಿ ಭಾಗವಹಿಸಬೇಕಾಗಿದ್ದ, ಮಾನ್ಯ ಸಚಿವರುಗಳಾದ ಡಾ. ಎಂ.ಸಿ. ಸುಧಾಕರ್ ಮತ್ತು ಶ್ರೀ ಮಧು ಬಂಗಾರಪ್ಪ ಅವರು ಅಧಿವೇಶನದ ಹಿನ್ನೆಲೆಯಲ್ಲಿ, ಭಾಗವಹಿಸಲು ಸಾಧ್ಯವಾಗದಿದ್ದರೂ ನಮ್ಮ ಸಂಸ್ಥೆಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಅವರಿಗೂ ನಾನು ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಈ ವರ್ಷ ತರಬೇತಿಯಲ್ಲಿ ಸಾಧಿಸಿರುವ ದಾಖಲೆಗಳು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ನಮ್ಮೆಲ್ಲರ ಸಂಘಟಿತ ಪ್ರಯತ್ನದಿಂದಾಗಿ ಇವೆಲ್ಲ ಸಾಧನೆ ಮತ್ತು ಯಶಸ್ಸುಗಳು ಸಾಧ್ಯವಾಗಿವೆ. ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು, ಶಿಕ್ಷಕರು, ಮಕ್ಕಳ ಆಸಕ್ತಿ, ನಮ್ಮ ಸಂಸ್ಥೆಯ ಸಿಬ್ಬಂದಿಯ ಶ್ರಮ ವಿಶೇಷವಾಗಿ ಸರ್ಕಾರ ಮತ್ತು ಶಿಕ್ಷಣ ಇಲಾಖೆಯ ಸಹಕಾರ, ಪ್ರೋತ್ಸಾಹಗಳು ಇದಕ್ಕೆ ಪೂರಕವಾಗಿವೆ. ಇವೆಲ್ಲಾ ಸಾಧನೆಗಳ ಪ್ರೇರಣೆಯೊಂದಿಗೆ ಮುಂದಿನ ದಿನಗಳಲ್ಲಿ ನಮ್ಮ ಸಂಸ್ಥೆ ಇನ್ನಷ್ಟು ಸಾಧನೆ ಮಾಡಬಹುದೆಂಬ ಆತ್ಮವಿಶ್ವಾಸ ನನಗಿದೆ.

ರಾಜ್ಯ ಸಂಸ್ಥೆಯು ಈ ತಿಂಗಳಲ್ಲಿ ಹಲವು ಶಿಬಿರಗಳು ಮತ್ತು ತರಬೇತಿಗಳನ್ನು ಆಯೋಜಿಸಿದೆ. ಅವುಗಳಲ್ಲಿ ಪ್ರಮುಖವಾಗಿ, ದೊಡ್ಡಬಳ್ಳಾಪುರದಲ್ಲಿ ಆಯುಕ್ತರ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ ಹಾಗೂ ಮುಂದುವರೆದ ತರಬೇತಿ ಶಿಬಿರ ಸಂಘಟಿತಗೊಂಡು ಆಯುಕ್ತರುಗಳ ಪರಿಣಿತಿಯನ್ನು ವೃದ್ಧಿಸುವಲ್ಲಿ ಯಶಸ್ವಿಯಾಗಿದೆ. ಹಾಸನ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಹಾಸನದಲ್ಲಿ ನಡೆದ ರೋವರ್ಸ್ ಮತ್ತು ರೇಂಜರ್ಸ್‌ಗಳ ರಾಜ್ಯಮಟ್ಟದ ಐತಿಹಾಸಿಕ ಸ್ಥಳಗಳ ವೀಕ್ಷಣೆ ಮತ್ತು ಮಾಹಿತಿ ಶಿಬಿರ ಶಿಬಿರಾರ್ಥಿಗಳಿಗೆ ಆಕರ್ಷಕ ಮಾಹಿತಿಗಳನ್ನು ಒದಗಿಸಿದೆ. ಉಡುಪಿ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಕುಂದಾಪುರದಲ್ಲಿ ನಡೆದ ಪ್ರಕೃತಿ ಅಧ್ಯಯನ ಶಿಬಿರ, ಪರಿಸರದ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿದೆ. ಕಡಲ ತೀರದ ಜೀವವೈವಿಧ್ಯ ಮತ್ತು ಪರಿಸರವನ್ನು ಗುರುತಿಸಲು ಆಯೋಜಿಸಲಾಗಿದ್ದ ರಾಷ್ಟ್ರಮಟ್ಟದ ಕಡಲತೀರದ ಚಾರಣ ಶಿಬಿರ ಉತ್ತಮವಾಗಿತ್ತು. ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಪಿಳಕುಳದಲ್ಲಿ ನಡೆದ SDGಗಳ ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಯುವಕರಲ್ಲಿ ಉತ್ತಮ ಅರಿವು ಮೂಡಿಸಿತು.

ನಾವು ಪ್ರತಿವರ್ಷ ನಡೆಸಿಕೊಂಡು ಬಂದಿರುವ ಬೇಸಿಗೆ ಶಿಬಿರಗಳು ಅರ್ಥಪೂರ್ಣವಾಗುತ್ತಿವೆ. ರಾಜ್ಯದ ಹಲವು ಕಡೆಗಳಲ್ಲಿ ಈ ವರ್ಷದ ಬೇಸಿಗೆ ಶಿಬಿರಗಳು ಪ್ರಾರಂಭಗೊಂಡಿರುವುದು ಸಂತೋಷದ ವಿಚಾರ. ಇವುಗಳಿಗೆಲ್ಲ ಸಹಕರಿಸುತ್ತಿರುವ ಪ್ರತಿಯೊಂದು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳಿಗೆ, ದಾನಿಗಳಿಗೆ, ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರುಗಳಿಗೆ/ ಆಡಳಿತ ಮಂಡಳಿಗಳಿಗೆ ಧನ್ಯವಾದಗಳು. ರಾಜ್ಯ ಸಂಸ್ಥೆಯಿಂದ ಹಾಗೂ ವೈಯಕ್ತಿಕವಾಗಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಪರೀಕ್ಷೆಗಳನ್ನು ಬರೆದಿರುವ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಹಾರ್ದಿಕ ಶುಭಾಶಯಗಳು.

**ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# 2025 ಏಪ್ರಿಲ್ ತಿಂಗಳ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ವಿವರಗಳು |
|---|---|
| 1. | ರಾಜ್ಯದಾದ್ಯಂತ ದಳ ಹಂತದಿಂದ ರಾಜ್ಯ ಹಂತದವರೆಗೆ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಬೇಸಿಗೆ ಶಿಬಿರಗಳ ಸಂಘಟನೆ |
| 2. | ರಾಜ್ಯ ಮಟ್ಟದ ಸ್ವಿಮ್ಮಿಂಗ್ ಶಿಬಿರ- ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು (ಈಜು ತರಬೇತಿಯನ್ನು ಬಸವನಗುಡಿ ಅಕ್ವಾಟಿಕ್ ಈಜು ಕೊಳದಲ್ಲಿ ನೀಡಲಾಗುವುದು.) |
| 3. | ರೋವರ್ಸ್-ರೇಂಜರ್ಸ್‌ಗಳ ಸೇವಾ ಶಿಬಿರ ಡಾ॥ ಅನಿಬೆಸೆಂಟ್ ಮತ್ತು ಕೂಂಡಜ್ಜಿ ತರಬೇತಿ ಕೇಂದ್ರಗಳಲ್ಲಿ |
| 4. | ತೋಟಗಾರಿಕೆ, ಯೋಗ ಮತ್ತು ಕೃಷಿ ಮಾಹಿತಿ ತರಬೇತಿ ಶಿಬಿರಗಳು- 20 ಜಿಲ್ಲೆಗಳಲ್ಲಿ |
| 5. | ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರಗಳು-ದಕ್ಷಿಣ ಕನ್ನಡ/ ಕಾರವಾರ ಜಿಲ್ಲೆಗಳಲ್ಲಿ |
| 6. | ಏರ್ ಸ್ಕೌಟಿಂಗ್ ಬೇಸಿಗೆ ಶಿಬಿರ- ಹೆಚ್.ಎ.ಎಲ್, ಬೆಂಗಳೂರು |
| 7. | ತಂತ್ರಾಂಶ ಯೋಜನಾ ಕಾರ್ಯಗಾರಗಳ ಸಂಘಟನೆ |
| 8. | ಎ.ಎಸ್.ಒ.ಸಿ, ಡಿ.ಒ.ಟಿ, ಡಿ.ಒ, ಎಸ್.ಜಿ.ವಿ, ಎಸ್.ಜಿ.ಎ ಗಳ ಸಭೆ ರಾಜ್ಯ ಕೇಂದ್ರ ಕಛರಿ, ಶಾಂತಿಗೃಹ, ಬೆಂಗಳೂರು |
| 9. | ವಿಶ್ವ ಜಲ ದಿನಾಚರಣೆ - 22.04.2025 |

## ಅಭಿನಂದನೆಗಳು



ಕೊಪ್ಪಳ ಜಿಲ್ಲೆ, ಗಂಗಾವತಿ ಎಸ್.ಕೆ.ಎನ್.ಜಿ. ಪ್ರಥಮ ದರ್ಜೆ ಕಾಲೇಜಿನ **ಕು॥ ಕಾಜಲ್.** ಮದರ್ ತೆರೇಸಾ ಮುಕ್ತದಳದ ಗೈಡ್ ಕ್ಯಾಪ್ಟನ್ ಇವರು 20 ಮತ್ತು 21 ಮಾರ್ಚ್ 2025 ರಂದು ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲ್ಲೂಕು, ತೆಕ್ಕಲಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ "ವಿಕಸಿತ ಭಾರತ ಯೂಥ್ ಪಾರ್ಲಿಮೆಂಟ್ 2024-25 ಶೈಕ್ಷಣಿಕ ವರ್ಷದ ಒನ್‌ನೇಷನ್ - ಒನ್ ಎಲೆಕ್ಷನ್" ಎಂಬ ವಿಷಯದ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ.



ಹಾವೇರಿಯ ಜಿ.ಎಚ್. ಕಾಲೇಜಿನಲ್ಲಿ ಇತ್ತೀಚೆಗೆ ನಡೆದ "ವಿಶ್ವ ರಂಗಭೂಮಿ ದಿನಾಚರಣೆ" ಸಂದರ್ಭದಲ್ಲಿ ರಾಜ್ಯ ಪುರಸ್ಕಾರ ರೋವರ್ **ಕು॥ ಗುರುನಂಜಪ್ಪ ಮ. ಕುಂಬಾರಿ** ಇವರಿಗೆ "ಯುವ ಗೌರವ ಪ್ರಶಸ್ತಿ" ನೀಡಿ ಗೌರವಿಸಲಾಗಿದೆ.

ಇವರುಗಳಿಗೆ ರಾಜ್ಯ ಸಂಸ್ಥೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.

-ರಾಜ್ಯ ಕಾರ್ಯದರ್ಶಿ

# ಸಂಪಾದಕೀಯ



ಮಾನ್ಯರೆ,

ಒಂದು ರಾಷ್ಟ್ರದ ಅಭಿವೃದ್ಧಿಯು, ಆ ರಾಷ್ಟ್ರವು ಹೊಂದಿರುವ ಪ್ರತಿ ವ್ಯಕ್ತಿಯ ಬಲಿಷ್ಠ ಯೋಚನಾ ಲಹರಿಯನ್ನು ಮತ್ತು ಶ್ರೇಷ್ಠ ನಡಾವಳಿಕೆಗಳನ್ನು ಮೈಗೂಡಿಸಿಕೊಂಡು ಕಾರ್ಯಾನುಷ್ಠಾನಗೊಳಿಸುವ ಜನಾಂಗದ ಆಧಾರದ ಮೇಲೆ ನಿರ್ಧಾರ ಆಗಿರುವುದು ದಿಟ. ಈ ದೃಷ್ಟಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಳುವಳಿಯು ವಿದ್ಯಾರ್ಥಿಗಳು ಉತ್ತಮ ಯೋಚನೆಗಳನ್ನು, ಶ್ರೇಷ್ಠ ಮಟ್ಟದ ನಡಾವಳಿಕೆಗಳನ್ನು ಮೈಗೂಡಿಸಿಕೊಳ್ಳುವಲ್ಲಿ ತನ್ನದೇ ಆದ ವಿಶಿಷ್ಠ, ವಿಶೇಷ ಮಾರ್ಗೋಪಾಯಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಾ, ಯಶಸ್ವಿಯಾಗಿ ಮುನ್ನಡೆಯುತ್ತಿರುವುದು ಅಭಿನಂದನಾರ್ಹ. ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವವರ ಆಸಕ್ತಿಗಳನ್ನು ಆಧರಿಸಿ, ವಿವಿಧ ಚಟುವಟಿಕಗಳ ಪ್ರಗತಿಪರ ಶಿಕ್ಷಣ ಕ್ರಮಗಳು ಮತ್ತು ಅವುಗಳ ಉತ್ತೇಜಕ ಕಾರ್ಯಚಟುವಟಿಕೆಗಳು, ಕಾರ್ಯಕ್ರಮಗಳ ನಿರ್ವಹಣೆ ಮೂಲಕ ಅವರುಗಳ ಜ್ಞಾನ, ಕೌಶಲ್ಯ, ನಡಾವಳಿಕೆ ಮತ್ತು ಸೇವಾ ಸಾಮರ್ಥ್ಯಗಳನ್ನು ಗುರುತಿಸಿ, ಪ್ರೋತ್ಸಾಹಿಸುವುದು ಈ ಚಳುವಳಿಯ ಅನುಷ್ಠಾನದ ವಿಧಾನಗಳಲ್ಲಿ ಒಂದು ಬಹು ಮುಖ್ಯ ಕ್ರಮ ಆಗಿರುವುದು. ಪ್ರತಿ ವರ್ಷ ಗೌರವಾನ್ವಿತ ರಾಜ್ಯಪಾಲರ ಘನ ಉಪಸ್ಥಿತಿಯಲ್ಲಿ, ಅವರಿಂದ ವಿತರಣೆ ಆಗುತ್ತಿರುವ ರಾಜ್ಯಪುರಸ್ಕಾರ ಪ್ರಮಾಣ ಪತ್ರಗಳ ವಿತರಣಾ ಸಮಾರಂಭವು ತನ್ಮೂಲಕ ವಿದ್ಯಾರ್ಥಿಗಳಲ್ಲಿ ನಿರೀಕ್ಷಿತ ಸರ್ವಾಂಗೀಣ ಅಭಿವೃದ್ಧಿ ಆಗಿರುವುದನ್ನು ಪ್ರೋತ್ಸಾಹಿಸಿ, ಅವರುಗಳು ರಾಷ್ಟ್ರದ ಸತ್ಪ್ರಜೆ ಆಗುವಲ್ಲಿ ಶ್ರಮಿಸಲು ಉತ್ತೇಜಿಸುವ ಕ್ರಮ ಆಗಿರುವುದು.

ಮಾರ್ಚ್ 17 ರಂದು ಗಾಜಿನ ಮನೆ, ರಾಜಭವನ, ಬೆಂಗಳೂರು ಇಲ್ಲಿ ಏರ್ಪಟ್ಟ ರಾಜ್ಯಪುರಸ್ಕಾರ ಸಮಾರಂಭದಲ್ಲಿ 9500ಕ್ಕು ಹೆಚ್ಚು ವಿದ್ಯಾರ್ಥಿಗಳು ಈ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ಕಬ್ಸ್–ಬುಲ್‌ಬುಲ್ಸ್ ರಾಜ್ಯಪುರಸ್ಕಾರ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಗೌರವಾನ್ವಿತ ರಾಜ್ಯಪಾಲರಿಂದ ಪಡೆಯುವಂತೆ ಆಗಿರುವುದು ತುಂಬಾ ಹೆಮ್ಮೆಯ ವಿಷಯ ಆಗಿರುವುದು. ಇದರಿಂದ ಈ ರಾಜ್ಯಪುರಸ್ಕಾರ ಪ್ರಶಸ್ತಿ ಪಡೆದವರೆಲ್ಲರಿಗೂ ಅತ್ಯಾನಂದ ಆಗಿರುವುದಲ್ಲದೆ, ತನ್ಮೂಲಕ ಅವರ ಜವಾಬ್ದಾರಿಯುತ ಸಜ್ಜನಿಕೆಯ ನಡಾವಳಿಕೆ ಬಗ್ಗೆಯೂ ಆದ್ಯ ಗಮನ ಹರಿಸುವ ಅವಶ್ಯಕತೆಯನ್ನೂ ಹೆಚ್ಚಿಸಿದೆ ಎಂಬುದು ನಿರ್ವಿವಾದ.

ಶ್ರೇಷ್ಠ, ಸಧೃಡ ಯುವ ಜನಾಂಗವನ್ನು ಹೊಂದುವಲ್ಲಿ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ. ಪಿ.ಜಿ.ಆರ್. ಸಿಂಧ್ಯರವರ ಮಾರ್ಗದರ್ಶನದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಚಳುವಳಿಯ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು, ಜಾಂಬೂರಿ, ಜಾಂಬೂರೇಟ್ ಮುಂತಾದವುಗಳು ಸಮರ್ಪಕವಾಗಿ ಸಾರ್ಥಕವಾಗಿ ನಿರ್ವಹಣೆ ಆಗುತ್ತಿರುವ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಗೌರವಾನ್ವಿತ ರಾಜ್ಯಪಾಲರು ತಮ್ಮ ಸಂಪೂರ್ಣ ಸಲಹೆ, ಸಹಕಾರ, ಪ್ರೋತ್ಸಾಹ ಈ ಚಟುವಳಿಯ ಯಶಸ್ವಿ ನಿರ್ವಹಣೆಗೆ ಇರುವುದನ್ನು ತಿಳಿಸಿರುವುದು ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿರುವುದು.

ಇದೇ ಸಂಧರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸನ್ಮಾನ್ಯ ಶ್ರೀ. ಯು.ಟಿ. ಖಾದರ್, ವಿಧಾನ ಸಭಾಧ್ಯಕ್ಷರು (ಸ್ಪೀಕರ್), ಕರ್ನಾಟಕ ಸರ್ಕಾರ ಇವರು ನಮ್ಮ ಸಂಸ್ಥೆಯ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರಾಗಿ ಮಾರ್ಗದರ್ಶನ ನೀಡಲು ಸಮ್ಮತಿಸಿ, ಸೇರ್ಪಡೆ ಹೊಂದಿರುವುದು ನಮ್ಮ ಸಂಸ್ಥೆಯ ಹೆಮ್ಮೆದಾಯಕ ವಿಷಯ ಆಗಿರುವುದು, ಅವರನ್ನು ರಾಜ್ಯ ಸಂಸ್ಥೆಯ ಪರವಾಗಿ ಅತ್ಯಂತ ಆಧರಾಭಿಮಾನದಿಂದ ಸ್ವಾಗತಿಸಲು ಹರ್ಷಿಸುತ್ತೇನೆ.

ಸಮಾಜದ ಶ್ರೇಯಸ್ಕರ ಸೇವಾ ಕ್ಷೇತ್ರಗಳಲ್ಲಿ, ರಾಜಕೀಯ ಸೇವಾ ಕ್ಷೇತ್ರ ಇತರೆ ಎಲ್ಲಾ ಸೇವಾ ಕ್ಷೇತ್ರಗಳಿಗಿಂತ ಹೆಚ್ಚು ಪ್ರಭಾವ ಮತ್ತು ಪರಿಣಾಮಕಾರಿ ಆಗಿರುವುದನ್ನು ಅವರು ಸ್ಪಷ್ಟಪಡಿಸಿ, ತಮ್ಮ ಎಲ್ಲ ಶ್ರೇಯಸ್ಕರ ಸಮಾಜ ಸೇವಾ ಕಾರ್ಯಚಟುವಟಿಕೆಗಳಿಗೆ, ಚಿಕ್ಕಂದಿನಿಂದಲೂ ತಮ್ಮನ್ನು ತಾವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದೇ ಮೂಲ ಪ್ರೇರಣೆ ಎಂದು ಹೆಮ್ಮೆಯಿಂದ ಅವರು ತಿಳಿಸಿರುವುದು ನಮಗೆಲ್ಲಾ ತುಂಬಾ ಹರ್ಷವನ್ನುಂಟು ಮಾಡಿದೆ.

ಈ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ಪ್ರದಾನ ಸಮಾರಂಭವು ಯಶಸ್ವಿಯಾಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿದ ಸರ್ವರಿಗೂ ಆದರದ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಜಿಲ್ಲಾ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಏರ್ಪಟ್ಟ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಬಹಳ ಅರ್ಥಗರ್ಭಿತವಾಗಿ ನಿರ್ವಹಣೆ ಆಗಿರುವುದು ಅಭಿನಂದನಾರ್ಹ. ಮಾರ್ಚ್ ತಿಂಗಳಲ್ಲಿ ಏರ್ಪಡಿಸಲ್ಪಟ ಇತರೆ ಅನೇಕ ತರಬೇತಿಗಳು, ಚಟುವಟಿಕೆಗಳು ಸಮರ್ಪಕವಾಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿ, ಯಶಸ್ವಿಗೊಳಿಸಿದ ಸರ್ವರಿಗೂ ಅನಂತಾನಂತ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

All time Record ಆಗಿ 2024–25ರ ನಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಗಣತಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ ನಿರಂತರ ಪ್ರೇರಣಾತ್ಮಕ ಮಾರ್ಗದರ್ಶನದಿಂದಾಗಿ 7.67 ಲಕ್ಷ ಮೀರಿದ್ದು, ಗುರಿಯ 96%ಕ್ಕು ಹೆಚ್ಚು ಸಾಧನೆ ಆಗಿರುವುದರಲ್ಲಿ ಅವರ ಮತ್ತು ಭಾಗಿದಾರರುಗಳೆಲ್ಲರ ಶ್ರಮ ಅವರ್ಣನೀಯ, ಅವರುಗಳೆಲ್ಲರಿಗೂ ಅತ್ಯಂತ ಆದರಣೀಯ ಅಭಿನಂದನೆಗಳನ್ನು ತಿಳಿಸುತ್ತಾ, ಮುಂಬರುವ ವರ್ಷಗಳಲ್ಲೂ ಇಂತಹ ಸಾಧನೆಗಳು ಹೆಚ್ಚಾಗಿ ನಿಜವಾದ ಅರ್ಥದಲ್ಲಿ ಸ್ಕೌಟ್ಸ್–ಗೈಡ್ಸ್ ಚಳುವಳಿ ತನ್ನ ಸಾರ್ಥಕತೆಯನ್ನು ಪಡೆಯುವಂತಾಗಲು ಶ್ರಮಿಸಬೇಕಾಗಿ ವಿನಂತಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ಚಳುವಳಿಯ ಕಾರ್ಯ ಚಟುವಟಿಕೆಗಳನ್ನು ಹಸಿರಾಗಿಸುವಲ್ಲಿ, ಸಕ್ರಿಯಗೊಳಿಸುವಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಮಾರ್ಚ್ 2025 ಅಂತ್ಯದಿಂದ ಮೇ 2025ರ ವರೆಗೆ ಏರ್ಪಡಿಸಬೇಕಾದ ಬೇಸಿಗೆ ಶಿಬಿರಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲು ಸರ್ವರಲ್ಲೂ ವಿನಂತಿಸುತ್ತೇನೆ.

ಒಟ್ಟಿಲ್ಲಿ ಮಾರ್ಚ್ 2025ರ ಎಲ್ಲಾ ಕಾರ್ಯಕ್ರಮಗಳು ಚಟುವಟಿಕೆಗಳು ತರಬೇತಿಗಳು, ಸಮರ್ಪಕವಾಗಿ ನಿರ್ವಹಣೆ ಆಗಿ ಯಶಸ್ವಿಗೊಳಿಸುವಲ್ಲಿ ಸಲಹೆ, ಸಹಕಾರ, ಮಾರ್ಗದರ್ಶನ ನೀಡಿದ ಸರ್ವರಿಗೂ ಮತ್ತೊಮ್ಮೆ ನನ್ನ ಕೃತಜ್ಞತೆಗಳನ್ನು ಈ ಮೂಲಕ ತಿಳಿಸಲು ಹರ್ಷಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮಾರ್ಚ್ 08 ರಂದು ರಾಜ್ಯ ಮಟ್ಟದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೈಸೂರು ಜಿಲ್ಲಾ ಸಂಸ್ಥೆಯ ಸಹಕಾರದೊಂದಿಗೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮೈಸೂರು, ಆವರಣದಲ್ಲಿ ಆಚರಿಸಲಾಯಿತು. ಬೆಳಿಗ್ಗೆ 9.30 ಗಂಟೆಗೆ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥಅವರು ದೀಪವನ್ನು ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು, ರಾಜ್ಯ ಆಯುಕ್ತರು (ಗೈಡ್ಸ್) ಶ್ರೀಮತಿ ಗೀತಾನಟರಾಜ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ಪುಷ್ಪವಲ್ಲಿರವರು ಎಲ್ಲರನ್ನೂ ಸ್ವಾಗತಿಸಿದರು. ರಾಜ್ಯ ಸಹಾಯಕ ಆಯುಕ್ತರು (ಗೈಡ್) ಶ್ರೀಮತಿ ರಾಧಾ ವೆಂಕಟೇಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹತ್ವ ವಿವರಿಸಿದರು. ಡಾ॥ ವಿಜಯಕುಮಾರ್, ಮಾನ್ಯ ಉಪಕುಲಪತಿಗಳು, ಯೆನೆಪೋಯ ವಿಶ್ವವಿದ್ಯಾಲಯ, ಮಂಗಳೂರು ಹಾಗೂ ನಿವೃತ್ತ ನಿರ್ದೇಶಕರು, ಕಿದ್ವಾಯಿ ಆಸ್ಪತ್ರೆ, ಬೆಂಗಳೂರು, ಇವರು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಆನ್‌ಲೈನ್ ಜೂಮ್ ಮಿಟಿಂಗ್ ಮೂಲಕ ಭಾಗವಹಿಸಿ ಮಹಿಳೆಯರನ್ನು ಕಾಡುತ್ತಿರುವ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರಗಳ ಬಗ್ಗೆ ಹಾಗೂ ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳ ಬಗ್ಗೆ ವಿವರಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ಅವರು ಹಾಗೂ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್ ಅವರು ವಂದನಾರ್ಪಣೆ ಸಲ್ಲಿಸಿದರು. ಭೋಜನದ ನಂತರ ಮಹಿಳಾ ಸಾಧಕಿಯರ ಕುರಿತು ವಯಸ್ಕ ನಾಯಕಿಯರಿಗೆ ರಸಪ್ರಶ್ನೆ ಹಾಗೂ ಮಹಿಳಾ ಸಬಲೀಕರಣದ ಬಗ್ಗೆ ಚರ್ಚಾ ಸ್ಪರ್ಧೆಯನ್ನು ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಮೆಹಂದಿ ಮತ್ತು ರಂಗೋಲಿ ಸ್ಪರ್ಧೆಗಳನ್ನೂ ಏರ್ಪಡಿಸಲಾಗಿತ್ತು. ಪರಮಪೂಜ್ಯ ಶ್ರೀ ಸುತ್ತೂರು ಮಠದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ, ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಯು.ಟಿ. ಖಾದರ್, ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆ ಮತ್ತು ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು. ಶ್ರೀ ಪಿ. ವಿಶ್ವನಾಥರವರು ಬಂದ ಅತಿಥಿಗಳನ್ನು ಸ್ವಾಗತಿಸಿದರು – ಸಭೆಯಲ್ಲಿ ಶ್ರೀಮತಿ ಟಿ.ಕೆ. ಅನುರಾಧ ನಿವೃತ್ತ ವಿಜ್ಞಾನಿ, ಇಸ್ರೋ ಬೆಂಗಳೂರು ಇವರನ್ನು ಸನ್ಮಾನಿಸಲಾಯಿತು. ಶ್ರೀಮತಿ ಪುಷ್ಪಲತಾ ಜಗನ್ನಾಥ್, ಜಿಲ್ಲಾ ಉಪಾಧ್ಯಕ್ಷರು ವಂದನಾರ್ಪಣೆಯನ್ನು ಸಮರ್ಪಿಸಿದರು. ರಾಜ್ಯದ 14 ಜಿಲ್ಲೆಗಳಿಂದ 215 ಮಹಿಳಾ ಪದಾಧಿಕಾರಿಗಳು, ದಳನಾಯಕಿಯರು, ರೇಂಜರ್ಸ್‌ಗಳು ಸಕ್ರಿಯವಾಗಿ ಭಾಗವಹಿಸಿ, ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.








### ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳ

## ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ

ರಾಜ್ಯ ಸಂಸ್ಥೆಯಿಂದ ಮಾರ್ಚ್ 17 ರಂದು ರಾಜಭವನ, ಗಾಜಿನಮನೆ, ಬೆಂಗಳೂರಿನಲ್ಲಿ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಕ್ ಬುಲ್‌ಬುಲ್ಸ್, ರಾಜ್ಯಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿಪತ್ರ ಪ್ರದಾನ ಸಮಾರಂಭವನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ನೆರವೇರಿಸಲಾಯಿತು.

ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹದಲ್ಲಿ ಧ್ವಜಾರೋಹಣದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜಭವನದ ಸಮಾರಂಭದಲ್ಲಿ ಶಿಸ್ತಿನಿಂದ ಭಾಗವಹಿಸುವುದು, ಸಮವಸ್ತ್ರದ ಪರಿಶೀಲನೆ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ನಂತರ ಆಯಾಯ ಜಿಲ್ಲೆಗಳ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಘನತೆವೆತ್ತ ರಾಜ್ಯಪಾಲರಿಂದ ಪ್ರಶಸ್ತಿ ಸ್ವೀಕರಿಸುವ ವಿಧಾನದ ಅಂಶಗಳನ್ನು ಪ್ರಾಯೋಗಿಕವಾಗಿ ಅಭ್ಯಾಸ ಮಾಡಿಸಲಾಯಿತು.

ಸಂಜೆ 4 ಗಂಟೆಗೆ ಸರಿಯಾಗಿ ಗಾಜಿನಮನೆ, ರಾಜಭವನದಲ್ಲಿ ರಾಜ್ಯಪುರಸ್ಕಾರ ಪ್ರಶಸ್ತಿ ಪ್ರಧಾನ ಸಮಾರಂಭ ಪ್ರಾರಂಭವಾಯಿತು. ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ ಹಾಗೂ ಪೋಷಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಹಾಗೂ ಕರ್ನಾಟಕ ವಿಧಾನಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಮಾನ್ಯ ಶ್ರೀ ಯು.ಟಿ ಖಾದರ್ ಇವರುಗಳನ್ನು ಕೆ.ಎಸ್.ಆರ್.ಪಿ ಬ್ಯಾಂಡ್ ವೃಂದದವರ ರಾಷ್ಟ್ರಗೀತೆಯೊಂದಿಗೆ ಸ್ವಾಗತಿಸಲಾಯಿತು. ರಾಜ್ಯದ 35 ಜಿಲ್ಲೆಗಳಿಂದ ಆಗಮಿಸಿದ ಎಲ್ಲಾ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್, ದಳನಾಯಕರು, ಪೋಷಕರುಗಳು ಹಾಗೂ ಜಿಲ್ಲಾ ಮತ್ತು ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಘನ ವಂದನೆ ನೀಡುವ ಮೂಲಕ ಗೌರವಿಸಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಇವರು ಅತಿಥಿ ಗಣ್ಯರು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸರ್ವರನ್ನು ಸ್ವಾಗತಿಸಿದರು. ನಂತರ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ 2024–25ನೇ ಸಾಲಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯದ ಸಾಧನೆಗಳು, ಗಣತಿ, ವಿಶೇಷ ಚಟುವಟಿಕೆಗಳು, ಕಾರ್ಯಕ್ರಮಗಳು ಮತ್ತು ತರಬೇತಿಗಳ ಬಗ್ಗೆ ಪ್ರಾಸ್ತಾವಿಕ ನುಡಿಗಳಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಹಾಗೂ ಸಭೆಯ ಗಮನಕ್ಕೆ ಸಂಕ್ಷಿಪ್ತವಾಗಿ ವಿವರಿಸಿದರು.



ಇದೇ ಸಂದರ್ಭದಲ್ಲಿ ವಿಶೇಷವಾಗಿ ಶ್ರೀ ಯು.ಟಿ. ಖಾದರ್, ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ ಇವರನ್ನು ರಾಜ್ಯ ಸಂಸ್ಥೆಯ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರನ್ನಾಗಿ ನಿಯುಕ್ತಿಗೊಳಿಸಿ, ಅವರಿಗೆ ಅಭಿನಂದನಾಪತ್ರ ಮತ್ತು ಪದಕ ನೀಡುವುದರ ಮೂಲಕ ಗೌರವಾನ್ವಿತ ರಾಜ್ಯಪಾಲರು ಮತ್ತು ರಾಜ್ಯ ಮುಖ್ಯ ಆಯುಕ್ತರು ಸಂಸ್ಥೆಗೆ ಸೇರ್ಪಡೆಗೊಳಿಸಿದರು.

ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್) ಇವರಿಗೆ ಇತ್ತೀಚೆಗೆ ವಿಶ್ವಮಟ್ಟದ ಅತ್ಯುನ್ನತ ಪ್ರಶಸ್ತಿಯಾದ **'BRONZE WOLF'** World Organization of the Scout Movement ನಿಂದ ನೀಡಲ್ಪಟ್ಟಿತು. ಈ ಪ್ರಶಸ್ತಿಗೆ ಭಾಜನರಾದ ಶ್ರೀ ಎಂ.ಎ. ಖಾಲಿದ್ ಅವರನ್ನು ಸಮಾರಂಭದಲ್ಲಿ ರಾಜ್ಯಪಾಲರ ಮೂಲಕ ಅಭಿನಂದಿಸಿ ಗೌರವಿಸಲಾಯಿತು. ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು(ಗೈ) ಮತ್ತು ಡಾ॥ ಮುಕ್ತಾ ಕಾಗಲಿ, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು(ಗೈ) ಇವರುಗಳು ಅಭಿನಂದನಾ ಪತ್ರಗಳನ್ನು ಓದಿದರು.



ರಾಜ್ಯದ 35 ಜಿಲ್ಲೆಗಳಿಂದ ಒಟ್ಟು 9500 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮತ್ತು ರೋವರ್ಸ್, ರೇಂಜರ್ಸ್‌ಗಳು ಪ್ರಶಸ್ತಿ ಪಡೆದಿದ್ದು, ಇವರುಗಳ ಪರವಾಗಿ 53 ಕಬ್ಸ್, 115 ಸ್ಕೌಟ್ಸ್, 56 ರೋವರ್ಸ್, 68 ಬುಲ್‌ಬುಲ್ಸ್, 98 ಗೈಡ್ಸ್, 56 ರೇಂಜರ್ಸ್, 88 ದಳನಾಯಕರುಗಳು, 165 ಪೋಷಕರು ಹಾಗೂ ಇತರ ಪದಾಧಿಕಾರಿಗಳು ಸೇರಿ ಒಟ್ಟು 800 ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಇವರುಗಳಿಗೆ ಜಿಲ್ಲಾವಾರು & ವಿಭಾಗವಾರು ಗೌರವಾನ್ವಿತ ರಾಜ್ಯಪಾಲರು ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದಿಸಿ ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆಗೆ ಶುಭವನ್ನು ಹಾರೈಸಿದರು. ದೇಶಭಕ್ತಿ, ಶಿಸ್ತು ಮತ್ತು ಸಂಸ್ಕೃತಿಯಿಂದ ಯುವಜನತೆ ಅಭಿವೃದ್ಧಿ ಹೊಂದುತ್ತಿದ್ದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯದ ಪ್ರಗತಿಯು ವಿಶೇಷವಾಗಿ ಹೊರಹೊಮ್ಮಿದೆ. ರಾಜ್ಯ ಸಂಸ್ಥೆ ಮಾಡಿರುವ ಸಾಧನೆ ಪ್ರಶಂಸನೀಯ ಎಂದು ಸಂಸ್ಥೆಯನ್ನು ಅಭಿನಂದಿಸಿ, ರಾಜ್ಯ ಮುಖ್ಯ ಆಯುಕ್ತರು ಮತ್ತು ಅವರ ತಂಡವನ್ನು ಶ್ಲಾಘಿಸಿದರು.

ವೇದಿಕೆಯಲ್ಲಿ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಉಪಸ್ಥಿತರಿದ್ದರು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸರ್ವರಿಗೂ ವಂದನೆಗಳನ್ನು ಸಮರ್ಪಿಸಿದರು.





## ಆಯುಕ್ತರ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ

ಆಯುಕ್ತರ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರವನ್ನು ಮಾರ್ಚ್ 01 ರಿಂದ 05ರ ವರೆಗೆ ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಶಿಬಿರ, ದೊಡ್ಡಬಳ್ಳಾಪುರದಲ್ಲಿ ಆಯೋಜಿಸಲಾಗಿತ್ತು. 19 ಜಿಲ್ಲೆಗಳಿಂದ 51 ಅಭ್ಯರ್ಥಿಗಳು (19 ಮಹಿಳಾ ಅಭ್ಯರ್ಥಿಗಳು ಮತ್ತು 32 ಪುರುಷ ಅಭ್ಯರ್ಥಿಗಳು) ಭಾಗವಹಿಸಿದ್ದರು. ಶ್ರೀ ಸಿ.ಎಸ್. ರೆಡ್ಡಿ, ಎಲ್.ಟಿ. (ಸ್ಕೌಟ್ಸ್), ರಾಜ್ಯ ಆಯುಕ್ತರು (ವಯಸ್ಕರ ಸಂಪನ್ಮೂಲ) ಶಿಬಿರದ ನಾಯಕರಾಗಿ ಹಾಗೂ ಶ್ರೀಮತಿ ಕೆ.ವಿ. ಶಾಮಲ ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್) ಮತ್ತು ಶ್ರೀ ನಾಗೇಶ್ ಆರ್. ಶಿವಪೂರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್)ರವರು ಸಹಾಯಕರಾಗಿ ಸೇವೆ ಸಲ್ಲಿಸಿದರು. ರಾಜ್ಯ ಸ್ಕೌಟ್ಸ್ ಆಯುಕ್ತರಾದ ಶ್ರೀ ಎಂ.ಎ ಖಾಲಿದ್, ರಾಜ್ಯ ಗೈಡ್ಸ್ ಆಯುಕ್ತರಾದ ಶ್ರೀಮತಿ ಗೀತಾ ನಟರಾಜ್, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಹೆಚ್ಚುವರಿ ಅಂತಾರಾಷ್ಟ್ರೀಯ ಆಯುಕ್ತರಾದ ಶ್ರೀ ಎ.ಎಸ್. ಮಧುಸೂದನ್, ರಾಜ್ಯ ಸ್ಥಾನಿಕ ಆಯುಕ್ತರಾದ ಶ್ರೀ ಜಿತೇಶ್ ಸೇಠ್, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪಗೌಡ, ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಶ್ರೀ ಪಿ. ವಿಶ್ವನಾಥ, ಜಿಲ್ಲಾ ಮುಖ್ಯ ಆಯುಕ್ತರು, ಮೈಸೂರು ಇವರು ಉದ್ಘಾಟನೆಗೆ ಹಾಗೂ ಡಾ॥ ಎಂ. ಮೋಹನ್ ಆಳ್ವಾ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಇವರು ಸಮಾರೋಪ ಸಮಾರಂಭಕ್ಕೆ ಆಗಮಿಸಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ವಿಶ್ವನಾಥ, ಜಿಲ್ಲಾ ಸಂಘಟಕರು ಚಿಕ್ಕಬಳ್ಳಾಪುರ, ಇವರು ಕಛೇರಿ ಸಹಾಯಕರಾಗಿ ಸೇವೆ ಸಲ್ಲಿಸಿದರು.





# ಚಾರಣ ಮತ್ತು ಪ್ರಕೃತಿ ಅಧ್ಯಯನದ ರಾಜ್ಯ ಮಟ್ಟದ ಶಿಬಿರ



ಚಾರಣ ಮತ್ತು ಪ್ರಕೃತಿ ಅಧ್ಯಯನದ ರಾಜ್ಯ ಮಟ್ಟದ ಶಿಬಿರವನ್ನು ಉಡುಪಿ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಮಾರ್ಚ್ 10 ರಿಂದ 12ರ ವರೆಗೆ ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು, ಉಡುಪಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು.

ಮಾರ್ಚ್ 10 ರಂದು ಶಿಬಿರದ ಉದ್ಘಾಟನಾ ಸಮಾರಂಭವನ್ನು ಉಡುಪಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ್ ಶೆಟ್ಟಿ ಇಂದ್ರಾಳಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಬಾಬು ಹೆಗ್ಗಡೆ, ಅಧ್ಯಕ್ಷರು, ವ್ಯವಸ್ಥಾಪನ ಸಮಿತಿ, ಶ್ರೀ ಮೂಕಾಂಬಿಕ ದೇವಸ್ಥಾನ ಇವರು ಉದ್ಘಾಟಿಸಿದರು. ಶ್ರೀ ಪ್ರಶಾಂತ್ ಕುಮಾರ್ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿಗಳು, ಶ್ರೀ ಮೂಕಾಂಬಿಕ ದೇವಸ್ಥಾನ, ಕೊಲ್ಲೂರು, ಶ್ರೀಮತಿ ಗುಣರತ್ನ, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ, ಶ್ರೀಮತಿ ದೀಪಿಕಾ ಶುಭಾಶೆಟ್ಟಿ, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ, ಶ್ರೀ ಜನಾರ್ಧನ ಕೊಡವೂರು, ಜಿಲ್ಲಾ ಆಯುಕ್ತರು (ಸ್ಕೌ) ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು.

ಮಾರ್ಚ್ 11 ರಂದು ಕೊಡಚಾದ್ರಿ ಬೆಟ್ಟಕ್ಕೆ ಚಾರಣವನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಕೊಡಚಾದ್ರಿ ಬೆಟ್ಟದಲ್ಲಿ ಪ್ರಕೃತಿ ಅಧ್ಯಯನವನ್ನು ನಡೆಸಲಾಯಿತು. ಕೊಲ್ಲೂರಿನ ವಿವಿಧ ಸ್ಥಳಗಳಲ್ಲಿ ಪೋಲಿಸ್ ಇಲಾಖೆ, ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಸಾರ್ವಜನಿಕರ ಸಹಕಾರದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಾರ್ಚ್ 12 ರಂದು ಶಿಬಿರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿ ಮಾತನಾಡಿದರು. ಸರ್ಕಾರಿ ಉದ್ಯೋಗವನ್ನು ನಂಬಿ ಕೂತರೆ ಆಗುವುದಿಲ್ಲವಾದುದರಿಂದ ಸ್ವಂತ ಉದ್ದಿಮೆ ಹಾಗು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ ಎಂದು ಕರೆ ಇತ್ತರು. ಜಿಲ್ಲಾ ಮುಖ್ಯ ಆಯುಕ್ತರಾದ ಜಯಕರ್ ಶೆಟ್ಟಿ ಇಂದ್ರಾಳಿ ರವರು ಮಾತನಾಡುತ್ತಾ 'ವಿದ್ಯಾರ್ಥಿ ಜೀವನದಲ್ಲಿ ಇಂತಹ ಕ್ಯಾಂಪ್‌ಗಳಲ್ಲಿ ಭಾಗವಹಿಸಿ ಸದುಪಯೋಗ ಪಡಿಸಿಕೊಳ್ಳಿ' ಎಂದರು. ಈ ಸಂದರ್ಭದಲ್ಲಿ ಶಿಬಿರದಲ್ಲಿ ಭಾಗವಹಿಸಿದ್ದ ರೋವರ್ಸ್– ರೇಂಜರ್ಸ್‌ಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು. ಹಲವಾರು ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಂಡರು. ಶಿಬಿರದಲ್ಲಿ ರಾಜ್ಯದ 25 ಜಿಲ್ಲೆಗಳಿಂದ 225 ರೋವರ್ಸ್– ರೇಂಜರ್ಸ್‌ಗಳು ಭಾಗವಹಿಸಿದ್ದರು.

ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಜನಾರ್ದನ್ ಕೊಡವೂರು, ಜಿಲ್ಲಾ ಖಜಾಂಜಿ ಶ್ರೀ ಹರಿಪ್ರಸಾದ್ ರೈ, ಬೈಂದೂರು ಸ್ಥಳೀಯ ಅಧ್ಯಕ್ಷ ಶ್ರೀ ನರಸಿಂಹ ದೇವಾಡಿಗ, ರಾಜ್ಯ ಸಂಘಟನಾ ಆಯುಕ್ತ ಶ್ರೀ ಎಂ. ಪ್ರಭಾಕರ ಭಟ್, ಗೋಳಿಹೊಳೆ ಮೂಕಾಂಬಿಕಾ ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ಸಂಪತ್ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷೆ ಶ್ರೀಮತಿ ದೀಪಿಕಾ ಶೆಟ್ಟಿ, ಶಿಬಿರ ನಾಯಕರಾಗಿರುವ ರೋವರ್ ಲೀಡರ್ ಶ್ರೀ ಹರೀಶ್ ಉಪಸ್ಥಿತರಿದ್ದರು. ಜಿಲ್ಲಾ ತರಬೇತಿ ಆಯುಕ್ತ ಶ್ರೀ ಉದಯ ಭಾಸ್ಕರ್ ಶೆಟ್ಟಿ ಸ್ವಾಗತಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್ ಪ್ರಸ್ತಾಪಿಸಿದರು. ಜಿಲ್ಲಾ ಕಾರ್ಯದರ್ಶಿ ಆನಂದ್ ಅಡಿಗ ನಿರೂಪಿಸಿದರು.





# ರಾಜ್ಯ ಮಟ್ಟದ ಕಡಲ ತೀರ ಚಾರಣ, ಪ್ರಕೃತಿ ಅಧ್ಯಯನ ಹಾಗೂ ಸ್ವಚ್ಛತಾ ಶಿಬಿರ



ರಾಜ್ಯ ಸಂಸ್ಥೆ ಹಾಗೂ ಉಡುಪಿ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಮಾರ್ಚ್ 19 ರಿಂದ 22ರ ವರೆಗೆ ರಾಜ್ಯ ಮಟ್ಟದ ಕಡಲ ತೀರ ಚಾರಣ, ಪ್ರಕೃತಿ ಅಧ್ಯಯನ ಹಾಗೂ ಸ್ವಚ್ಚತಾ ಶಿಬಿರವನ್ನು ಆನೆಗುಡ್ಡೆ, ಕುಂದಾಪುರ, ಉಡುಪಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು.

ಶಿಬಿರದ ಉದ್ಘಾಟನಾ ಸಮಾರಂಭವು ಮಾರ್ಚ್ 19 ರಂದು ಶ್ರೀ ಸಿದ್ಧಿವಿನಾಯಕ ಆನೆಗುಡ್ಡೆಯ ಸಭಾಭವನ ಕುಂಭಾಶಿಯಲ್ಲಿ ಜರುಗಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ ಶೆಟ್ಟಿ, ಸ್ಥಳೀಯ ಸಂಸ್ಥೆ ಕುಂದಾಪುರ ಇದರ ಅಧ್ಯಕ್ಷರಾದ ಶ್ರೀಮತಿ ಗುಣ ರತ್ನ, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಜನಾರ್ದನ್ ಕೊಡವ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಜ್ಯೋತಿ ಜೆ. ಪೈ, ಶ್ರೀ ಆನಂದ್ ಸಿ. ಕುಂದರ್ ಗೀತಾ ಫೌಂಡೇಶನ್, ಶ್ರೀ ಕೆ.ಆರ್. ನಾಯಕ್, ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ, ಶ್ರೀ ದಿವಾಕರ್ ಸುನಿಲ್, ಜಿಲ್ಲಾ ಸ್ಥಾನೀಯ ಆಯುಕ್ತರು, ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ ಸಭಾಂಗಣದ ಮುಖ್ಯಸ್ಥರಾದ ಶ್ರೀ ರಾಮಣ ಉಪಾಧ್ಯಾಯ, ಉಪಸ್ಥಿತರಿದ್ದರು.

ಈ ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಆನಂದ್ ಬಿ. ಅಡಿಗ, ಜಿಲ್ಲಾ ಕಾರ್ಯದರ್ಶಿ, ಪ್ರಾಸ್ತಾವಿಕ ನುಡಿಯನ್ನು ರೋವರ್ ಸ್ಕೌಟ್ ಲೀಡರ್ ಶ್ರೀ ಪ್ರವೀಣ್ ರವರು ನಿರ್ವಹಿಸಿದರು. ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಕುಂದಾಪುರದಿಂದ ಉಪ್ಪುಂದದವರೆಗೆ ಕಡಲತೀರದಲ್ಲಿ 40 ಕಿ.ಮೀ ಚಾರಣವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದ ಸಮಾರೋಪ ಸಮಾರಂಭವು ಮಾರ್ಚ್ 22 ರಂದು ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ಸಭಾಭವನದಲ್ಲಿ ಶ್ರೀ ನರಸಿಂಹ ದೇವಾಡಿಗ, ಅಧ್ಯಕ್ಷರು, ಸ್ಥಳೀಯ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸದರಿ ಶಿಬಿರಕ್ಕೆ ರಾಜ್ಯದ 31 ಜಿಲ್ಲೆಗಳಿಂದ 250 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.





# ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಐತಿಹಾಸಿಕ ಮತ್ತು ಪರಿಚಯಾತ್ಮಕ ಶಿಬಿರ

ಫೆಬ್ರವರಿ 21 ರಿಂದ 23ರ ವರೆಗೆ ಐತಿಹಾಸಿಕ ಮತ್ತು ಪರಿಚಯಾತ್ಮಕ ರಾಜ್ಯ ಮಟ್ಟದ ಶಿಬಿರವನ್ನು ರೋವರ್ಸ್ ಹಾಗೂ ರೇಂಜರ್ಸ್‌ಗಳಿಗೆ ಶ್ರೀ ಮುರುಘಾಮಠ ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಶ್ರೀ ಟಿ.ಎಸ್. ಶಿವಣ್ಣ, ALT(R) ರವರು ರೋವರ್ಸ್ ವಿಭಾಗಕ್ಕೆ ಮತ್ತು ರೇಂಜರ್ಸ್ ವಿಭಾಗಕ್ಕೆ ಶ್ರೀಮತಿ ಅಶ್ವಿನಿ ಬಸವರಾಜ್ ಇವರು ಶಿಬಿರದ ನಾಯಕರಾಗಿ ಕರ್ತವ್ಯ ನಿರ್ವಹಿಸಿದರು. ಧ್ವಜಾರೋಹಣದೊಂದಿಗೆ ಶಿಬಿರ ಆರಂಭಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ.ಎಸ್. ಉಜ್ಜಿನಪ್ಪ, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ ಚಿತ್ರದುರ್ಗ ಇವರು ವಹಿಸಿಕೊಂಡಿದ್ದರು. ಪೂಜ್ಯ ಶ್ರೀ ಶಾಂತವೀರ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಶಾಖಾ ಮಠ, ಗುರುಮಠಕಲ್ ಮತ್ತು ಪೂಜ್ಯ ಶ್ರೀ ಸಿದ್ದಬಸವ ಕಬೀರಾನಂದ ಮಹಾಸ್ವಾಮಿಗಳು, ಕಲಬುರುಗಿ ಇವರುಗಳ ಆಶೀರ್ವಚನದೊಂದಿಗೆ ಶಿಬಿರದ ಉದ್ಘಾಟನೆಯನ್ನು ನೆರವೇರಿಸಲಾಯಿತು, ಈ ದಿನದ ಅತಿಥಿಗಳಾಗಿ ಶ್ರೀ ಕೆ. ರವಿಶಂಕರ್ ರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳಾದ



ಶ್ರೀ ಬಿ.ಎ. ಲಿಂಗಾರೆಡ್ಡಿ ಇವರುಗಳು ಆಗಮಿಸಿದ್ದರು. ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಶ್ರೀ ತಿಪ್ಪೇಸ್ವಾಮಿ ಹೆಚ್, ಜಿಲ್ಲಾ ನೋಡಲ್ ಅಧಿಕಾರಿಗಳು (ರೋವರ್ಸ್) ಜಿಲ್ಲಾ ಸಂಸ್ಥೆ, ಚಿತ್ರದುರ್ಗ ಇವರು ನೆರೆವೆರಿಸಿಕೊಟ್ಟರು. ಡಾ. ಲೀಲಾವತಿ, ಜಿಲ್ಲಾ ನೋಡಲ್ ಅಧಿಕಾರಿಗಳು (ರೇಂಜರ್ಸ್) ಜಿಲ್ಲಾ ಸಂಸ್ಥೆ ಚಿತ್ರದುರ್ಗ ಇವರು ಅತಿಥಿ ಭಾಷಣವನ್ನು ಮಾಡಿದರು. ಕೊನೆಯಲ್ಲಿ ಶ್ರೀ ಮಲ್ಲೇಶಪ್ಪ ಕೆ.ಟಿ., ಜಿಲ್ಲಾ ಸಂಘಟಕರು ಜಿಲ್ಲಾ ಸಂಸ್ಥೆ ಚಿತ್ರದುರ್ಗ ಇವರು ವಂದನಾರ್ಪಣೆಯನ್ನು ಮಾಡಿದರು. ನಂತರ ಮದ್ಯಾಹ್ನ 12:30 ರಿಂದ 1:30 ರವರೆಗೆ ಚಿತ್ರದುರ್ಗ ಐತಿಹಾಸಿಕ ಸ್ಥಳಗಳ ಬಗ್ಗೆ ಡಾ॥ ರಾಜ್‌ಕುಮಾರ್ ಉಪಾನ್ಯಸಕರು ಇವರು ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮಾಹಿತಿಯನ್ನು ನೀಡಿದರು. ಊಟದ ವಿರಾಮದ ನಂತರ 2 ಗಂಟೆಯಿಂದ 5.30ರ ವರೆಗೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರಕ್ಕೆ ವಿದ್ಯಾರ್ಥಿಗಳು ಭೇಟಿ ನೀಡಿ, ಅದರ ಇತಿಹಾಸವನ್ನು ತಿಳಿಯುವುದರ ಜೊತೆಗೆ ಅದನ್ನು ವೀಕ್ಷಿಸಿದರು. ಸಂಜೆ 6.30ರ ಸಮಯದಲ್ಲಿ ಶಿಬಿರಕ್ಕೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭೇಟಿ ನೀಡಿ ರೋವರ್ಸ್ ಮತ್ತು ರೆಂಜರ್ಸ್‌ಗಳಿಗೆ T- Shirt ವಿತರಣೆ ಮಾಡಿ ಇಂತಹ ಕಾರ್ಯಕ್ರಮಗಳಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಹೆಚ್ಚು ಪಾಲ್ಗೊಳ್ಳಬೇಕೆಂದು ಹೇಳಿದರು. ಸಂಜೆ 06 ರಿಂದ 7:30 ವರೆಗೆ Sing song. ಚಟುವಟಿಕೆ ನಡೆಸಲಾಯಿತು.

ಫೆಬ್ರವರಿ 22 ರಂದು ಬೆಳಿಗ್ಗೆ 06:30ಕ್ಕೆ ಬಿ.ಪಿ.ಸಿಕ್ಸ್ ವ್ಯಾಯಾಮಗಳು ಹಾಗೂ ಏರೋಬಿಕ್ಸ್‌ನ್ನು ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಚಿದಾನಂದಸ್ವಾಮಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಚಿತ್ರದುರ್ಗ ಇವರು ಆಗಮಿಸಿ ನಡೆಸಿಕೊಟ್ಟರು. ಧ್ವಜಾರೋಹಣ ಸಮಯದಲ್ಲಿ ಸಂಸ್ಥಾಪನಾ ಹಾಗೂ ಚಿಂತನಾ ದಿನಾಚರಣೆಯನ್ನು ಆಚರಿಸಲಾಯಿತು. ನಂತರ ಚಿತ್ರದುರ್ಗದ ಏಳು ಸುತ್ತಿನ ಕೋಟೆಯನ್ನು ವೀಕ್ಷಣೆ ಮಾಡಲಾಯಿತು. ಮಧ್ಯಾಹ್ನ 03 ಗಂಟೆಯಿಂದ ಕಾಡು ಮಲ್ಲೇಶ್ವರ ವನ್ಯ ಪ್ರಾಣಿಗಳ ಸಂಗ್ರಹಾಲಯವನ್ನು ನೋಡಿದ ನಂತರ ಚಂದ್ರವಳ್ಳಿ ತೋಟದ ಗುಹೆಗಳು ಹಾಗೂ ಅಂಕಲಿ ಮಠವನ್ನು ವೀಕ್ಷಿಸಲಾಯಿತು.

ಫೆಬ್ರವರಿ 23 ರಂದು ಬೆಳಗ್ಗೆ 07 ಗಂಟೆಗೆ ಸರಿಯಾಗಿ ಸರ್ವಧರ್ಮ ಪ್ರಾರ್ಥನೆಯನ್ನು ನೆರವೇರಿಸಿ, 8.15ಕ್ಕೆ ಧ್ವಜಾರೋಹಣವನ್ನು ನೆರವೇರಿಸಲಾಯಿತು. ನಂತರ ದಿ॥ ಎಸ್. ನಿಜಲಿಂಗಪ್ಪ, ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರ ಪುಣ್ಯ ಸ್ಥಳಕ್ಕೆ ಭೇಟಿ  ನೀಡಲಾಯಿತು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಬಿ.ಎ. ಲಿಂಗಾರೆಡ್ಡಿ ಇವರು ಶಿಬಿರಾಗ್ನಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ  ಪದಾಧಿಕಾರಿಗಳು ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಿಬಿರದ ಮುಕ್ತಾಯ ಸಮಾರಂಭವನ್ನು ಶ್ರೀ ಅಲ್ಲಮ ಪ್ರಭು ಸಭಾಂಗಣದಲ್ಲಿ ಸಂಘಟಿಸಲಾಯಿತು, ಈ ಸಮಾರಂಭದಲ್ಲಿ ಪೂಜ್ಯ ಶ್ರೀ ಸಿದ್ದಬಸವ ಕಬೀರಾನಂದ ಮಹಸ್ವಾಮಿಗಳು ಕಲ್ಬುರ್ಗಿ ಇವರು ಭಾಗವಹಿಸಿ ತಮ್ಮ ಹಿತನುಡಿಗಳನ್ನಾಡಿದರು. ಶ್ರೀಮತಿ ಎಲ್. ಸವಿತಾ ಶಿವಕುಮಾರ್, ಜಿಲ್ಲಾ ಆಯುಕ್ತರು (ಗೈಡ್ಸ್), ಶ್ರೀ ಎಂ.ಕೆ. ಅನಂತರೆಡ್ಡಿ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ. ಡಾ॥ ರಹಮತ್ ಉಲ್ಲಾ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ಪಿ.ವೈ. ದೇವರಾಜ್ ಪ್ರಸಾದ್, ಜಿಲ್ಲಾ ಸ್ಥಾನಿಕ ಆಯುಕ್ತರು ಮತ್ತು ರೋವರ್ಸ್–69, ರೇಂಜರ್ಸ್–76 ಶಿಬಿರಾರ್ಥಿಗಳು ಭಾಗವಹಿಸಿದ್ದರು.





## ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಐತಿಹಾಸಿಕ ಮತ್ತು ಪರಿಚಯಾತ್ಮಕ ಶಿಬಿರ

ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ಇವರ ಸಂಯುಕ್ತಶ್ರಯದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಐತಿಹಾಸಿಕ ಸ್ಥಳಗಳ ವೀಕ್ಷಣೆ ಮತ್ತು ಮಾಹಿತಿ ಶಿಬಿರವನ್ನು ಸ್ಕೌಟ್ ಭವನ ಹಾಸನದಲ್ಲಿ ಮಾರ್ಚ್ 22 ರಿಂದ 24ರ ವರಗೆ ಆಯೋಜನೆ ಮಾಡಲಾಯಿತು. ವಿಶೇಷ ಶಿಬಿರದಲ್ಲಿ ವಿವಿಧ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಹಾಸನ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ತಾರಾನಾಥ್ ರವರು ಗಿಡಕ್ಕೆ ನೀರು ಹಾಕುವುದರ ಮೂಲಕ ನೇರವೆರಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹಾಸನ ಜಿಲ್ಲೆಯ ಐತಿಹಾಸಿಕ ಸ್ಥಳಗಳ ಬಗ್ಗೆ ಕಲೆ ಸಾಹಿತ್ಯಗಳ ಸಂಕ್ಷಿಪ್ತವಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಡಾ. ವೈ.ಎಸ್. ವೀರಭದ್ರಪ್ಪ ರವರು ವಹಿಸಿಕೊಂಡಿದ್ದರು. ಬೇಲೂರು ತಾಲ್ಲೂಕು ಸಂಶೋದಕರು ಮತ್ತು ಸಾಹಿತಿಗಳಾದ ಶ್ರೀವತ್ಸ ಎಸ್. ವಟಿ ರವರು




ಬೇಲೂರು ಹಳೆಬೀಡು ಶಾಸನಗಳ ಬಗ್ಗೆ ಮಾಹಿತಿ ನೀಡಿದರು ನಂತರ ಹಾಸನ ಜಿಲ್ಲೆಯ ಕೆಲವು ಐತಿಹಾಸಿಕ ವಿಶೇಷ ಸ್ಥಳಗಳಾದ ಎಂ.ಸಿ.ಎಸ್, ಬೇಲೂರು ತಾಲ್ಲೂಕಿನ ಪುಷ್ಪಗಿರಿ ಬೆಟ್ಟ, ಹಳೆಬೀಡು ಹೋಯ್ಸಳೇಶ್ವರ ಮತ್ತು ಶಾಂತಲೇಶ್ವರ ದೇವಸ್ಥಾನ, ಬೆಳವಾಡಿಯ ವೀರನಾರಯಣ ಸ್ವಾಮಿ ದೇವಸ್ಥಾನ, ವೇಣುಗೋಪಾಲ ಸ್ವಾಮಿ,  ಯೋಗನರಸಿಂಹ ಸ್ವಾಮಿ, ಉದ್ಭವ ಗಣಪತಿ, ಬೇಲೂರು ಚನ್ನಕೇಶವ ಸ್ವಾಮಿ ದೇವಸ್ಥಾನ, ಸಕಲೇಶಪುರ ತಾಲ್ಲೂಕಿನ ಮಂಜರಬಾದ್ ಕೋಟೆ, ಆಲೂರು ತಾಲ್ಲೂಕಿನ ವಿಜಯದುರ್ಗಾ ದೇವಸ್ಥಾನಕ್ಕೆ ಬೇಟಿ ನೀಡಲು ಜಿಲ್ಲಾ ಮುಖ್ಯ ಆಯುಕ್ತರು ಡಾ. ವೈ.ಎಸ್. ವೀರಭದ್ರಪ್ಪ ಹಸಿರು ಬಾವುಟ ತೋರಿಸುವುದರ ಮೂಲಕ ಚಾಲನೆ ನೀಡಿದರು. ವಿದ್ಯಾರ್ಥಿಗಳಿಗೆ ಐತಿಹಾಸಿಕ ಸ್ಥಳಗಳ ಬಗ್ಗೆ ಜಿಲ್ಲಾ ಕಾರ್ಯದರ್ಶಿಯವರು ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿದರು. ಈ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ವ್ಯಕ್ತಿತ್ವ ವಿಕಾಸನದ ಬಗ್ಗೆ ತರಬೇತಿಯನ್ನು ನೀಡಲಾಯಿತು. ಸರ್ವಧರ್ಮ ಪ್ರಾರ್ಥನೆಯ ನಂತರ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯ ಆತಿಥಿಗಳಾಗಿ ರಾಜ್ಯ ಮುಖ್ಯ ಆಯುಕ್ತರು ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ವಿಧ್ಯಾರ್ಥಿಗಳಿಗೆ 'ದೇಶ ಸುತ್ತ ಬೇಕು ಕೋಶ ಓದಬೇಕು ಐತಿಹಾಸಿಕ ಸ್ಥಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಜ್ಞಾನ ಹೆಚ್ಚಿಸಿಕೊಳ್ಳಬೇಕೆಂದು' ತಿಳಿಸಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಿದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಾದ ಜಿಲ್ಲಾ ಆಯುಕ್ತರು ಸ್ಕೌಟ್ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಆಯುಕ್ತರು, ಗೈಡ್ ಶ್ರೀಮತಿ ಜಯರಮೇಶ್, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಸೋಫಿಯ ಫರ್ನಾಡಿಸ್, ಜಿಲ್ಲಾ ಖಜಾಂಚಿ ಆರ್.ಎಸ್. ರಮೇಶ್, ಪ್ರೇಮ ಪ್ರಕಾಶ್, ಹಿರಿಯ ಗೈಡ್ ಶಿಕ್ಷಕಿ ಶ್ರೀಮತಿ ಕಾಂಚನ ಮಾಲ, ರೇಂಜರ್ ಲೀಡರ್ ಶ್ರೀಮತಿ ವಿದ್ಯಾ, ರೋವರ್ ಲೀಡರ್ ಶ್ರೀ ವೀರಭದ್ರಪ್ಪ, ರೋವರ್ ಸ್ಕೌಟ್ ಲೀಡರ್ ಶ್ರೀ ಕೆ.ಆರ್. ಗೀರಿಶ್ ಮೂರು ದಿನಗಳ ಕಾಲ ಶಿಬಿರ ಹಾಗೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಹಾಯಕ ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಪ್ರಿಯಾಂಕ ನಾಯಕತ್ವವನ್ನು ವಹಿಸಿಕೊಂಡಿದ್ದರು. ಬೇಲೂರು ತಾಲ್ಲೂಕು ಸಂಸ್ಥೆ, ಸಕಲೇಶಪುರ ತಾಲ್ಲೂಕು ಸಂಸ್ಥೆ ಹಾಗೂ ಆಲೂರು ತಾಲ್ಲೂಕು ಸಂಸ್ಥೆಯ ಕಾರ್ಯದರ್ಶಿಗಳು, ಪದಾಧಿಕಾರಿಗಳು, ವಿದ್ಯಾರ್ಥಿಗಳು, ವೀಕ್ಷಣಾ ಸ್ಥಳಕ್ಕೆ ಬೇಟಿ ನೀಡಿದ ವಿದ್ಯಾರ್ಥಿಗಳಿಗೆ ಊಟ ಉಪಹಾರದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಕರ್ನಾಟಕ ರಾಜ್ಯದಿಂದ 20 ಜಿಲ್ಲೆಗಳಿಂದ 54 ರೋವರ್ಸ್ ಮತ್ತು 56 ರೇಂಜರ್ಸ್ ಒಟ್ಟು 110 ವಿದ್ಯಾರ್ಥಿಗಳು ಭಾಗವಹಿಸಿದರು.







# ಜಿಲ್ಲಾ ವಾರ್ತೆಗಳು

## ಬೆಳಗಾವಿ

* ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಎಂ.ಎ. ನಾಯಕ ಇವರ ಮಾರ್ಗದರ್ಶನದಂತೆ ಫೆಬ್ರವರಿ 21 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಿಪ್ಪಾಣಿ, ಸ್ಥಳೀಯ ಸಂಸ್ಥೆ ನಿಪ್ಪಾಣಿ ಹಾಗೂ ಕೆ.ಎಲ್.ಇ. ಆಂಗ್ಲ ಮಾಧ್ಯಮ ಶಾಲೆ ನಿಪ್ಪಾಣಿ ಇವರ ಸಹಯೋಗದಲ್ಲಿ ಸ್ಕೌಟ್ಸ್ ಸಂಸ್ಥಾಪಕರಾದ ಬೇಡನ್ ಪೊವೆಲ್‌ರ 169ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲರಾದ ಶ್ರೀ ಪಿ.ಐ. ಪಾಟೀಲ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಸ್.ಎಂ. ಪಡಲಿಹಾಳ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಿಪ್ಪಾಣಿ  ತಾಲೂಕಿನ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಎಸ್.ಎನ್. ಯಲ್ಲಟ್ಟಿ, ನಿಪ್ಪಾಣಿ ನಗರದ ಸಿಆರ್‌ಪಿ ಶ್ರೀಮತಿ ವಿಎಸ್. ಮಹೇಂದ್ರಕರ ಉಪಸ್ಥಿತರಿದ್ದರು. ಸದರಿ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಬಸವರಾಜ ಕುಂಬಾರ, ಗೈಡ್ ಕ್ಯಾಪ್ಟನ್ ಶ್ರೀಮತಿ ಮಂಜುಳಾ ಬಾನಿ ಕಾರ್ಯಕ್ರಮದ ವ್ಯವಸ್ಥೆಯನ್ನು ನಿರ್ವಹಿಸಿದರು. ಪ್ರಾರಂಭದಲ್ಲಿ ಸ್ಕೌಟ್, ಗೈಡ್ ಧ್ವಜಾರೋಹಣದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಬೇಡನ್ ಪೊವೆಲ್ ಹಾಗೂ ಲೇಡಿ ಬೇಡನ್ ಪೊವೆಲ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆಯನ್ನು ಸಲ್ಲಿಸಲಾಯಿತು. ಮಕ್ಕಳನ್ನು ಉದ್ದೇಶಿಸಿ ದೈಹಿಕ ಶಿಕ್ಷಣ ಪರೀಕ್ಷಕರು ಮಾತನಾಡುತ್ತ  ಶಿಸ್ತು ಮತ್ತು ಸೇವಾಮನೋಭಾವಕ್ಕೆ ಇನ್ನೊಂದು ಹೆಸರೇ ಸ್ಕೌಟ್-ಗೈಡ್ ಎಂದು ಹೇಳಿದರು. ನಂತರ ಅಧ್ಯಕ್ಷೀಯ ನುಡಿಗಳನ್ನು ಆಡಿದ ಶ್ರೀ ಪಿಐ. ಪಾಟೀಲರವರು "ಸ್ಕೌಟ್ಸ್ ಮತ್ತು ಗೈಡ್ ಚಳುವಳಿ ಮಕ್ಕಳ ಜೀವನದಲ್ಲಿ ಬದಲಾವಣೆಯನ್ನು ತರುತ್ತದೆ. ನಿಯಮಗಳನ್ನು ಮತ್ತು ಅಂಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಭವಿಷ್ಯವೇ ಬದಲಾದಂತೆ" ಎಂದು ಹೇಳಿದರು. ಶಾಲೆಯ ಗೈಡ್ ವಿದ್ಯಾರ್ಥಿನಿಯರು ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.

ಇತ್ತೀಚೆಗೆ ದೊಡ್ಡಬಳ್ಳಾಪುರ ತರಬೇತಿ ಕೇಂದ್ರದಲ್ಲಿ ನಡೆದ ಹಿಮಾಲಯ ವೃಕ್ಷಮಣಿದಾರಕರ ತರಬೇತಿಯಲ್ಲಿ ಭಾಗವಹಿಸಿ ತರಬೇತಿ ಪಡೆದು ಬಂದ ಶ್ರೀಮತಿ ಮಂಜುಳಾ ಬಾನಿ ಇವರನ್ನು ಶ್ರೀಮತಿ ವಿ.ಎಸ್. ಮಹೇಂದ್ರಕರ ಪುಷ್ಪ ನೀಡಿ ಗೌರವಿಸಿದರು. ನಂತರ ನಡೆದ ದ್ವಿತೀಯ ಸೋಪಾನ ಪರೀಕ್ಷೆಯಲ್ಲಿ ತಾಲೂಕಿನ ವಿವಿಧ ಶಾಲೆಗಳಿಂದ 400 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. 25 ಸ್ಕೌಟ್-ಗೈಡ್, ಶಿಕ್ಷಕರುಗಳು ಭಾಗವಹಿಸಿದ್ದರು.



* ಫೆಬ್ರವರಿ 25 ರಂದು ಗೋಕಾಕ ನಗರದ ಲಕ್ಷ್ಮೀ ಎಜುಕೇಶನ್ ಟ್ರಸ್ಟ್‌ನ ಶ್ರೀ ಲಕ್ಷ್ಮಣ್ ರಾವ್ ಜಾರಕಿ ಹೊಳಿ ಪದವಿಪೂರ್ವ ಮಹಾ ವಿದ್ಯಾಲಯದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಹಾಗೂ ರೋವರ್, ರೇಂಜರ್‌ಗಳಿಗೆ ಪ್ರವೇಶ ಪರೀಕ್ಷೆಯ ಪ್ರಮಾಣ ಪತ್ರಗಳ ವಿತರಣಾ ಸಮಾರಂಭ ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸನತ್ ಭೀ. ಜಾರಕಿಹೊಳಿ ವಹಿಸಿದ್ದರು. ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಲಾಯಿತು. ಕಾರ್ಯಕ್ರಮದ ಅತಿಥಿಯಾಗಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಡಿ.ಬಿ. ಅತ್ತಾರ ಆಗಮಿಸಿದ್ದರು. ಸ್ಕೌಟ್ ಚಳುವಳಿಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ವಿವಿಧ ಹಂತದ ಪರೀಕ್ಷೆ ಹಾಗೂ ಅದರಿಂದ ಸಿಗುವ ಲಾಭಗಳ ಕುರಿತು ತಿಳಿಸಿಕೊಟ್ಟರು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಕಾಲೇಜು ಹಂತದಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಸಿ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಅರುಣ ಪೂಜೇರ, ಉಪ ಪ್ರಾಂಶುಪಾಲರಾದ ಶ್ರೀ ಕೆ.ಎಲ್. ಗುಂಡ್ಯಾಗೋಳ ರೋವರ್ ಸ್ಕೌಟ್ ಲೀಡರ್ ಶ್ರೀ ವಿ.ಬಿ. ಖನೀಲದಾರ, ರೇಂಜರ್ ಲೀಡರ್ ಶ್ರೀಮತಿ ವಿದ್ಯಾನಾಯಕ, ಕಾಲೇಜಿನ ಎಲ್ಲಾ ಪ್ರಾಧ್ಯಾಪಕ ವೃಂದದವರು ಹಾಗೂ ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿಗಳು ಉಪಸ್ಥಿತರಿದ್ದರು. ಕು. ಪ್ರಿಯಾ ಪೂಜೇರ ನಿರೂಪಿಸಿದರು, ಕು. ಸುಪ್ರೀಯಾ ಶಿಂಧಿಹಟ್ಟಿ ಸ್ವಾಗತಿಸಿದರು ಕು. ಅಶ್ವಿನಿ ಮಲಕಾರಿ ವಂದಿಸಿದರು. ಸಮಾರಂಭದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಶ್ರೀಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು ಬೆಳಗಾವಿ ಇವರ ನಿರ್ದೇಶನದಂತೆ ಹಾಗೂ ಶ್ರೀ ಬಸವರಾಜಪ್ಪ ಆರ್., ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಬಾಗ ಇವರ ಮಾರ್ಗದರ್ಶನದಂತೆ ಮಾರ್ಚ್ 4ರಂದು ರಾಯಬಾಗ ತಾಲೂಕಿನ ಹಾರೂಗೇರಿಯ ಸರಕಾರಿ ಪ್ರೌಢಶಾಲೆಯಲ್ಲಿ ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ಸ್ ಕ್ಯಾಪ್ಟನ್‌ಗಳ ಸಮಾವೇಶ ಹಾಗೂ ದಳ ನವೀಕರಣ ಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಂ.ಪಿ. ಜೀರಗಿಹಾಳ ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಪ್ರೌಢ ಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ, ತಾಲೂಕ ಘಟಕದ ಅಧ್ಯಕ್ಷರು ಸ್ಕೌಟ್ಸ್ ಮಾಸ್ಟರ್ ಶ್ರೀ ಎಸ್.ಎಂ. ಜಮಾದಾರ, ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ಸಂಘದ ತಾಲೂಕ ಘಟಕದ ಅಧ್ಯಕ್ಷರಾದ ಶ್ರೀ ಆರ್.ಟಿ. ಆರಬಳ್ಳಿ, ಕನ್ನಡ, ಹೆಣ್ಣು ಮಕ್ಕಳ ಶಾಲೆಗಳ ಮತ್ತು ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಇದೇ ವೇಳೆ ರಾಜ್ಯ ಮಟ್ಟದಲ್ಲಿ ನಡೆದ ಹಿಮಾಲಯ ವೃಕ್ಷಮಣಿದಾರ



ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರವನ್ನು ಪಡೆದ ಸ್ಕೌಟ್ಸ್ ಮಾಸ್ಟರ್ ಶ್ರೀ ಎಸ್.ಸಿ. ಬಿಡೊಂಬರ ಹಾಗೂ ಶ್ರೀ ಜಿ.ವಿ. ಪಟ್ಟಣ ಶೆಟ್ಟಿ ಇವರುಗಳನ್ನು ಗೌರವಿಸಲಾಯಿತು. ಹಾರೂಗೇರಿಯ ಸಿ.ಆರ್.ಪಿ. ಶ್ರೀ ಮಹಾಂತೇಶ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ 50 ಸ್ಕೌಡ್, ಗೈಡ್ ಶಿಕ್ಷಕರು ಭಾಗವಹಿಸಿದ್ದರು.

## ಬಳ್ಳಾರಿ

* ಫೆಬ್ರವರಿ 15 ರಂದು 7ನೇ ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವು ಸಿರುಗುಪ್ಪದಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ಬಳಿಗಾರ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ॥ ಮದುಸೂಧನ ಕಾರಿಗನೂರ, ತಾಲ್ಲೂಕು ದಂಡಾಧಿಕಾರಿ ಶ್ರೀ ವಿಶ್ವನಾಥ, ಚಂದನ ವಾಹಿನಿಯಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮದ ಶ್ರೀ ನಾ. ಸೋಮೇಶ್ವರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನಿಷ್ಠಿ ರುದ್ರಪ್ಪ, ಮಾಜಿ ಶಾಸಕರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ, ಗಡಿನಾಡ ಕನ್ನಡಿಗರು ತಾಯಿ ಭುವನೇಶ್ವರಿಯ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಎನ್.ಸಿ.ಸಿ., ಸ್ಕೌಟ್ಸ್–ಗೈಡ್ಸ್, ಸೇವಾದಳ ವಿವಿಧ ಶಾಲೆಯ ಮಕ್ಕಳು, ಕನ್ನಡ ಸಾಹಿತಿಗಳು, ಅಭಿಮಾನಿಗಳು, ಸಂಘ ಸಂಸ್ಥೆಯ ಮುಖಂಡರುಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ದೇವನೂರು ಸದಾಶಿವರೆಡ್ಡಿ ವಸತಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ದೇಶನೂರು, ಇಲ್ಲಿ ಬೇಡನ್ ಪೊವೆಲ್‌ರವರ 168ನೇ ಮತ್ತು ಲೇಡಿ ಬೇಡೆನ್ ಪೊವೆಲ್‌ರವರ 136ನೇ ಜನ್ಮ ದಿನಾಚರಣೆ ಹಾಗೂ ತಾಲ್ಲೂಕು ಮಟ್ಟದ ಮಕ್ಕಳ ಮೇಳವನ್ನು ಆಚರಿಸಲಾಯಿತು. ಫೆಬ್ರವರಿ 22 ರಂದು ಬೆಳಿಗ್ಗೆ 9 ಗಂಟೆಗೆ ಮಕ್ಕಳ ನೊಂದಣಿ ಮಾಡಿಸಲಾಯಿತು. ಬೇಡೆನ್ ಪೊವೆಲ್ ಮತ್ತು ಲೇಡಿ ಬೇಡೆನ್ ಪೊವೆಲ್‌ರವರ ಭಾವಚಿತ್ರಕ್ಕೆ ಗುರುಗಳಿಂದ ಪೂಜೆ ಸಲ್ಲಿಸಿದ ನಂತರ ಧ್ವಜಾರೋಹಣ ಮಾಡಲಾಯಿತು. ಶ್ರೀ ಕುಮಾರಗೌಡ ಅಗ್ನಿಶಾಮಕ ಠಾಣಾಧಿಕಾರಿ ಶ್ರೀ ಮಜರ ಹಸನ್, ಶ್ರೀ ನಟರಾಜಸ್ವಾಮಿ, ಕಾರ್ಯದರ್ಶಿಗಳು ಶ್ರೀಮತಿ ಸರೋಜ ಬಾಯಿ ವೈದ್ಯಕೀಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆ, ಶ್ರೀ ಬಸವರಾಜ ಕೋರಿ ಆರಕ್ಷಕ ಸಿಬ್ಬಂದಿಯವರು ವೇದಿಕೆಯಲ್ಲಿ ಹಾಜರಿದ್ದರು. ಉಪಹಾರ ಸೇವಿಸಿದ ನಂತರ ಗ್ರಾಮದ ಮುಖ್ಯ ಬೀದಿಯಲ್ಲಿ ಪಥ ಸಂಚಲನ ನಡೆಸಲಾಯಿತು. ಶ್ರೀ ಮಜರ್ ಹಸನ್‌ರವರು ಅಗ್ನಿ ನಂದಿಸುವುದರ ಬಗ್ಗೆ ಮಾಹಿತಿ ತಿಳಿಸಿದರು. ಸಿಬ್ಬಂದಿಯವರು ಪ್ರಾಯೋಗಿಕವಾಗಿ ಮಕ್ಕಳಿಗೆ ತೋರಿಸಿದರು. ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಶ್ರೀ ಬಿ.ಎಂ. ನಾಗರಾಜ, ಶಾಸಕರು ಸಿರುಗುಪ್ಪ ಮಾಡಿದ್ದರು. ಬಹುಮಾನಗಳನ್ನು, ಶ್ರೀ ನಾಗರಾಜ, ನಗರಸಭೆ ಸದಸ್ಯರು, ಸಿರುಗುಪ್ಪರವರು ನೀಡಿದರು. ನೆನಪಿನ ಕಾಣಿಕೆಗಳನ್ನು ಶ್ರೀಮತಿ ಡಾ॥ ಗಂಗಮ್ಮ, ಸ್ತ್ರೀಯೋಗ ತಜ್ಞವೈದ್ಯರು ಸಿರುಗುಪ್ಪರವರು ನೀಡಿದರು. ಸಮಾರೋಪ ಸಮಾರಂಭದಲ್ಲಿ ಶ್ರೀ ನಾಗರಾಜ, ನಗರಸಭೆ ಸದಸ್ಯರು,



ಸಿರುಗುಪ್ಪ ಬಿ.ಪಿ. ಹಾಗೂ ಲೇಡಿ ಬಿ.ಪಿ. ಯವರ ಆದರ್ಶ ಗುಣಗಳನ್ನು ಹಾಗೂ ಕೌಶಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ನಾಗರಿಕರಾಗಿ ತಮ್ಮ ಸೇವೆಯಲ್ಲಿಸಬೇಕೆಂದು ತಿಳಿಸಿದರು.

## ಬೆಂಗಳೂರು ದಕ್ಷಿಣ

* ಫೆಬ್ರವರಿ 23 ರಂದು ಚಾಮರಾಜಪೇಟೆ ಸ್ಥಳೀಯ ಸಂಸ್ಥೆಯ ಕಂಠೀರವ ಮುಕ್ತದಳದಿಂದ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯ ಸಹಯೋಗದೊಂದಿಗೆ 13ನೇ ರಕ್ತದಾನ ಶಿಬಿರ ಮತ್ತು ಸಾರ್ವಜನಿಕರಿಗೆ ಉಚಿತ ವೈದ್ಯಕೀಯ ತಪಾಸಣೆ ಶಿಬಿರವನ್ನು ಮಕ್ಕಳ ಕೂಟ ಉದ್ಯಾನವನದ ಆವರಣದಲ್ಲಿ ಆಯೋಜನೆ ಮಾಡಲಾಗಿತ್ತು. 350ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆಯಲ್ಲಿ ಭಾಗವಹಿಸಿದರು. ರಕ್ತದಾನ ಶಿಬಿರದಲ್ಲಿ 99 ಯುನಿಟ್ ರಕ್ತವನ್ನು ಸಂಗ್ರಹ ಮಾಡಲಾಯಿತು. ಇದರ ಜೊತೆಯಲ್ಲಿ ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ವಿವಿಧ ಚಟುವಟಿಕೆಗಳನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಉದ್ಘಾಟಿಸಿ ಮಕ್ಕಳನ್ನು ಉದ್ದೇಶಿಸಿ ಮಾತಾನಾಡಿದರು. ಕಾರ್ಯಕ್ರಮದಲ್ಲಿ ಕಂಠೀರವ ಮುಕ್ತದಳ ನಾಯಕರಾದ ಶ್ರೀ ಎಂ. ಶ್ರೀನಿವಾಸ್ ರವರು, ಶ್ರೀ ವೆಂಕಟ್ ರಾಜು, ರೋವರ್ಸ್ ಸ್ಕೌಟ್ಸ್ ಲೀಡರ್, ಶ್ರೀ ಪುನೀತ್ ಪಿ.ಎಸ್., ಸ್ಕೌಟ್ಸ್ ಮಾಸ್ಟರ್, ಶ್ರೀಮತಿ ಗೀತಾ, ಗೈಡ್ ಕ್ಯಾಪ್ಟನ್ ದಳನಾಕರುಗಳು, 80 ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್, ದಳನಾಕರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



* ಫೆಬ್ರವರಿ 28 ರಿಂದ 02 ರವರೆಗೆ ವಿಧಾನಸೌಧ ಆವರಣದಲ್ಲಿ ಆಯೋಜಿಸಿದ "ಪುಸ್ತಕ ಮೇಳದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿಸಿದರು. ಇವರುಗಳಿಗೆ ವಿಧಾನ ಸೌಧದ



ಒಳಗೆ ನೋಡಲು ಶ್ರೀ ಯು.ಟಿ. ಖಾದರ್, ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ. ಕರ್ನಾಟಕ ಸರ್ಕಾರ ಇವರು ಅವಕಾಶವನ್ನು ನೀಡಿದರು. ಇವರುಗಳು ಮಾಡಿದ ಸೇವೆಯನ್ನು ಮಾನ್ಯ ಸಭಾಧ್ಯಕ್ಷರು ಅಭಿನಂದಿಸಿದರು. ಮಾರ್ಚ್ 02 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮಧೂಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಪುಸ್ತಕ ಮೇಳಕ್ಕೆ ಆಗಮಿಸಿ ಸೇವೆಯನ್ನು ಸಲ್ಲಿಸಿದವರಿಗೆ ಅಭಿನಂದಿಸಿದರು.

* ಮಾರ್ಚ್ 08 ರಂದು ಬೆಂಗಳೂರು ದಕ್ಷಿಣಜಿಲ್ಲಾ ಸಂಸ್ಥೆಯ ವತಿಯಿಂದ ಶಾಂತಿಗೃಹ ಆವರಣದಲ್ಲಿ ರೋವರ್ಸ್-ರೇಂಜರ್ಸ್ ಗಳಿಗೆ ಯೂಥ್ ಮೀಟ್ ಅನ್ನು ಶ್ರೀ ಎ.ಎಸ್. ಮಧುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರ ನಾಯಕತ್ವದಲ್ಲಿ ಆಯೋಜಿಸಲಾಗಿತು. ಜಿಲ್ಲೆಯ 8 ಕಾಲೇಜಿನಿಂದ 40 ರೋವರ್ಸ್-ರೇಂಜರ್ಸ್‌ಗಳು ಮೀಟ್‌ನಲ್ಲಿ ಭಾವಹಿಸಿದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆಯ ಸಿಲ್ವರ್‌ಸ್ಪಿಂಗ್ ಇಂಟರ್ ನ್ಯಾಶನಲ್ ಸ್ಕೂಲ್ ವತಿಯಿಂದ ಬೇಸಿಗೆ ಶಿಬಿರವನ್ನು ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ಫೆಬ್ರವರಿ 28 ರಿಂದ ಮಾರ್ಚ್ 01ರ ವರೆಗೆ ಆಯೋಜಿಸಲಾಯಿತು. ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಲಾ ಅಧ್ಯಕ್ಷರಾದ ಶ್ರೀ ಆರ್. ಅಹ್ಮದ್ ಶುಭಾಶಯ ಕೋರಿದರು, ಶಾಲಾ ಆಡಳಿತ ಮಂಡಳಿಯ ಶ್ರೀ ಗಣೇಶ್ ಮತ್ತು ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಸುರೇಖಾ ಹೆಗ್ಗೆ ಮತ್ತು ಕಬ್ ಶಿಕ್ಷಕಿಯಾಗಿರುವ ಶ್ರೀಮತಿ ರೇಖಾ, ಬುಲ್‌ಬುಲ್ ಶಿಕ್ಷಕಿ ಶ್ರೀಮತಿ ಸುಮ ಮತ್ತು ಗೈಡ್ಸ್ ಮೀನಾ ಈ ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಶಿಬಿರವನ್ನು ಸಂಘಟಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ 33ನೇ ತಿಂಗಳ



ಕಾರ್ಯಕ್ರಮವನ್ನು ಫೆಬ್ರವರಿ 20 ರಂದು ಗಂಟಿಗಾನಹಳ್ಳಿ ಯಲಹಂಕ ಬೆಂಗಳೂರು ಇಲ್ಲಿ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಗಿಡಗಳಿಗೆ ನೀರು ಉಣಿಸಲಾಯಿತು ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು ಹಾಗು ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 45 ಭಾಗವಹಿಸಿದ್ದರು.

* ಫೆಬ್ರವರಿ 28 ರಿಂದ ಮಾರ್ಚ್ 02 ವರೆಗೆ ವಿಧಾನ ಸೌಧ ಇಲ್ಲಿ ನಡೆದ ಪುಸ್ತಕ ಸಮ್ಮೇಳನದಲ್ಲಿ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸೇವಾ ಶಿಬಿರವನ್ನು ನಡೆಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ 125 ರೋವರ್-ರೇಂಜರ್ ಈ ಸೇವಾ ಶಿಬಿರದಲ್ಲಿ ಭಾಗವಹಿಸಿದರು.



## ಬೆಂಗಳೂರು ಪೂರ್ವ

* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಸರ್ಕಾರಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಆನೇಕಲ್ ಟೌನ್ ಶಾಲೆಯ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಸುಚಿತ್ರಾ ನಾಯಕ್‌ರವರು ತಮ್ಮ ಶಾಲೆಯ ಮುಖ್ಯಶಿಕ್ಷಕರು ಮತ್ತು ಸಹ ಶಿಕ್ಷಕರ ಸಹಕಾರದಲ್ಲಿ 2024-25ನೇ ಸಾಲಿನ ಬೇಸಿಗೆ ಶಿಬಿರವನ್ನು ಮಾರ್ಚ್ 15 ರಂದು ದಳದ ಮಟ್ಟದಲ್ಲಿ ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ಎಸ್.ಜಿ.ವಿ ಮನುರವರು ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸ್ಕೌಟ್ಸ್-ಗೈಡ್ಸ್ ಇತಿಹಾಸ, ಪ್ರಾರ್ಥನೆ, ಧ್ವಜಗೀತೆ, ಸೈನ್, ಎಡಗೈನ ಹಸ್ತಲಾಘವ, ವಂದನೆ, ಧ್ಯೇಯ, ಗಂಟುಗಳು ಹಾಗೂ ಸಂಸ್ಥೆಯ ವಿವಿಧ ಧ್ವಜಗಳ ಕುರಿತು. ಮಾಹಿತಿ ನೀಡದರು.



* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಸರ್ಕಾರಿ ಪ್ರೌಢ ಶಾಲೆ ಸರ್ಜಾಪುರ ಟೌನ್ ಶಾಲೆಯ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಪ್ರತಿಮಾರವರು ತಮ್ಮ ಶಾಲೆಯ ಮುಖ್ಯಶಿಕ್ಷಕರು ಮತ್ತು ಸಹ ಶಿಕ್ಷಕರ ಸಹಕಾರದಲ್ಲಿ 2024-25ನೇ ಸಾಲಿನ ಬೇಸಿಗೆ ಶಿಬಿರವನ್ನು ಮಾರ್ಚ್ 19 ರಿಂದ 21ರವರಗೆ ದಳದ ಮಟ್ಟದಲ್ಲಿ ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸ್ಕೌಟ್ಸ್-ಗೈಡ್ಸ್ ಇತಿಹಾಸ, ಪ್ರಾರ್ಥನೆ, ಧ್ವಜಗೀತೆ, ಸೈನ್, ಎಡಗೈನ ಹಸ್ತಲಾಘನ, ವಂದನೆ, ಧ್ಯೇಯ, ಗಂಟುಗಳು ಕುರಿತು. ದಳದ ನಾಯಕಿರವರು ಮಾಹಿತಿ ನೀಡಲಾಯಿತು.

* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ ವತಿಯಿಂದ 2024-25ನೇ ಸಾಲಿನ ಬೇಸಿಗೆ ಶಿಬಿರವನ್ನು ಮುಕ್ತ ದಳದ ಕಬ್ಸ್-ಬುಲ್ ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ಮಾರ್ಚ್ 16 ರಂದು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮನು ರವರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸ್ಕೌಟ್ಸ್-ಗೈಡ್ಸ್ ಗಂಟುಗಳನ್ನು ಹಾಕುವ ಬಗ್ಗೆ ಮಾಹಿತಿ ನೀಡಿದರು.




* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ ವತಿಯಿಂದ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸ್ವಯಂ ಸೇವಕರಾಗಿ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ ಸ್ಕೌಟರ್ಸ್–ಗೈಡರ್ಸ್ ಶಿಕ್ಷಕರು ಸೇವೆ ಸಲ್ಲಿಸಿದ್ದಾರೆ. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್ ರವರ ಸಲಹೆ ಮತ್ತು ಮಾರ್ಗದರ್ಶನದಂತೆ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳಿಗೆ ಮೊದಲನೆ ದಿನ ಹೂ ನೀಡುವ ಮೂಲಕ ಶುಭಾಶಯಗಳನ್ನು ತಿಳಿಸಿದ್ದಾರೆ.

* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ ವತಿಯಿಂದ ಫೆಬ್ರವರಿ 20 ರಂದು 2024–25ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಶ್ರೀ ಎ.ಎನ್. ನರೇಂದ್ರಕುಮಾರ್, ಜಿಲ್ಲಾ ಕಾರ್ಯದರ್ಶಿರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭೇಟಿ ನೀಡಿ ಶುಭಹಾರೈಸಿದರು.

## ಬೀದರ್

* ಫೆಬ್ರವರಿ 20 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ) ಬೀದರ ಹಾಗೂ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಿಗೆ ಒಂದು ದಿನದ ಸ್ಕೌಟಿಂಗ್–ಗೈಡಿಂಗ್ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ ಡಯಟ್, ನೌಬಾದ್ ಬೀದರ ಇಲ್ಲಿ ಆಯೋಜನೆ ಮಾಡಲಾಯಿತು. ಡಾ: ಎಚ್.ಬಿ ಭರಶೆಟ್ಟಿ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಸುಜಾತ ಪೂಜಾರಿ DOT, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಸ್ಕೌಟಿಂಗ್–ಗೈಡಿಂಗ್ ಹಾಗೂ ಪ್ರಥಮ ಚಿಕಿತ್ಸೆಯ ಕುರಿತು ತರಬೇತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ಎಸ್.ಎ. ಮುನಾಫ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಶ್ರೀಮತಿ ಮಂಗಲ ಭಗವಾತ್ ಉಪಾಧ್ಯಕ್ಷರು, ಶ್ರೀಮತಿ ಜಯಶೀಲಾ ಸುದರ್ಶನ್, ಕಾರ್ಯದರ್ಶಿಗಳು ಭಾಲ್ಕಿ/ ರಾಜ್ಯ ಪರಿಷತ್ ಸದಸ್ಯರು(ಗೈ), ಶ್ರೀಮತಿ ಅಕ್ಕಮಹಾದೇವಿ, ಗೈಡ್ ಕ್ಯಾಪ್ಟನ್ ಹಾಗೂ 75 ಜನ ಶಿಕ್ಷಕರು ಭಾಗವಹಿಸಿದ್ದರು.

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಸಂಸ್ಥಾಪಕರ ಹುಟ್ಟುಹಬ್ಬ ಮತ್ತು ಚಿಂತನ ದಿನಾಚರಣೆಯ ಅಂಗವಾಗಿ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಡಾ. ಗುರಮ್ಮ ಸಿದ್ದಾರೆಡ್ಡಿ, ರಾಜ್ಯ ಸಹಾಯಕ ಆಯುಕ್ತರು (ಗೈ) ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ಬೀದರ ರವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ ಯಾತನೂರ, CPI ಬೀದರ ಗ್ರಾಮೀಣ ಪೊಲೀಸ್ ಠಾಣೆ, ಶ್ರೀ ಮಲ್ಲಿಕಾರ್ಜುನ, ಅಧ್ಯಕ್ಷರು, ಈಕಂ, ಬೀದರ, ಶ್ರೀ ಸಂಗ್ರಾಮಪ್ಪ ಶಾಲಾ ಶಿಕ್ಷಣ ಇಲಾಖೆ ಬೀದರ, ಶ್ರೀಮತಿ ಮಂಗಲ, ಭಗವಾತ್, ಉಪಾಧ್ಯಕ್ಷರು, ಶ್ರೀಮತಿ ಸಂಧ್ಯಾರಾಣಿ ಪಾಟೀಲ್, ಜಿಲ್ಲಾ ಆಯುಕ್ತರು (ಗೈ) ಇವರು ಆಗಮಿಸಿದ್ದರು.



ಇದೇ ಸಂದರ್ಭದಲ್ಲಿ ಶ್ರೀ ರಮೇಶ ತಿಬಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಶ್ರೀನಿವಾಸ್ ಬಿರಾದಾರ್ ಜಿಲ್ಲಾ ಖಜಾಂಚಿಗಳು, ಶ್ರೀಮತಿ ರಾಜಶ್ರೀ ಪಾಟೀಲ್ ಭಾಲ್ಕಿ ಜಂಟಿ ಕಾರ್ಯದರ್ಶಿಗಳು (ಗೈ), ಸ್ಕೌಟ್ಸ್–ಗೈಡ್ಸ್ 280 ಮಕ್ಕಳು ಭಾಗವಹಿಸಿದ್ದರು. ತದನಂತರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿ ಸ್ವಚ್ಛತಾ ಸೇವಾ ಕಾರ್ಯವನ್ನು ಮಾಡಲಾಯಿತು.

* ಫೆಬ್ರವರಿ 25 ರಂದು ಜಿಲ್ಲಾ ಸಂಸ್ಥೆ ಬೀದರ ಸ್ಥಳೀಯ ಸಂಸ್ಥೆ ಬಸವಕಲ್ಯಾಣ ಮತ್ತು ಪ್ರಜಾಪಿತಾ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಖಾನಾಪೂರ (ಕೆ) ವತಿಯಿಂದ ಶಿವರಾತ್ರಿ ಹಾಗೂ ಸಂಸ್ಥಾಪಕರ ಹುಟ್ಟುಹಬ್ಬ ಮತ್ತು ಚಿಂತನಾ ದಿನಾಚರಣೆಯ ಅಂಗವಾಗಿ ತಾಲೂಕ ಮಟ್ಟದ ಕಾಲ್ನಡಿಗೆ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ಮುಕುಂದ, ಸಹಾಯಕ ಆಯುಕ್ತರು, ಬಸವಕಲ್ಯಾಣ, ಪರಮಪೂಜ್ಯ ಶ್ರೀ ರುದ್ರಮುನಿ ಸ್ವಾಮಿ, ಶ್ರೀ ಶಿವಾನಂದ ಮೇತ್ರೆ, ತಹಸಿಲ್ದಾರ್, ಬಸವಕಲ್ಯಾಣ, ಪ್ರಜಾಪಿತ ಕುಮಾರಿ ಸರಸ್ವತಿ, ಶ್ರೀ ಅನಿಲ್ ಕುಮಾರ್ ಶಾಸ್ತ್ರಿ ಕಾರ್ಯದರ್ಶಿಗಳು ಬಸವಕಲ್ಯಾಣ ಇವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್– ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ಫೆಬ್ರವರಿ 27 ರಂದು ಶಾಲಾ ಶಿಕ್ಷಣ ಇಲಾಖೆ, ಬೀದರ ಹಾಗೂ ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಭಾಲ್ಕಿ ವತಿಯಿಂದ ಸಂಸ್ಥಾಪಕರ ಹುಟ್ಟುಹಬ್ಬ ಮತ್ತು ಚಿಂತನಾ ದಿನಾಚರಣೆಯ ಅಂಗವಾಗಿ ತಾಲೂಕ ಮಟ್ಟದ ಕಾಲ್ನಡಿಗೆ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಮೊದಲಿಗೆ ಧ್ವಜಾರೋಹಣವನ್ನು ನೆರವೇರಿಸಿದರು ತದನಂತರ ಶ್ರೀ ಸೂರ್ಯಕಾಂತ, ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ್ ಭಾಲ್ಕಿ, ಶ್ರೀಮತಿ ಕುಸುಮ ತಾಲೂಕ ಶಿಕ್ಷಣ ಸಂಯೋಜಕರು, ಶ್ರೀ ಬಾಬುರಾವ್ ನಿಂಬೂರೆ ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಇವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಚಯ್ಯ ನಾಸಿ, ಸಹಾಯಕ ಕಾರ್ಯದರ್ಶಿ, ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ. ಆಗಮಿಸಿದ್ದರು. ಸ್ಕೌಟ್ಸ್–ಗೈಡ್ಸ್‌ಗಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಯಿತು.



* ಮಾರ್ಚ್ 07 ರಿಂದ 09ರ ವರಗೆ ಜಿಲ್ಲಾ ಸಂಸ್ಥೆ ಬೀದರ ಹಾಗೂ ಯೂನಿಕ್ ಪಬ್ಲಿಕ್ ಶಾಲೆ ಶಿವನಗರ ಇವರ ವತಿಯಿಂದ ಶಾಲೆಯಲ್ಲಿ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶ್ರೀ ರಾಚಯ್ಯ ನಾಸಿ ಸಹಾಯಕ ಕಾರ್ಯದರ್ಶಿಗಳು ಇವರು ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ರಾಜಶ್ರೀ ಪಾಟೀಲ್ ಭಾಲ್ಕಿ, ಜಂಟಿ ಕಾರ್ಯದರ್ಶಿಗಳು (ಗೈ) ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಅಂಬಣ್ಣ ನಾಯಕ



ಎಸ್.ಜಿ.ವಿ, ಶ್ರೀ ಶಿವಕುಮಾರ ಸ್ವಾಮಿ ನಾಗುರೆ, ಸ್ಕೌಟ್ ಮಾಸ್ಟರ್ ಇವರು ಆಗಮಿಸಿ ಮಕ್ಕಳಿಗೆ ಸ್ಕೌಟಿಂಗ್–ಗೈಡಿಂಗ್ ಬಗ್ಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ನಿಕಿತಾ ಉಪ ಪ್ರಾಂಶುಪಾಲರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಮಾರ್ಚ್ 05 ರಿಂದ 08ರ ವರಗೆ ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಭಾಲ್ಕಿ ಮತ್ತು ಸರ್ಕಾರಿ ಪ್ರೌಢ ಶಾಲೆ ಭಾಲ್ಕಿ ವತಿಯಿಂದ ಶಾಲೆಯಲ್ಲಿ ಗೈಡ್ಸ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ಶ್ರೀಮತಿ ಕಮಲಾ ರಾಥೋಡ್, ಸ.ಶಿ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಹಾನಂದ ಸ.ಶಿ, ಶ್ರೀಮತಿ ಶಿವಗಂಗಾ ಸ.ಶಿ. ಇವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ಜಯಶೀಲಾ ಸುದರ್ಶನ್ ಕಾರ್ಯದರ್ಶಿಗಳು ಭಾಲ್ಕಿ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

ಮಾರ್ಚ್ 08 ರಂದು ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಹುಮನಾಬಾದ್ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದಿಂದ ಶ್ರೀ ವೀರಭದ್ರೇಶ್ವರ ದೇವಸ್ಥಾನ, ಹುಮನಾಬಾದ್ ವರಗೆ ತಾಲೂಕ ಮಟ್ಟದ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀಮತಿ ಜಾನಕಿ, ಮುಖ್ಯಗುರುಗಳು ಹಾಗೂ ಶ್ರೀ ರಮೇಶ ತಿಬಶೆಟ್ಟಿ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬಾಬುರಾವ್ ನಿಂಬೂರೆ, ಜಿಲ್ಲಾ ತರಭೇತಿ ಆಯುಕ್ತರು (ಸ್ಕೌ)/ ಕಾರ್ಯದರ್ಶಿಗಳು ಹುಮನಾಬಾದ, ಶ್ರೀ ಅನಿಲ್ ಕುಮಾರ್ ಶಾಸ್ತ್ರಿ, ಕಾರ್ಯದರ್ಶಿಗಳು ಬಸವಕಲ್ಯಾಣ ಇವರು ಹಸಿರು ನಿಶಾನೆ ತೋರಿಸುವ ಮೂಲಕ ಕಾಲ್ನಡಿಗೆ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳು ಭಾಗವಹಿಸಿದ್ದರು. ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು.




* ಮಾರ್ಚ್ 08 ರಂದು ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಬೀದರ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀಮತಿ ಡಾ॥ ಶಿಲ್ಪಾ ಶರ್ಮಾ (ಭಾ.ಆ.ಸೇ) ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಇವರ ಅಧ್ಯಕ್ಷತೆಯಲ್ಲಿ ಶ್ರೀ ಚನ್ನಬಸವ ಪಟ್ಟದೇವರ ರಂಗಮಂದಿರ ಇಲ್ಲಿ ಮಹಿಳಾ ದಿನಾಚರಣೆ ಆಯೋಜನೆ ಮಾಡಲಾಯಿತು ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಶ್ರೀಮತಿ ಮಂಗಲಾ ಭಗವಾತ್, ಉಪಾಧ್ಯಕ್ಷರು ಹಾಗೂ ಶ್ರೀಮತಿ ಸುಜಾತ ಪೂಜಾರಿ DOT ಇವರು ಭಾಗವಹಿಸಿದ್ದರು.

* ಮಾರ್ಚ್ 08 ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ ಹಾಗೂ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು ಬೀದರ ಇವರುಗಳ ಸಂಯುಕ್ತಾಶ್ರಯದಲ್ಲಿ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು ಆಣದೂರ ಇಲ್ಲಿ ಮಹಿಳಾ ದಿನಾಚರಣೆ ಆಯೋಜನೆ



ಮಾಡಲಾಯಿತು ಇದೇ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಶ್ರೀಮತಿ ಮಂಗಲಾ ಭಗವಾತ್ ಉಪಾಧ್ಯಕ್ಷರು ಹಾಗೂ ಶ್ರೀಮತಿ ಸುಜಾತ ಪೂಜಾರಿ ಆಔಖಿ, ಶ್ರೀ ಶ್ರೀಮತಿ ಅಂಬಿಕಾ ಕಾರ್ಯದರ್ಶಿಗಳು ಬೀದರ ಹಾಗೂ ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

## ಚಾಮರಾಜನಗರ

* ಫೆಬ್ರವರಿ 24 ರಿಂದ ಮಾರ್ಚ್ 01ರ ವರೆಗೆ ಶ್ರೀ ಮಲೆಮಹದೇಶ್ವರ ಬೆಟ್ಟ ಹನೂರು ತಾಲ್ಲೂಕಿನಲ್ಲಿ ಶಿವರಾತ್ರಿ ಹಬ್ಬದ ಜಾತ್ರೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಸೇವಾ ಶಿಬಿರವನ್ನು ಜಿಲ್ಲಾ ಸಂಸ್ಥೆಯಿಂದ ಏರ್ಪಡಿಸಲಾಗಿತ್ತು, ಚಾಮರಾಜನಗರ ಜಿಲ್ಲೆಯ ವಿವಿಧ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಈ ಸೇವಾ ಶಿಬಿರದಲ್ಲಿ ಒಟ್ಟು 100 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಸೇವೆಯನ್ನು ಗಮನಿಸಿದ ಶ್ರೀ ಮಲೆಮಹಾದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಶ್ರೀ ರಘುರವರು ಅಭಿನಂದಿಸಿದರು. ಈ ಸೇವಾ ಶಿಬಿರದ ಉಸ್ತುವಾರಿಯನ್ನು ಜಿಲ್ಲಾ ಸಂಘಟಕರಾದ ಶ್ರೀ ಅಶೋಕ್‌ಕುಮಾರ್ ಕೆ.ಪಿ.ರವರು ವಹಿಸಿದ್ದರು.



* ಜನವರಿ 29 ರಿಂದ ಫೆಬ್ರವರಿ 01ರ ವರೆವಿಗೆ ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ, ಕೊಳ್ಳೇಗಾಲ ಹಾಗೂ ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ರ್‍ಯಾಲಿ ಹಾಗೂ ತೃತೀಯ ಸೋಪಾನ ಶಿಬಿರವನ್ನು ಏರ್ಪಡಿಸಲಾಗಿತ್ತು, ಈ ಶಿಬಿರಕ್ಕೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವಿವಿಧ ಶಾಲೆಗಳಿಂದ ಸುಮಾರು 500 ಮಂದಿ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ ಮತ್ತು ಬುಲ್ ಬುಲ್‌ಗಳು ಭಾಗವಹಿಸಿದ್ದರು, ಸ್ಕೌಟ್ ವಿಭಾಗಕ್ಕೆ ಶ್ರೀ ಕೆ.ಎಸ್. ಮಹದೇಸ್ವಾಮಿ, ಗೈಡ್ ವಿಭಾಗಕ್ಕೆ ಕು॥ ಪಿ. ಕಮಲಮ್ಮ, ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಕಮಲ, ಕಬ್ ವಿಭಾಗಕ್ಕೆ ಶ್ರೀಮತಿ ಸೂರ್ಯಪ್ರಭರವರು ನಾಯಕ/ ನಾಯಕಿಯರಾಗಿ ಕರ್ತವ್ಯ ನಿರ್ವಹಿಸಿದರು. ಶ್ರೀ ರಾಜಶೇಖರ್, ನಿರ್ದೇಶಕರು,



ಶಾಲಾ ಶಿಕ್ಷಣ ಇಲಾಖೆ ಜೆ.ಎಸ್.ಎಸ್. ಸಂಸ್ಥೆ ಮೈಸೂರುರವರು ಮುಕ್ತಾಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಪ್ರಮಾಣ ಪತ್ರವನ್ನು ವಿತರಿಸಿದರು.

* ಫೆಬ್ರವರಿ 22 ರಂದು ಜೆ.ಎಸ್.ಎಸ್. ಬಾಲಕರ ಪ್ರೌಢ ಶಾಲೆ, ಚಾಮರಾಜನಗರ. ಫೆಬ್ರವರಿ 22 ರಂದು ಆರ್.ಸಿ.ಎಂ. ಶಾಲೆ, ಕೊಳ್ಳೇಗಾಲ, ಫೆಬ್ರವರಿ 23 ರಂದು ಗುಂಡ್ಲುಪೇಟೆ ಜ್ಞಾನ ಭವನ, ಫೆಬ್ರವರಿ 24 ರಂದು ಎಸ್.ಡಿ.ವಿ.ಎಸ್. ವಿದ್ಯಾಸಂಸ್ಥೆ ಯಳಂದೂರು, ಫೆಬ್ರವರಿ 25ರಂದು ಸ.ಮಾ.ಹಿ.ಪ್ರಾ. ಶಾಲೆಯಲ್ಲಿ ಆಯಾ ಸ್ಥಳೀಯ ಸಂಸ್ಥೆಯಲ್ಲಿ ರ‍್ಯಾಲಿ ಹಾಗೂ ಸಂಸ್ಥಾಪಕರ ಜನ್ಮ ದಿನವನ್ನು ಆಚರಿಸಲಾಯಿತು, ಚಾಮರಾಜನಗರದಲ್ಲಿ ಡಾ. ಶ್ವೇತಾ ಶಶಿಧರ್, ಜಿಲ್ಲಾ ಆಯುಕ್ತರು (ಗೈ) ಯಳಂದೂರಿನಲ್ಲಿ ಶ್ರೀ ಮಲ್ಲೀಕಾರ್ಜುನ ಸ್ವಾಮಿ, ಜಿಲ್ಲಾ ಆಯುಕ್ತರು (ಸ್ಕೌ) ಗುಂಡ್ಲುಪೇಟೆಯಲ್ಲಿ ಶ್ರೀ ಸ್ವಾಮಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹನೂರಿನಲ್ಲಿ ಶ್ರೀ ಗುರುಲಿಂಗಯ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕೊಳ್ಳೇಗಾಲದಲ್ಲಿ ಶಾಲೆಯ ಮುಖ್ಯ ಶಿಕ್ಷಕಿಯವರು ಅಧ್ಯಕ್ಷತೆ ವಹಿಸಿ ಪ್ರಮಾಣ ಪತ್ರವನ್ನು ವಿತರಿಸಿದರು, ಆಯಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿರವರು ಕಾರ್ಯಕ್ರಮವನ್ನು ಸಂಘಟಿಸಿದರು. ಈ ಕಾರ್ಯಕ್ರಮಗಳಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.



## ಚಿಕ್ಕಬಳ್ಳಾಪುರ

* ಫೆಬ್ರವರಿ 26 ಮತ್ತು 27 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಮಾರ್ಗದರ್ಶನ ಹಾಗೂ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡರವರ ಸಲಹೆಯಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಶ್ರೀ ಸದ್ಗುರು ಸನ್ನಿಧಿ ಈಶಾ ಫೌಂಡೇಶನ್ ಇಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಸೇವೆಯನ್ನು ಸಲ್ಲಿಸಲಾಯಿತು. ಈ ಸೇವಾ ಶಿಬಿರದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಜಿಲ್ಲೆಗಳಿಂದ ಒಟ್ಟು 280ಕ್ಕೂ ಹೆಚ್ಚು ರೋವರ್ಸ್ ರೇಂಜರ್ಸ್ ವಿದ್ಯಾರ್ಥಿಗಳು ಮತ್ತು 12 ದಳ ನಾಯಕರುಗಳು ಭಾಗವಹಿಸಿ ಉತ್ತಮ ಸೇವೆಯನ್ನು ಸಲ್ಲಿದರು. ಈ ಸೇವಾ ಶಿಬಿರದಲ್ಲಿ ಶ್ರೀ ನಿತೀನ್ ಅಮಿನ್, ಎ.ಎಸ್.ಓ.ಸಿ., ಬೆಂಗಳೂರು ಉತ್ತರ, ಶ್ರೀ ಚಂದ್ರು ಪಿ., ಎ.ಎಸ್.ಓ.ಸಿ, ವಿಶ್ವನಾಥ ವಿ., ಜಿಲ್ಲಾ ಸಂಘಟಕ ಚಿಕ್ಕಬಳ್ಳಾಪುರ, ನಾಯಕತ್ವ ವಹಿಸಿದ್ದರು.



* ಫೆಬ್ರವರಿ 15 ರಂದು ಶಿಡ್ಲಘಟ್ಟ ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ ಇಲ್ಲಿ ಶಿಡ್ಲಘಟ್ಟ ತಾಲ್ಲೂಕು ಮಟ್ಟದ ಸ್ಕೌಟರ್ಸ್–ಗೈಡರ್ಸ್ ಸಮಾವೇಶವನ್ನು ಕ್ಷೇತ್ರಸಮನ್ವಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರಕಾಶ ಸಿ.ಬಿ. ರವರು ಉದ್ಘಾಟಿಸಿ ಎಲ್ಲಾ ದಳ ನಾಯಕರು ಸಕ್ರಿಯವಾಗಿ ಘಟಕಗಳನ್ನು ತೆರೆದು ಮಕ್ಕಳಿಗೆ ಸ್ಕೌಟ್ಸ್–ಗೈಡ್ಸ್ ಶಿಕ್ಷಣ ನೀಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬಿ.ಆರ್.ಸಿ, ಶ್ರೀ ಮಂಜುನಾಥ, ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮುನಿರಾಜು ಹಾಗೂ



ಪದಾಧಿಕಾರಿಗಳು ಮತ್ತು ಸ್ಕೌಟರ್ಸ್–ಗೈಡರ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದರು.

* ಫೆಬ್ರವರಿ 22 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಚಿಂತಾಮಣಿ ಇಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಮತ್ತು ಚಿಂತಾಮಣಿ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆ, ವಿಶ್ವ ಭ್ರಾತೃತ್ವ ದಿನ, ಮತ್ತು ವಿಶ್ವ ಚಿಂತನಾ ದಿನಾಚರಣೆ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಶಿವಶಂಕರ್ ಪ್ರಸಾದ್, ರವರು ಉದ್ಘಾಟಿಸಿ ಮಾತನಾಡಿ ಶುಭಹಾರೈಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆ ಹಿರಿಯ ಉಪಾಧ್ಯಕ್ಷರು ಹಾಗೂ ಹಿರಿಯ ಉಪನ್ಯಾಸಕರಾದ ಶ್ರೀ ವೆಂಕಟರಮಣಪ್ಪರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ ಪ್ರಾಂಶುಪಾಲರಾದ ಡಾ. ರಮೇಶ್‌ರವರು, ಕಾರ್ಯಕ್ರಮಾಧಿಕಾರಿ ಶ್ರೀ ಮೋಹ್ಮದ್ ಪಾಷಾ, ಸ್ಥಳೀಯ ಸಂಸ್ಥೆ ಉಪಾಧ್ಯಕ್ಷೆ ಶ್ರೀಮತಿ ಶೋಭಾ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಉಪೇಂದ್ರ ಕುಮಾರ್‌ರವರು, ಉಪಸ್ಥಿತರಿದ್ದರು. ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ. ರವರು ಕಾರ್ಯಕ್ರಮ ಸಂಘಟಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ದಿನಾಚರಣೆ ಮಾಹಿತಿಯನ್ನು ವಿಶೇಷ ಉಪನ್ಯಾಸ ಮೂಲಕ ನೀಡಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ, ಸರ್ಕಾರಿ ಮಹಿಳಾ ಕಾಲೇಜು ಚಿಂತಾಮಣಿ, ಸರ್ಕಾರಿ ಪದವಿಪೂರ್ವ ಕಾಲೇಜು ಚಿಂತಾಮಣಿ, ಮಹಾತ್ಮ ಗಾಂಧಿ ಸರ್ಕಾರಿ ಪ್ರೌಢಶಾಲೆ ಚಿಂತಾಮಣಿ ಶಾಲೆಯ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದರು.



* ಫೆಬ್ರವರಿ 22 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರಿಯಣ್ಣನಹಳ್ಳಿ, ಚಿಕ್ಕಬಳ್ಳಾಪುರ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆ, ವಿಶ್ವ ಭ್ರಾತೃತ್ವ ದಿನ ಮತ್ತು ವಿಶ್ವ ಚಿಂತನಾ ದಿನಾಚರಣೆ ಆಯೋಜಿಸಲಾಗಿತ್ತು. ಮುಖ್ಯ ಶಿಕ್ಷರು. ದಳನಾಕರಾದ ಶ್ರೀಮತಿ ಚಂದ್ರಕಲಾರವರು ನೇತೃತ್ವದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು.

* ಫೆಬ್ರವರಿ 22 ರಂದು ಬಾಗೇಪಲ್ಲಿ ಸ್ಥಳೀಯ ಸಂಸ್ಥೆ ಮತ್ತು ಅರುಣೋದಯ ಶಾಲೆ ಅವರ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆ, ವಿಶ್ವ ಭ್ರಾತೃತ್ವ ದಿನ ಮತ್ತು ವಿಶ್ವ ಚಿಂತನಾ ದಿನಾಚರಣೆ ಆಯೋಜಿಸಲಾಗಿತ್ತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಉಮಾ ಹಾಗೂ ಪದಾಧಿಕಾರಿಗಳ ಸಹಯೋಗದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಮಾರ್ಚ್ 08 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ಹಾಗೂ ಬಾಗೇಪಲ್ಲಿ ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಅರುಣೋದಯ ಶಾಲೆ ಇಲ್ಲಿ ಸಂಘಟಿಸಲಾಯಿತ್ತು. ಕಾರ್ಯಕ್ರಮದಲ್ಲಿ ವಿಶೇಷ ಮಹಿಳಾ ಸಾದಕರುಗಳಿಗೆ ಅಭಿನಂಧಿಸಲಾಯಿತ್ತು.

* ಮಾರ್ಚ್ 19 ರಂದು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ ಇಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ಹಾಗೂ ನೆಹರು ಯುವ ಕೇಂದ್ರ, ಕೋಲಾರ–ಚಿಕ್ಕಬಳ್ಳಾಪುರ ಅವರ ಸಹಯೋಗದಲ್ಲಿ ರೋವರ್ಸ್–ರೇಂಜರ್ಸ್‌ಗಳಿಗೆ ಮಾಹಿತಿ ಕಾರ್ಯಕ್ರಮ ಮತ್ತು ಮಾದಕ ವ್ಯಸನದ ಕುರಿತು ಅರಿವು ಮತ್ತು ಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅಬಕಾರಿ ಉಪ ಅಧೀಕ್ಷಕರಾದ ಶ್ರೀ ಜಿ.ಎಸ್. ಪಾಟೀಲ್‌ರವರು ಮಾದಕ ವಸ್ತುಗಳ ಬಗ್ಗೆ ಅರಿವು ಮೂಡಿಸಿದರು. ಅಬಕಾರಿ ನೀರಿಕ್ಷಕರಾದ ಶ್ರೀಮತಿ ರೇಣುಕಾರವರು ಮಾದಕ ವಸ್ತುಗಳ ಬಗ್ಗೆ ಮಾತನಾಡಿ ಪ್ರತಿಜ್ಞೆ ಬೋಧಿಸಿದರು. ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ.ರವರು ರೋವರ್ಸ್–ರೇಂಜರ್ಸ್‌ಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಕುಸುಮ ಮಂಗಳರವರು ವಹಿಸಿ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಕಾರ್ಯಕ್ರಮವನ್ನು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ರೋವರ್ ಸ್ಕೌಟ್ ಲೀಡರ್ ಡಾ. ಪ್ರವೀಣ್‌ರವರು ಸಂಘಟಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಶ್ರೀ ಮೊಹಮ್ಮದ್ ಪಾಷ, ಯುವ ಸಮಿತಿಯ ಶ್ರೀ ಸಮೀರ್, ಶ್ರೀ ವರುಣ್, ಶ್ರೀ ಚರಣ್, ಶ್ರೀಮತಿ ಮಾನಸ, ಶ್ರೀ ಕಾವ್ಯ, ಶ್ರೀ ಶೀರಿಷಾ, ಶ್ರೀ ಪ್ರೇಮ ಹಾಗೂ ಸರ್ಕಾರಿ ಮಹಿಳಾ ಕಾಲೇಜಿನ ರೇಂಜರ್ಸ್ ವಿದ್ಯಾರ್ಥಿಗಳು ಮತ್ತು ಬಾಲಕರ ಕಾಲೇಜಿನ ರೋವರ್ಸ್ ರೇಂಜರ್ಸ್‌ಗಳು ಭಾಗವಹಿಸಿದರು.



## ಚಿತ್ರದುರ್ಗ

* ಫೆಬ್ರವರಿ 22 ರಂದು ಲಾರ್ಡ್ ಬೇಡನ್ ಪೋವೆಲ್‌ರ ಜನ್ಮ ದಿನಾಚರಣೆಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಂಪಯ್ಯನ ಮಾಳಿಗೆ ಗೊಲ್ಲರ ಹಟ್ಟಿ ಚಿತ್ರದುರ್ಗ ತಾ॥ ಇಲ್ಲಿ ಸಂಘಟಿಸಲಾಯಿತು. ಅಧ್ಯಕ್ಷತೆಯನ್ನು ಶ್ರೀಮತಿ ಪಿ.ಹೆಚ್. ಮಂಜುಳಮ್ಮ, ಬಡ್ತಿ ಮುಖ್ಯ ಶಿಕ್ಷಕಿರವರು ವಹಿಸಿದ್ದರು. ಶ್ರೀ ಬಿ.ಎನ್. ಸತ್ಯನಾರಾಯಣ ಸಹ ಶಿಕ್ಷಕರು ಸರ್ವರನ್ನು ಸ್ವಾಗತಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಶಾಲಾ ಆವರಣವನ್ನು ಸ್ವಚ್ಛಗೊಳಿಸಿ ನಂತರ ಬಿ.ಪಿ.ರವರ ಕಾರ್ಯಕ್ರಮದ ಕೊಠಡಿಯನ್ನು ಶುಭ್ರಗೊಳಿಸಿ ಅಲಂಕಾರ ಮಾಡಿ ಮಕ್ಕಳಿಂದ ಭಕ್ತಿಗೀತೆಗಳನ್ನು ಹೇಳಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕಿ ಮಾತನಾಡಿ "ವಿಶ್ವದಾದ್ಯಂತ ಬೇಡನ್ ಪೋವೆಲ್‌ರ ಜನ್ಮ ದಿನಾಚರಣೆ ಆಚರಿಸಲಾಗುತ್ತಿದೆ. ಸ್ಕೌಟ್ಸ್ ಎಂದರೆ ಶಿಸ್ತು, ಸಮಯಪಾಲನೆ, ಧೈರ್ಯವಂತಿಕೆ, ಪ್ರಮಾಣಿಕತೆ. ಪರಿಶುದ್ಧತೆಯನ್ನು ನೀವೆಲ್ಲರು ಅಳವಡಿಸಿಕೊಂಡು ಅತ್ಯುತ್ತಮ ಪ್ರಜೆಗಳಾಗಬೇಕು, ಸಮಾಜಕ್ಕೆ ಮತ್ತು ದೇಶಕ್ಕೆ ಮಾದರಿಯಾಗಬೇಕು" ಎಂದು ತಿಳಿಸಿದರು. ಖ.ಆ.ಓ.ಅ ಅಧ್ಯಕ್ಷರಾದ ಶ್ರೀ ಮಹಲಿಂಗಪ್ಪನವರು ಶುಭ ಹಾರೈಸಿದರು. ಸ್ಕೌಟ್ಸ್ ಮಾಸ್ಟರ್ ಶ್ರೀ ತಿಪ್ಪೇಶ್ ಎನ್., ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ವಂದನಾರ್ಪಣೆಯನ್ನು ಸಲ್ಲಿಸಿದರು.



* ಫೆಬ್ರವರಿ 22 ರಂದು ಚಿತ್ರದುರ್ಗ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಯಿಂದ ಬಿ.ಪಿ.ಯವರ ಜನ್ಮ ದಿನಾಚರಣೆ, ಥಿಂಕಿಂಗ್ ಡೇ ಆಚರಿಸಲಾಯಿತು. ಮತ್ತು ರಸ್ತೆ ಬದಿಗಳಲ್ಲಿ ಹಾಗೂ ದೇವಸ್ಥಾನ ಗ್ರಾಮ ಪಂಚಾಯಿತಿ. ಸಾರ್ವಜನಿಕ ಆಸ್ಪತ್ರೆ ಇನ್ನಿತರೆ ಸ್ಥಳಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಸ್ವಚ್ಛತೆ ಕಾರ್ಯಕ್ರಮದ ಅಭಿಯಾನವನ್ನು ಏರ್ಪಡಿಸಿದ್ದರು.

* ಫೆಬ್ರವರಿ 22 ರಂದು ವಾಗ್ದೇವಿ ಇಂಟರ್ ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್ ಹೊಳಲ್ಕೆರೆ ಇಲ್ಲಿ ಬಿ.ಪಿ.ಯವರ ಜನ್ಮ ದಿನಾಚರಣೆ, ಥಿಂಕಿಂಗ್ ಡೇ ಆಚರಿಸಲಾಯಿತು. ಇದರ ಅಧ್ಯಕ್ಷತೆಯನ್ನು ಆಡಳಿತ ಕಾರ್ಯದರ್ಶಿಗಳು ಶ್ರಿ ಸಿದ್ದಲಿಂಗ ಸ್ವಾಮಿಯವರು ವಹಿಸಿದ್ದರು. "ಸ್ಕೌಟ್ಸ್ ಎಂದರೆ ಶಿಸ್ತು, ಸಮಯಪಾಲನೆ, ಧೈರ್ಯವಂತಿಕೆ, ಪ್ರಾಮಾಣಿಕತೆ. ಪರಿಶುದ್ಧತೆಯನ್ನು ನೀವೆಲ್ಲರು ಅಳವಡಿಸಿಕೊಂಡು ಅತ್ಯುತ್ತಮ ಪ್ರಜೆಗಳಾಗಬೇಕು, ಸಮಾಜಕ್ಕೆ ಮತ್ತು ದೇಶಕ್ಕೆ ಮಾದರಿಯಾಗಬೇಕು" ಎಂದು ತಿಳಿಸಿದರು.

* ಫೆಬ್ರವರಿ 22 ರಂದು ಡಿ.ವಿ.ಎಸ್. ಭರಮಸಾಗರ ಶಾಲೆಯಲ್ಲಿ ಬಿ.ಪಿ.ಯವರ ಜನ್ಮ ದಿನಾಚರಣೆ, ಥಿಂಕಿಂಗ್ ಡೇ ಆಚರಿಸಲಾಯಿತು. ಇದರ ಅಧ್ಯಕ್ಷತೆಯನ್ನು ಪ್ರಾಂಶುಪಾಲರು ವಹಿಸಿದ್ದರು. ಸ್ಕೌಟ್ಸ್ ಎಂದರೆ ಶಿಸ್ತು, ಸಮಯಪಾಲನೆ, ಧೈರ್ಯವಂತಿಕೆ, ಪ್ರಾಮಾಣಿಕತೆ. ಪರಿಶುದ್ಧತೆಯನ್ನು ನೀವೆಲ್ಲರು ಅಳವಡಿಸಿಕೊಂಡು ಅತ್ಯುತ್ತಮ ಪ್ರಜೆಗಳಾಗಬೇಕು, ಸಮಾಜಕ್ಕೆ ಮತ್ತು ದೇಶಕ್ಕೆ ಮಾದರಿಯಾಗಬೇಕು ಎಂದು ತಿಳಿಸಿದರು.

* ಮಾರ್ಚ್ 07 ರಿಂದ 09ರ ವರೆಗೆ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಪ್ರವೇಶದಿಂದ ಪ್ರಥಮ ಸೋಪಾನದ ವರೆಗೆ ಮಾಹಿತಿ ಶಿಬಿರ ಮತ್ತು ಬೇಸಿಗೆ ಶಿಬಿರವನ್ನು ಸಂಘಟಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಸಂಘಟಕ ಶ್ರೀ ಮಲ್ಲೇಶಪ್ಪ ಕೆ.ಟಿ ಮತ್ತು ಜಿಲ್ಲಾ ಸಂಘಟನಾ ಶಿಕ್ಷಕ ಶ್ರಿ ರವಿ ಸಿ., ಯುವ ಸಮಿತಿ ಅಧ್ಯಕ್ಷರಾದ ಶ್ರೀ ಸಂತೋಷ ಎಸ್., ಯುವ ಸಮಿತಿಯ ಕಾರ್ಯದರ್ಶಿ ಶ್ರೀ ಚಿದಾನಂದ ಎಲ್., ಶಾಲಾ ಮುಖ್ಯೋಪಾಧ್ಯಯರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಸಂಜೆ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಎಸ್.ಜೆ.ಎಂ. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು ಉದ್ಘಾಟನೆಯನ್ನು ಮಾಡಿದರು.



## ದಕ್ಷಿಣ ಕನ್ನಡ

* ಫೆಬ್ರವರಿ 15 ರಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ ಬೆಳ್ತಂಗಡಿಗೆ ಅಂತರಾಷ್ಟ್ರೀಯ ಸಹಾಯಕ ಆಯುಕ್ತರಾದ ಶ್ರೀ ಮಧುಸೂದನ್ ಅವಾಲ ಭೇಟಿ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಬಿ. ಸೋಮಶೇಖರ್ ಶೆಟ್ಟಿ, ಮುಖ್ಯ ಶಿಕ್ಷಕರಾದ ಶ್ರೀಮತಿ ಹೇಮಲತಾ ಎಂ.ಆರ್., ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀ ಭರತ್‌ರಾಜ್ ಕೆ., ಸ್ಥಳೀಯ ಸಮಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮಿಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ಕೌಟ್ ವಿದ್ಯಾರ್ಥಿ



ಕು॥ ಆಶಿಷ್ ಆರ್. ಕಾಮತ್, ಕಾರ್ಯಕ್ರಮ ನಿರೂಪಣೆ ಮಾಡಿದರು. ಗೈಡ್ ವಿದ್ಯಾರ್ಥಿ ಕು॥ ಪ್ರಾಪ್ತಿ ವಂದನಾರ್ಪಣೆ ಮಾಡಿದರು.

* ಫೆಬ್ರವರಿ 19 ರಿಂದ 23ರ ವರೆಗೆ ನ್ಯಾಷನಲ್ ಯೂತ್ ಕಾಂಪ್ಲೆಕ್ಸ್ ಗದ್‌ಪುರಿ ಹರಿಯಾಣದಲ್ಲಿ ನಡೆದ ಗೋಲ್ಡನ್ ಆರೋರ‍್ಯಾಲಿಗೆ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ ದ.ಕ. ಜಿಲ್ಲಾ ಸಂಸ್ಥೆಯ ಬೆಳ್ತಂಗಡಿ ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುಂಡತ್ತೋಡಿಯ ಫ್ಲಾಕ್ ಲೀಡರ್ ಶ್ರೀಮತಿ ಸೇವಂತಿ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂಡಾಜೆಯ ಬುಲ್‌ಬುಲ್ ವಿದ್ಯಾರ್ಥಿ ದ್ವಿಶಾ ಇವರು ಗೋಲ್ಡನ್ ಆರೋ ಪ್ರಮಾಣ ಪತ್ರವನ್ನು ಚೀಫ್ ನ್ಯಾಷನಲ್ ಕಮಿಷನರ್ ಆದ ಶ್ರೀ ಕೆ.ಕೆ. ಖಂಡೆಲ್ವಾಲ್ ಅವರಿಂದ ಸ್ವೀಕರಿಸಿದರು.



* ಫೆಬ್ರವರಿ 22 ರಂದು ಮಂಗಳೂರು ನಗರ ಉತ್ತರ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್–ಗೈಡ್ಸ್ ರ‍್ಯಾಲಿ ಮತ್ತು ಬುಲ್‌ಬುಲ್ ಉತ್ಸವವು ಕಾರ್ಮೆಲ್ ಶಾಲೆ, ಪಾಂಡೇಶ್ವರ, ಮಂಗಳೂರು ಇಲ್ಲಿ ನಡೆಯಿತು. ರ‍್ಯಾಲಿಯಲ್ಲಿ ನಡೆದ ಜಾಥಾವನ್ನು ಸಂಚಾರ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ವಿಶ್ವನಾಥ್‌ರೈ ಉದ್ಘಾಟಿಸಿ ರಸ್ತೆ ನಿಯಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾರ್ಮೆಲ್ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಲಿಲ್ಲಿ ಪುಷ್ಪ, ಮಂಗಳೂರು ನಗರ ಸಂಚಾರ ಉಪ ಪೋಲಿಸ್ ಆಯುಕ್ತರಾದ ಶ್ರೀಮತಿ ನಜಾಮಾ ಫಾರುಕೀ, ಮಂಗಳೂರು ನಗರ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಜೇಮ್ಸ್ ಕುಟಿನ, ಇವರುಗಳು ಉಪಸ್ಥಿತರಿದ್ದರು. ಶಿಬಿರಾಗ್ನಿ ಕಾರ್ಯಕ್ರಮವನ್ನು ಅಮೃತ ವಿದ್ಯಾಲಯ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಅಕ್ಷತಾ ಶೆಣೈ ಉದ್ಘಾಟಿಸಿದರು. ಕಾರ್ಮೆಲ್ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಇತರ ಪದಾಧಿಕಾರಿಗಳು, ಸ್ಥಳೀಯ ಸಂಸ್ಥೆಯ ಎ.ಡಿ.ಸಿ ಶ್ರೀ ರೋಹಿತ್‌ರಾವ್ ಉಪಸ್ಥಿತರಿದ್ದರು.




* ಫೆಬ್ರವರಿ 21 ರಿಂದ 22ರ ವರೆಗೆ ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಉತ್ಸವವು ಜಿಲ್ಲಾ ತರಬೇತಿಕೇಂದ್ರ ಪಿಲಿಕುಳ ಇಲ್ಲಿ ನಡೆಯಿತು. ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್ ರಾವ್ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಪ್ರಾಂತೀಯ ವಿಜ್ಞಾನ ಕೇಂದ್ರ ಪಿಲಿಕುಳದ ನಿರ್ದೇಶಕರಾದ ಡಾ॥ ಕೆ.ವಿ. ರಾವ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಜಿಲ್ಲಾ ಸಂಸ್ಥೆಯ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಕಾರ್ಯದರ್ಶಿಯಾದ ಶ್ರಿ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿ, ಸ್ಥಾನಿಯ ಆಯುಕ್ತೆ ಶ್ರೀಮತಿ ಗೀತಾ ಜೂಡಿತ್ ಸಲ್ಡಾನ್ಹ ಉಪಸ್ಥಿತರಿದ್ದರು. ಶ್ರೀಮತಿ ಸುಫಲಾ ಬಿ., ರ‍್ಯಾಲಿಯ ಮುನ್ನೋಟವನ್ನು ನೀಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರೀತಿ ಲೋಬೋ ಸ್ವಾಗತಿಸಿದರು. ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀಮತಿ ಸಂಧ್ಯಾ ವಂದಿಸಿದರು. ಸಿಸ್ಟರ್ ರೀಟಾ ಕಾರ್ಯಕ್ರಮ



ನಿರ್ವಹಿಸಿದರು. ಸ್ಕೌಟ್ ವಿಭಾಗದ ನಾಯಕಿಯಾಗಿ ಶ್ರೀಮತಿ ಭವ್ಯಶ್ರೀ, ಗೈಡ್ಸ್ ವಿಭಗದ ನಾಯಕಿಯಾಗಿ ಶ್ರೀಮತಿ ಗೀತಾ ಜೂಡಿತ್ ಸಲ್ಡಾನ್ಹ, ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ವನಜ, ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಶ್ರೀಮತಿ ಕಾತ್ಯಾಯಿನಿ ಕರ್ತವ್ಯ ನಿರ್ವಹಿಸಿದರು. ಫೆಬ್ರವರಿ 22 ರಂದು ಸಮಾರೋಪ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಲೇಡಿಗೋಶನ್ ಆಸ್ಪತ್ರೆಯ ಆರ್.ಎಂ.ಒ ಡಾ॥ ಜಗದೀಶ್ ಬಿ. ಆಗಮಿಸಿದ್ದರು.

* ಫೆಬ್ರವರಿ 21 ಮತ್ತು ಫೆಬ್ರವರಿ 22 ರಂದು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ಆಯೋಜಿಸಲಾದ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದ.ಕ. ಜಿಲ್ಲಾ ಸಂಸ್ಥೆಯ ವಯಸ್ಕ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಎಮ್.ಜಿ. ಕಜೆ ಹಾಗೂ ಉಪ್ಪಿನಂಗಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀಮತಿ ಪ್ರೇಮಾ ಇವರನ್ನು ಸನ್ಮಾನಿಸಲಾಯಿತು.

* ಮಾರ್ಚ್ 02 ರಂದು ದ.ಕ. ಜಿಲ್ಲಾ ಸಂಸ್ಥೆಯ ಜಿಲ್ಲಾ ಮಟ್ಟದ ತೃತೀಯ ಚರಣಕಬ್, ಸುವರ್ಣಗರಿ ಬುಲ್‌ಬುಲ್, ತೃತೀಯ ಸೋಪಾನ ಸ್ಕೌಟ್ಸ್–ಗೈಡ್ಸ್, ನಿಪುಣ್ ರೋವರ್–ರೇಂಜರ್ ಪ್ರಶಸ್ತಿ ಪ್ರಧಾನ ಸಮಾರಂಭವು ದಕ್ಷಿಣ ಕನ್ನಡ ಜಿಲ್ಲೆಯ ಸ್ಕೌಟ್–ಗೈಡ್ ಸಂಸ್ಥೆಯ ಅಧ್ಯಕ್ಷರಾದ, ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಯಾಗಿರುವ ಶ್ರೀ ಮುಲ್ಲೈ ಮುಹಿಲನ್ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಭವನ, ಕಲೆಕ್ಟರ್ಸ್ ಗೇಟ್, ಬಲ್ಮಠ, ಮಂಗಳೂರು ಇಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಮಹಮ್ಮದ್ ತುಂಬೆಯವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಅತಿಥಿಗಳನ್ನು ಸ್ವಾಗತಿಸಿದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲ ರಂಗಯ್ಯ ಧನ್ಯವಾದ ನೀಡಿದರು. ಜಿಲ್ಲಾ ಜೊತೆ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರುಗಳಾದ ಶ್ರೀ ವಸಂತ್ ರಾವ್, ಶ್ರೀನಿವಾಸ್ ಪೂಜಾರಿ, ಸ್ಕೌಟ್ ತರಬೇತು ಆಯುಕ್ತಾರದ ಶ್ರೀ ಶಾಂತರಾಮ ಪ್ರಭು, ವಿವಿಧ ಶಾಲಾ ಕಾಲೇಜುಗಳ ಸ್ಕೌಟರ್–ಗೈಡರ್‌ಗಳು, ಪೋಷಕರು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ವಿವಿಧ ಶಾಲಾ ಕಾಲೇಜುಗಳ ಸ್ಕೌಟ್–ಗೈಡ್, ಕಬ್–ಬುಲ್‌ಬುಲ್, ರೋವರ್–ರೇಂಜರ್ಸ್‌ಗಳು ಉಪಸ್ಥಿತರಿದ್ದರು.



* ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯಆಶ್ರಯದಲ್ಲಿ ಮಾರ್ಚ್ 08 ರಂದು ಮಹಿಳಾ ದಿನಾಚರಣೆ ಪ್ರಯುಕ್ತವಾಗಿ ಬನ್ನಿ ಮಕ್ಕಳ “ಬಿ ಸ್ಮೈಲಿಂಗ್” ಕಾರ್ಯಕ್ರಮವು ಮಂಗಳೂರಿನ ಕದ್ರಿ ಪಾರ್ಕ್ ನಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್‌ರವರಅಧ್ಯಕ್ಷತೆಯಲ್ಲಿ ನಡೆಯಿತು. ಲಯನ್ಸ್ ಕನಕವಲ್ಲಿ ಹೆಚ್‌ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ದಾವಣಗೆರೆ

* ಫೆಬ್ರವರಿ 18 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಶ್ರೀ ಜಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನಗಿರಿ ಇವರ ನೇತೃತ್ವದಲ್ಲಿ, ನುಗ್ಗಿಹಳ್ಳಿ ಗ್ರಾಮ ಪಂಚಾಯತ್‌ರವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪಿ.ಡಿ.ಓ.ರವರು ಭಾಗವಹಿಸಿ ಮಕ್ಕಳಿಗೆ ಶುಭ ಹಾರೈಸಿದರು. ಸುಮಾರು 260 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಶ್ರೀ ಕುಮಾರ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ಮುಸ್ತಫ ಯುವ ಸಮಿತಿ ಸದಸ್ಯರು, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ಸ್ಕೌಟರ್ಸ್ ಗೈಡರ್ಸ್‌ಗಳು ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಎಸ್.ವಿ.ಎಸ್ ಕಾನ್ವೆಂಟ್ ನಲ್ಲಿ ಕುಕ್ಕಿಂಗ್ ಬ್ಯಾಡ್ಜ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು.

* ಫೆಬ್ರವರಿ 22 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಸಂಸ್ಥಾಪಕರ ದಿನಾಚರಣೆ ಮತ್ತು ಚಿಂತಕರ ದಿನಾಚರಣೆ ಅಂಗವಾಗಿ ನಗರದ ಕಾಸಲ್ ಶ್ರೀನಿವಾಸ ಶೆಟ್ಟಿ ಪಾರ್ಕ್‌ನಲ್ಲಿ ಚಿತ್ರಕಲಾ ಸ್ಪರ್ಧೆ ಮತ್ತು ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ರ್‍ಯಾಲಿಯನ್ನು ಉದ್ಘಾಟಿಸಿ ಈ ದಿನದ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ದಿನೇಶ್ ಕೆ. ಶೆಟ್ಟಿ ಅಧ್ಯಕ್ಷರು, ದೂಡಾ, ದಾವಣಗೆರೆ ಮತ್ತು ಅಧ್ಯಕ್ಷರು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ, ಶ್ರೀ ಮಂಜುನಾಥ್ ಗಡಿಗುಡಾಳ್, ಸದಸ್ಯರು ಮಹಾನಗರ ಪಾಲಿಕೆ, ದಾವಣಗೆರೆ, ಶ್ರೀ ಮಹಾಲಿಂಗಪ್ಪ, ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆ, ಶ್ರೀ ಹಾಲಪ್ಪ, ಶ್ರೀಮತಿ ತುಳಸಾಮಣಿ, ಜಿಲ್ಲಾ ತರಬೇತಿ ಆಯುಕ್ತರುಗಳು, ಸ್ಕೌಟರ್ಸ್ ಗೈಡರ್ಸ್‌ಗಳು, ಯುವ ಸಮಿತಿ ಸದಸ್ಯರುಗಳು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ಆಯೋಜಿಸಿದ್ದರು.



* ಫೆಬ್ರವರಿ 22 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಸಂಸ್ಥಾಪಕರ ದಿನಾಚರಣೆ ಮತ್ತು ಚಿಂತನಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಡಾ. ಜಸ್ಟೀನ್ ಡಿಸೋಜರವರು ಮಾತನಾಡಿ ಸ್ಕೌಟ್ ಗೈಡ್, ಕಬ್–ಬುಲ್‌ಬುಲ್ ಮತ್ತು ಬನ್ನೀಸ್‌ಗಳಿಗೆ ಈ ದಿನದ ಮಹತ್ವವನ್ನು ತಿಳಿಸಿದರು. ಈ ಸಂದರ್ಭದಲ್ಲಿ ಸಿದ್ದಗಂಗಾ ಶಾಲೆಯ ಸುತ್ತಮುತ್ತಲಿನ ಬೀದಿಗಳಲ್ಲಿ ಮಕ್ಕಳು ರ್‍ಯಾಲಿಯನ್ನು ನಡೆಸಿಕೊಟ್ಟರು. ಚಿತ್ರಕಲಾ ಸ್ಪರ್ಧೆ, ಮಾಸ್ಕ್ ತಯಾರಿಕೆಯಂತಹ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಸಿದ್ದಗಂಗಾ ಶಾಲೆಯ 750ಕ್ಕೂ ಹೆಚ್ಚು ಕಬ್–ಬುಲ್‌ಬುಲ್, ಸ್ಕೌಟ್–ಗೈಡ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ರೇಖಾರಾಣಿ ಜಿಲ್ಲಾ ಸಹಾಯಕ ಆಯುಕ್ತರು ಮಕ್ಕಳಿಗೆ ತಂಪು ಪಾನೀಯ ವಿತರಿಸಿದರು. ಶ್ರೀ ಮಹೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು.

* ಫೆಬ್ರವರಿ 22 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆಯಲ್ಲಿ ಬೇಡನ್ ಪಾವೆಲ್‌ರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಸ್ಕೌಟ್–ಗೈಡ್‌ಗಳು ಬೇಡನ್ ಪಾವೆಲ್‌ರವರ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಪ್ರಣೀತ ಗಿರಿರಾಜ್, ಶ್ರೀ ಕಲ್‌ವೀರಪ್ಪ ಮುಖ್ಯೋಪಾಧ್ಯಾಯರು, ಶ್ರೀ ಸೋಮ್ಲಾ ನಾಯಕ್ ಸ್ಕೌಟ್ ಮಾಸ್ಟರ್, ಶ್ರೀಮತಿ ಭಾವನಾ ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.

* ಫೆಬ್ರವರಿ 22 ರಿಂದ 23ರ ವರೆಗೆ ಧ.ರಾ.ಮ ಸ್ಕೌಟ್ ಭವನದಲ್ಲಿ ನಿಪುಣ್ ಪರೀಕ್ಷಾ ಶಿಬಿರ ಮತ್ತು ಪದಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ರೋವರ್ ವಿಭಾಗದ ನಾಯಕರಾಗಿ ಶ್ರೀ ಮುಸ್ತಫಾ ರೇಂಜರ್ ವಿಭಾಗದ ನಾಯಕರಾಗಿ ಕುಮಾರಿ ರಾಧಿಕಾ ಕಾರ್ಯನಿರ್ವಹಿಸಿದರು. ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ಶಿಬಿರದ ಉಸ್ತುವಾರಿ ವಹಿಸಿದ್ದರು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಭಾಗವಹಿಸಿ ರೋವರ್ಸ್–ರೇಂಜರ್ಸ್‌ಗಳಿಗೆ ಶುಭ ಹಾರೈಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಮತ್ತು ಯುವ ಸಮಿತಿ ಸದಸ್ಯರು ಶಿಬಿರವನ್ನು ಆಯೋಜಿಸಿದರು. ಶಿಬಿರದಲ್ಲಿ 80 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.



* ಫೆಬ್ರವರಿ 22 ರಂದು ಹರಿಹರ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಸಿಸ್ಟರ್ ಶೀಲಾ ರವರು ರ್‍ಯಾಲಿಯನ್ನು ಉದ್ಘಾಟಿಸಿದರು. 138 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಪ್ರಭಾಕರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ಜ್ಞಾನಪ್ರಕಾಶ್, ಸಹ ಕಾರ್ಯದರ್ಶಿಗಳು ಮತ್ತು ಶ್ರೀ ರವಿ ಖಜಾಂಚಿಗಳು, ಶ್ರೀ ವಿಜಯ್, ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ಫೆಬ್ರವರಿ 22 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತಿಮ್ಲಾಪುರದಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು.

* ಫೆಬ್ರವರಿ 23 ರಂದು ಸಂಸ್ಥಾಪಕರ ದಿನಾಚರಣೆ ಅಂಗವಾಗಿ ನಗರದ ಶ್ರೀರಾಮ್ ಪಾರ್ಕ್ ಸ್ವಚ್ಛತಾ ಕಾರ್ಯಕ್ರಮವನ್ನು ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಆಯೋಜಿಸಲಾಗಿತ್ತು. ಶ್ರೀ ದಿನೇಶ್ ಕೆ. ಶೆಟ್ಟಿ ಅಧ್ಯಕ್ಷರು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಇವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ.ಜೆ ಎಸ್.ಜಿ.ವಿ. ಉಪಸ್ಥಿತರಿದ್ದರು.



* ಫೆಬ್ರವರಿ 24 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ಉಧ್ಘಾಟನೆಯನ್ನು ಶ್ರೀ ಸಿ. ನಿರಂಜನ್, ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರು ಮತ್ತು

ಆರ್.ವಿ.ಜಿ.ಕೆ. ಕನ್ನಡ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರು ನೆರವೇರಿಸಿದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀ ಹಾಲಪ್ಪ, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು. ಶ್ರೀ ಸುರೇಶ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರವನ್ನು ನಡೆಸಿಕೊಟ್ಟರು.

* ಫೆಬ್ರವರಿ 28 ರಂದು ನ್ಯಾಮತಿ ಸ್ಥಳೀಯ ಸಂಸ್ಥೆ ವತಿಯಿಂದ ಒಂದು ದಿನದ ಮಾಹಿತಿ ಶಿಬಿರವನ್ನು ಶಾಂಭವಿ ಹಿರಿಯ ಪ್ರಾಥಮಿಕ ಶಾಲೆ, ಸುರಹೊನ್ನೆ ಇಲ್ಲಿ ಆಯೋಜಿಸಲಾಗಿತ್ತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಆರ್.ಟಿ. ಗಣೇಶಪ್ಪ ಶಿಬಿರವನ್ನು ನಡೆಸಿಕೊಟ್ಟರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿ ಸ್ಕೌಟಿಂಗ್ ಗೈಡಿಂಗ್ ಇತಿಹಾಸ ಮತ್ತು ಘಟಕ ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು.

* ಮಾರ್ಚ್ 07 ರಿಂದ 09ರ ವರೆಗೆ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ರೇಂಜರ್ಸ್‌ಗಳ ಪ್ರೇರಣಾ ಕಾರ್ಯಕ್ರಮವನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ವಾರ್ತಾ ಪತ್ರಿಕೆ ಸಂಪಾದಕರು ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಶಾಂತಾ ಎಸ್. ಯಾವಗಲ್, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬೂಸ್ನೂರು ವಿಶ್ವನಾಥ್, ಜಿಲ್ಲಾ ಖಜಾಂಚಿಗಳು, ಶ್ರೀಮತಿ ರೇಖಾರಾಣಿ, ಜಿಲ್ಲಾ ಸಹಾಯಕ ಆಯುಕ್ತರು ಗೈಡ್ ಉಪಸ್ಥಿತರಿದ್ದರು.



* ಮಾರ್ಚ್ 07 ರಂದು ಹರಿಹರ ಸ್ಥಳೀಯ ಸಂಸ್ಥೆ ಮತ್ತು ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆಯು ಸಹಭಾಗಿತ್ವದಲ್ಲಿ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಎದುರಾಗುವಂತಹ ಪರಿಸ್ಥಿತಿಗಳಲ್ಲಿ ಕೈಗೊಳ್ಳುವ ಮುಂಜಾಗ್ರತ ಕ್ರಮಗಳು ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಹರಿಹರ ಅಗ್ನಿಶಾಮಕದಳ ವತಿಯಿಂದ ಸ್ಕೌಟ್ ಗೈಡ್ ಮಕ್ಕಳಿಗೆ ನೀಡಿದರು. ಶ್ರೀ ಜ್ಞಾನಪ್ರಕಾಶ್ ಸ್ಕೌಟ್ ಮಾಸ್ಟರ್ ಕಾರ್ಯಕ್ರಮದ ನೇತೃತ್ವವಹಿಸಿದ್ದರು.

* ಮಾರ್ಚ್ 03 ರಿಂದ 30ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆ, ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಚೇತನ ಓಪನ್ ಗೈಡ್ ಗ್ರೂಪ್ ವತಿಯಿಂದ ಬಾಪೂಜಿ ಶಾಲೆಯಲ್ಲಿ ಯೋಗ ಶಿಬಿರವನ್ನು ಆಯೋಜಿಸಲಾಗಿತ್ತು.

* ಮಾರ್ಚ್ 01 ರಂದು ಜೀನಿಯಸ್ ಶಾಲೆಯ ಸ್ಕೌಟ್ ಮತ್ತು ಗೈಡ್‌ಗಳಿಗೆ ಕುಕ್ಕಿಂಗ್ ಬ್ಯಾಡ್ಜ್ ಚಟುವಟಿಕೆಯನ್ನು ಶ್ರೀಮತಿ ಶಶಿರೇಖಾ ಲೇಡಿ ಸ್ಕೌಟ್ ಮಾಸ್ಟರ್‌ರವರು ಆಯೋಜಿಸಿದ್ದರು.

* ಫೆಬ್ರವರಿ 28 ರಂದು ಶ್ರೀ ಗದಿಗೆಪ್ಪ ಸ್ಕೌಟ್ ಮಾಸ್ಟರ್, ಉಕ್ಕಡಗಾತ್ರಿ ಇವರು ಉಕ್ಕಡಗಾತ್ರಿ ಕರಿಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿದರು.

* ಫೆಬ್ರವರಿ 22 ರಂದು ಅಮೃತ ವಿದ್ಯಾಲಯ ಶಾಲೆಯ ಸ್ಕೌಟ್ ಗೈಡ್‌ಗಳು ಸಂಸ್ಥಾಪಕರ ದಿನಾಚರಣೆ ಮತ್ತು ಚಿಂತನಾ ದಿನಾಚರಣೆ ಪ್ರಯುಕ್ತ ಪ್ರೇಮಾಲಯ ನಿರ್ಗತಿಕ ಮಕ್ಕಳ ಕುಟೀರಕ್ಕೆ ಭೇಟಿ ನೀಡಿ ಅಲ್ಲಿನ ಮಕ್ಕಳಿಗೆ ಹಣ್ಣು ಹಾಲು ಹಾಗೂ ದಿನಬಳಕೆ ವಸ್ತುಗಳನ್ನು ವಿತರಿಸಿದರು. ಈ ಕಾರ್ಯಕ್ರಮವನ್ನು ಶ್ರೀ ಕುಮಾರಸ್ವಾಮಿ ಕಬ್ ಮಾಸ್ಟರ್ ನಡೆಸಿಕೊಟ್ಟರು.

## ಗದಗ

* ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವದತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿ ಪೂರ್ವ ವಾಣಿಜ್ಯ ಮಹಾ ವಿದ್ಯಾಲಯದ ವಿಶ್ವಪ್ರಭ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ವತಿಯಿಂದ ರಾಬರ್ಟ್ ಬೇಡೆನ್ ಪಾವೇಲ್ ಅವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ ಗ್ರಂಥಪಾಲಕರಾದ ಶ್ರೀ ಪ್ರಶಾಂತ್ ಹೊಂಬಾಳಿಯವರು ಸ್ಕೌಟ್ ಪ್ರತಿಜ್ಞೆಯ ಅಂಶಗಳನ್ನು ಕುರಿತು ವಿವರವಾಗಿ ತಿಳಿಸಿ ಜೀವನ ಸಾರ್ಥಕಗೊಳಿಸಿಕೊಳ್ಳಲು ಸರ್ವರೂ ಈ ಪ್ರತಿಜ್ಞೆ ಸ್ವೀಕಾರ ಮಾಡಬಹುದು ಎಂಬುದಾಗಿ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಶ್ರೀ ಆರ್.ಆರ್. ಕುಲಕರ್ಣಿಯವರು ಸ್ಕೌಟ್ ಮತ್ತು ಗೈಡ್ಸ್ ಚಳುವಳಿಯಲ್ಲಿ ತೊಡಗಿಕೊಳ್ಳುವುದರಿಂದ ಸರ್ವ ಕ್ಷೇತ್ರಗಳ ಜ್ಞಾನ ಮತ್ತು ಕೌಶಲಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ತಾವು ಸ್ಕೌಟ್ ವಿದ್ಯಾರ್ಥಿಯಾಗಿದ್ದಾಗ ಮಾಡಿದ ಕಾರ್ಯ ಹಾಗೂ ಕಾರ್ಯಕ್ರಮಗಳನ್ನು ತಿಳಿಸುವ ಮೂಲಕ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಕಾರ್ಯ ಪ್ರವೃತ್ತರಾಗುವಂತೆ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ತಿಳಿಸಿದರು. ನಂತರ ರೋವರ್ಸ್ ಮತ್ತು ರೇಂಜರ್ಸ್‌ಗಳು ಕಾಲೇಜಿನ ಆವರಣದಲ್ಲಿರುವ ಗಿಡಗಳ ಸುತ್ತ ನೀರು ನಿಲ್ಲಲು ಅನುಕೂಲವಾಗುವಂತೆ ಗುಣಿತೆಗೆಯುವ ಮೂಲಕ ಶ್ರಮದಾನ ಮಾಡಿದರು. ಕಾರ್ಯಕ್ರಮವನ್ನು ಕು॥ ಅನುಷಾ ಕೋರಿಮಠ ಅವರು ನಿರೂಪಣೆ ಮಾಡಿದರು, ಕು॥ ವೈಣವಿ ಅಂತಪೂರವರು ರಾಬರ್ಟ್ ಬೇಡೆನ್ ಪಾವೇಲ್ ಅವರ ಜೀವನ ಚರಿತ್ರೆಯ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದರು, ಕು॥ ತೇಜಶ್ವೀನಿ ಮಾಂತ ಅವರು ವಂದನಾರ್ಪಣೆ ಮಾಡಿದರು. ಹಾಗೂ ಕಾಲೇಜಿನ ಆರ್.ಎಸ್.ಎಲ್. ಶ್ರೀ. ಬಸವರಾಜ ಟಿ.ಪಿ., ಆರ್.ಎಲ್. ಶ್ರೀಮತಿ ಅಕ್ಷತಾ ಏಳೂರ, ಅರ್ಥಶಾಸ್ತ್ರ ಉಪನ್ಯಾಸಕರಾದ ಶ್ರೀ ರವಿ ಡಿ. ನಾಯ್ಕ ಹಾಗೂ ಎಲ್ಲ ಬೋಧಕ ಹಾಗೂ ಬೋದಕೇತರ ಸಿಂಬ್ಬದಿ ಉಪಸ್ಥಿತರಿದ್ದರು.



* ಫೆಬ್ರವರಿ 19 ರಂದು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಅಂಗವಾಗಿ ಸೌಕ್ಯದಾ ಆಸ್ಪತ್ರೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಡಾ॥ ತೇಜಸ್ವಿನಿ ಬಿ. ಹಿರೇಮಠ ಹಾಗೂ ಡಾ॥ ಶಿವನಗೌಡ ಜೋಳದ ರಾಶಿಯವರು ಗರ್ಭಕಂಠದ ಕ್ಯಾನ್ಸರ್ ಕಾರಣಗಳು ಮತ್ತು ತಡೆಗಟ್ಟುವಿಕ್ಕೆ ಬಗ್ಗೆ ಅರಿವು ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ಆದರ್ಶನ ಶಿಕ್ಷಣ ಸಮಿತಿಯ ಶ್ರೀ ಡಿ.ಎಸ್. ಕುರ್ತಕೋಟಿ ಮೆಮೋರಿಯಲ್ ಪದವಿಪೂರ್ವ ವಾಣಿಜ್ಯ ಮಹಾವಿದ್ಯಾಲಯ ಗದಗ, ಕಾಲೇಜಿನ ವಿಶ್ವ ಪ್ರಭಾ ರೇಂಜರ್ಸ್ ಘಟಕದ ರೇಂಜರ್ಸ್‌ಗಳು ಪಾಲ್ಗೊಂಡು ವಿಷಯದ ಬಗ್ಗೆ ಮಾಹಿತಿ ಪಡೆದರು.

* ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವದತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವಪ್ರಭ ರೋವರ್ಸ್ ಮತ್ತು ರೇಂಜರ್ಸ್ ಘಟಕ ಹಾಗೂ ಶ್ರೀ ವಿ.ಆರ್. ಕುಷ್ಟಗಿ ಮೇಮೊರಿಯಲ್ ವಾಣಿಜ್ಯ ಕಾಲೇಜು, ಗದಗ–ಬೆಟಗೇರಿಯ ಎನ್.ಎಸ್.ಎಸ್.



ಘಟಕದ ಸಹಯೋಗದೊಂದಿಗೆ, ಪಕ್ಷಿ ಕಲ್ಯಾಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಪಕ್ಷಿಗಳ ಸಂತತಿಯನ್ನು ಉತ್ತೇಜಿಸಲು, ಗದಗ–ಬೇಟಿಗೇರಿಯ ನಿವಾಸಿಗಳು ತಮ್ಮ ಅಂಗಳ, ಬಾಲ್ಕನಿಗಳು ಅಥವಾ ಒಳಾಂಗಣಗಳಲ್ಲಿ ವಿಶೇಷವಾಗಿ ಬಿಸಿಲಿನ ತಿಂಗಳುಗಳಲ್ಲಿ, ಪಕ್ಷಿಗಳು ಬದುಕಲು ಮತ್ತು ಅಭಿವೃದ್ಧಿ ಹೊಂದಲು ಸಹಾಯ ಮಾಡಲು ಶುದ್ಧ ನೀರು ಮತ್ತು ಧಾನ್ಯಗಳನ್ನು ಒದಗಿಸುವಂತೆ ಪ್ರೋತ್ಸಾಹಿಸಲಾಯಿತು. ಮನೆ ಮನೆಗೆ ತೆರಳಿ ನೀರು ಮತ್ತು ಧಾನ್ಯಗಳನ್ನು ಹಾಕಿ ಕಟ್ಟಲು ಅನುಕೂಲವಾಗುವ ಮಣ್ಣಿನ ಬಟ್ಟಲುಗಳನ್ನು ವಿತರಿಸಲಾಯಿತು. ಆದರ್ಶ ಶಿಕ್ಷಣ ಸಮಿತಿಯ ಚೇರಮನ್ ಆದ ಶ್ರೀ ಆನಂದ ಪೋತ್ನಿಸ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೇರೆವೆರಿಸಿದರು. ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ ಪ್ರೊ. ಬಿ.ಪಿ. ಜೈನರ್ ಅವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ನಮ್ಮ ಕಾಲೇಜಿನ ರೆಂಜರ್ಸ್ ಮತ್ತು ರೋವರ್ಸ್‌ಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

## ಹಾವೇರಿ

* ಜಿಲ್ಲಾ ಸಂಸ್ಥೆ ಹಾವೇರಿ ವತಿಯಿಂದ ಸಂಸ್ಥಾಪಕ ಜನ್ಮ ದಿನಾಚರಣೆ ಚಿಂತನಾ ದಿನಾಚರಣೆ ಆಚರಿಸಲಾಯಿತು. ಸಭೆಯಲ್ಲಿ ದಿಲ್ಲಾ ಖಜಾಂಚಿ ಶ್ರೀ ಜಿ.ವಿ. ಹಿರೇಗೌಡರ, ಶ್ರೀ ಕೊಟೂರು, ಶ್ರೀ ಶರತ್ ಮಲ್ಲನಗೌಡ, ಶ್ರೀ ಮಹದೇವಗೌಡ ಪಾಟೀಲ್, ಶ್ರೀ ರವಿಹಿಂಚಿಗೇರಿ, ಶ್ರೀಮತಿ ಶೈಲಜಾ ಹಿಂಚಿಗೇರಿ ಮುಂತಾದವರು ಭಾಗವಹಿಸಿದ್ದರು.



## ಕಲಬುರಗಿ

* ಫೆಬ್ರವರಿ 24 ರಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಕಲಬುರಗಿಯಲ್ಲಿ ಸಂಸ್ಥಾಪಕರ ದಿನಾಚರಣೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಶ್ರೀ ರಾಜಶೇಖರ್ ಗೋನಾಯ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಡಾ॥ ಮೋರಗೆ ಪ್ರಕಾಶ್ ಪ್ರಿನ್ಸಿಪಾಲ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಶ್ರೀ ಎಸ್.ಪಿ. ಸುಳ್ಳದ, ಜಿಲ್ಲಾ ಆಯುಕ್ತರು. ಕಬ್ಸ್–ಬುಲ್‌ಬುಲ್ಸ್, ಸ್ಕೌಟ್–ಗೈಡ್ ಮತ್ತು ದಳನಾಯಕರುಗಳು ಭಾಗವಹಿಸಿದ್ದರು.



## ಕಾರವಾರ (ಉ.ಕ.)

* ಫೆಬ್ರವರಿ 22 ರಂದು ಸಂಸ್ಥಾಪಕರಾದ ಬೇಡನ್ ಪಾವೆಲ್ ಹಾಗೂ ಲೇಡಿ ಬೇಡನ್ ಪಾವೆಲ್‌ರವರ ಜನ್ಮ ದಿನಾಚರಣೆಯನ್ನು ಕಾರವಾರದ ಜಿಲ್ಲಾ ಪಂಚಾಯತ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ನಗರಸಭೆಯ ಆಯುಕ್ತರಾದ ಶ್ರೀ ಜಗದೀಶ ಹುಲಗಜ್ಜಿರವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಹಾಗೂ ಪಥಸಂಚಲನಕ್ಕೆ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು. ಸಂಚಾರಿ ಪೋಲಿಸರು ಹಾಗೂ ಕಾರವಾರ ಗ್ರಾಮೀಣ ವೃತ್ತ ನಿರೀಕ್ಷಕರಾದ ಶ್ರೀ ಬಿ.ಎಚ್. ಸಾತೇನಹಳ್ಳಿಯವರು ಮಾತನಾಡಿದರು. ಸಂಚಾರಿ ಪೋಲಿಸ ಠಾಣೆಯ ಪೋಲಿಸ ಉಪ ನಿರೀಕ್ಷಕರಾದ ಶ್ರೀ ದೇವೆಂದ್ರಪ್ಪ ನವರು ರಸ್ತೆ ಸುರಕ್ಷತೆ ಬಗ್ಗೆ ಮಾಹಿತಿ ನೀಡಿ ಕೈ ಸನ್ನೆ ಬಗ್ಗೆ ಮಾಹಿತಿ ನೀಡಿದರು. ಇದರ ಅಧ್ಯಕ್ಷತೆಯನ್ನು ಶ್ರೀಮತಿ



ಛಾಯಾಜಾವ್ಕರ್‌ರವರು ವಹಿಸಿ ಎಲ್ಲರಿಗೂ ಶುಭಕೋರಿದರು. ಈ ಸಂದರ್ಭದಲ್ಲಿ ನಗರಸಭೆಯ ಆರೋಗ್ಯ ವಿಭಾಗದ ಯಾಕೋಬ್, ಶಾಲಾ ಶಿಕ್ಷಣ ಇಲಾಖೆಯ ಶ್ರೀ ಪ್ರಶಾಂತ ಸಾವಂತ, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಎಲ್.ಎ ಕಾರ್ಯದರ್ಶಿ ಡಾ. ಗಣೇಶ ಬಿಷ್ಟಣ್ಣನವರ ಸ್ವಾಗತಿಸಿದರು. ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ಕಾರ್ಯಕ್ರಮ ನಿರೂಪಿಸಿದರು.

* ಹೊನ್ನಾವರದ ಸೆಂಟ್ ಥೋಮಸ್ ಆಂಗ್ಲ ಮಾದ್ಯಮ ಶಾಲೆಯಲ್ಲಿ ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀಮತಿ ತೆರೆಸಾ ಫರ್ನಾಂಡಿಸ್‌ರವರ ನೇತೃತ್ವದಲ್ಲಿ ಬೇಡನ್ ಪಾವೆಲ್ ಹಾಗೂ ಲೇಡಿ ಬೇಡನ್ ಪಾವೆಲ್‌ರವರ ಜನ್ಮ ದಿನಾಚರಣೆಯನ್ನು ಕಬ್, ಬುಲ್‌ಬುಲ್, ಸ್ಕೌಟ್ಸ್, ಗೈಡ್ಸ್ ದಳ ನಾಯಕರು, ಶಾಲೆಯ ಉಳಿದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯವರೊಂದಿಗೆ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಸ್ಕೌಟ್ ಮಾಸ್ಟರ್ ಶ್ರೀ ವಿರೇಂದ್ರ ಶೆಟ್ಟಿರವರು (ಅವರು ಸಹ 22 ರಂದು ಹುಟ್ಟು ಹಬ್ಬವನ್ನು ಆಚರಿಸಿದರು.) ಆಗಮಿಸಿದರು. ಸರ್ವಧರ್ಮ ಪ್ರಾರ್ಥನೆಯೊಂದಿಗೆ ಪ್ರಾರಂಬಿಸಿ ಭಾವಚಿತ್ರಕ್ಕೆ ಪುಷ್ಪ ನಮನ ಮಾಡಿಸಿ ಕೇಕ್ ಕತ್ತರಿಸಿ ಸಭಾ ಕಾರ್ಯಕ್ರಮ ನಡೆಸಿ ಇಂದಿನ ಮಹತ್ವದ ಬಗ್ಗೆ ಮಕ್ಕಳಿಗೆ ವಿವರಿಸಿ ತಿಳಿಸಿ ಹೇಳಲಾಯಿತು. ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲರು ಹಾಗೂ ಎಡಿಸಿ ಆದ ಶ್ರೀಮತಿ ತೆರೆಸಾ ಫರ್ನಾಂಡಿಸ್‌ರವರು ವಹಿಸಿದ್ದರು.




* ಹೊನ್ನಾವರ ತಾಲ್ಲೂಕಿಗೆ ವರ್ಗವಾಗಿ ಬಂದಂತಹ ಮಾನ್ಯ ತಹಶೀಲ್ದಾರರಾದ ಶ್ರೀ ಪ್ರವೀಣ್ ಕರಾಂಡೆರವರಿಗೆ ಹೊನ್ನಾವರ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕಾರ್ಫ ತೊಡಿಸಿ ಹೊಗುಚ್ಚ ನೀಡುವುದರ ಮೂಲಕ ಸಂಸ್ಥೆಗೆ ಸ್ವಾಗತಿಸಿ ತಾಲ್ಲೂಕಿನಲ್ಲಿ ನಡೆಯುವ ಚಟುವಟಿಕೆ ಹಾಗೂ ಮುಂದೆ ನಡೆಯಬೇಕಾದ ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು. ಎ.ಎಸ್.ಒ.ಸಿ ಶ್ರೀಮತಿ ಭಾರತಿ ಡಾಯಸ, ಎಲ್.ಟಿ.(ಎಸ್) ಶ್ರೀ ಬಿ.ಡಿ. ಫರ್ನಾಂಡಿಸ್, ಎಲ್.ಎ ಕಾರ್ಯದರ್ಶಿ ಶ್ರೀ ಎಂ.ಎನ್. ಗೌಡ್, ಶ್ರೀ ವಿರೇಂದ್ರ ಶೆಟ್ಟಿ, ಶ್ರೀ ಸುದೀಶ ನಾಯ್ಕರವರು ಉಪಸ್ಥಿತರಿದ್ದರು.

ಮಾಥೋಮ ಸೆಂಟ್ರಲ್ ಶಾಲೆ, ಹೊನ್ನಾವರದಲ್ಲಿ ಸ್ಕೌಟ್ಸ್–ಗೈಡ್ಸ್, ಕಬ್ ಮತ್ತು ಬುಲ್‌ಬುಲ್ ನೇತೃತ್ವದಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು. ಮಾಥೋಮಾ ಸಂಸ್ಥೆಗಳ ಮುಖ್ಯಸ್ಥರಾಗಿರುವ ಫಾದರ್ ಲಿಜೋ ಚಾಕೋ ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ಜಿಲ್ಲಾ ಸ್ಕೌಟ್ಸ್ ಲೀಡರ್ ಟ್ರೈನರ್ ಶ್ರೀ ಬಿ.ಡಿ. ಫರ್ನಾಂಡಿಸ್ ಎಲ್ಲರಿಗೂ ಶುಭ ಹಾರೈಸಿದರು. ಮಾರ್ ಮಾಥೋ ಸೆಂಟ್ರಲ್ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀಮತಿ ವನಿತಾ ಕುದ್ರಿಗಿ ಉಪಸ್ಥಿತರಿದ್ದರು. ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಮುರಳಿ ವಿ., ಕಾರ್ಯಕ್ರಮ ನಿರೂಪಿಸಿದರು.



## ಕೊಡಗು

* ಫೆಬ್ರವರಿ 22 ರಂದು ಪೊನ್ನಮ್ಮ ಕುಶಾಲಪ್ಪ ಸ್ಕೌಟ್ ಗೈಡ್ ಭವನ ಮ್ಯಾನ್ಸ್ ಕಾಂಪೌಂಡ್ ಮಡಿಕೇರಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಮೊದಲಿಗೆ ದೀಪ ಬೆಳಗಿಸುವುದರೊಂದಿಗೆ ಸರ್ವಧರ್ಮ ಪ್ರಾರ್ಥನೆಯನ್ನು ಮಾಡಲಾಯಿತು. ನಂತರ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸ್ಸಿಕೇರಾರವರು ದಿನದ ಮಹತ್ವದ ಬಗ್ಗೆ ತಿಳಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವೆಂಕಟೇಶ್ ಪ್ರಸನ್ನರವರು ಮಾತನಾಡುತ್ತಾ "ಸ್ಕೌಟ್ ಗೈಡ್ ಸಂಸ್ಥೆಯು ಮಕ್ಕಳಲ್ಲಿ ಮನಸ್ಥೈರ್ಯ ಮತ್ತು ಸೇವಾ ಮನೋ ಭಾವನೆಯನ್ನು ಮೂಡಿಸಲು ಬಹಳ ಸಹಕಾರಿಯಾಗಿದೆ" ಎಂದು ನುಡಿದರು. ಸಭಾ ಅಧ್ಯಕ್ಷ ಸ್ಥಾನ ವಹಿಸಿದ್ದ ಕೊಡಗು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ ಬೇಬಿ ಮ್ಯಾಥ್ಯೂರವರು ಮಾತನಾಡುತ್ತ "ಶತಮಾನಗಳ ಹಿಂದೆಯೇ ಬೇಡನ್ ಪೋವೆಲ್ ರವರು ಮಕ್ಕಳ ಹಿತ ದೃಷ್ಟಿಯನ್ನು ಇಟ್ಟುಕೊಂಡು ಇಂತಹ ಒಂದು ಸಂಸ್ಥೆಯನ್ನು ಹುಟ್ಟು ಹಾಕಿದ್ದು ಈ ಸಂಸ್ಥೆಯು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ ಎಂದರೆ ತಪ್ಪಾಗಲಾರದು ಯಾರೇ ಆದರೂ ಒಳ್ಳೆಯ ಕೆಲಸ ಸಮಾಜದ ಒಳಿತಿಗಾಗಿ ಮಾಡಿದರೆ ಅದು ಶಾಶ್ವತವಾಗಿ ಕೂಡ ನೆನಪಲ್ಲಿ ಉಳಿಯುತ್ತದೆ" ಎಂದು ನುಡಿದರು. ಕಾರ್ಯಕ್ರಮದಲ್ಲಿ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಗೈಡ್ ವಿಭಾಗದ ಸಹಕಾರ್ಯದರ್ಶಿ ಶ್ರೀಮತಿ ಹರಿಣಿ ವಿಜಯ್ ಎಲ್ಲಾ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾಜರಿದ್ದರು. ಮೊದಲಿಗೆ ಜಿಲ್ಲಾ ಸಹಕಾರ್ಯದರ್ಶಿ, ಶ್ರೀಮತಿ ಬೊಳ್ಳಜಿರ ಅಯ್ಯಪ್ಪ ಸ್ವಾಗತಿಸಿದ್ದರು. ಜಿಲ್ಲಾ ಸಂಘಟಕಿ ಶ್ರೀಮತಿ ದಮಯಂತಿ ವಂದಿಸಿದ್ದರು.



* ರಸ್ತೆ ಸುರಕ್ಷಾತಾ ಮಾಸ ಅಂಗವಾಗಿ ಪ್ರಾದೇಶಿಕ ಸಾರಿಗೆ ಇಲಾಖೆ, ಶಾಲಾಶಿಕ್ಷಣ ಇಲಾಖೆ, ವತಿಯಿಂದ ಫೆಬ್ರವರಿ 12 ರಂದು ಮಡಿಕೇರಿ ನಗರದ ಗಾಂಧಿ ಮಂಟಪದಿಂದ ರಸ್ತ ಸುರಕ್ಷತಾ ಜಾಥವನ್ನು ಹಮ್ಮಿಕೊಳ್ಳಲಾಯಿತು. ಜಿಲ್ಲಾಧಿಕಾರಿಗಳದ ಶ್ರೀ ವೆಂಕಟರಾಜ್ ಹಸಿರು ನಿಶಾನೆ ತೋರಿಸುವುದರ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಜಿಮ್ಮಿ ಸ್ಸಿಕೇರಾ, ಸ್ಥಾನಿಕ ಆಯುಕ್ತ ಶ್ರೀ ಹೆಚ್.ಆರ್ ಮುತ್ತಪ್ಪ, ಕ್ರಸೆಂಟ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮತ್ತು ಸಂತ ಮೈಲಕರ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.




* ಫೆಬ್ರವರಿ 14 ರಂದು ಲಯನ್ಸ್ ಪ್ರಾಥಮಿಕ ಶಾಲೆ ಗೋಣಿಕೊಪ್ಪ ಇಲ್ಲಿನ ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳಿಗೆ ಜಿಲ್ಲಾ ಪುರಸ್ಕಾರ ಪರೀಕ್ಷೆಯನ್ನು ನಡೆಸಲಾಯಿತು. ಬುಲ್‌ಬುಲ್ ವಿಭಾಗದ ಪರೀಕ್ಷೆಯನ್ನು ಜಿಲ್ಲಾ ಸಂಸ್ಥೆಯ ಬುಲ್ ಬುಲ್ ವಿಭಾಗದ ಮುಖ್ಯಸ್ಥರಾಗಿರುವ ಶ್ರೀಮತಿ ಡೈಸಿ ಮತ್ತು ಕಬ್ಸ್ ವಿಭಾಗದ ಶ್ರೀಮತಿ ವಾಮನ ಇವರು ನೆರೆವೆರಿಸಿದ್ದರು.

* ಫೆಬ್ರವರಿ 20 ರಂದು ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ ಕೊಡಗು ಇದರ ಸಂಯುಕ್ತ ಆಶ್ರಯದಲ್ಲಿ ಪಂಜೆ ಮಂಗೇಶರಾಯರ 150ನೇ ವರ್ಷಾಚರಣೆ ಕಾರ್ಯಕ್ರಮವು ಸರಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಜೂನಿಯರ್ ಕಾಲೇಜು ಆವರಣ ಇಲ್ಲಿ ನಡೆಯಿತು. ಈ ಸಂದರ್ಭ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ ಬೇಬಿ ಮ್ಯಾಥ್ಯು, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರದ ವೆಂಕಟೇಶ್ ಪ್ರಸನ್ನ, ರೋವರ್ ಲೀಡರ್ ಎವರೆಸ್ಟ್, ರೇಂಜರ್ಸ್ ಮತ್ತು ರೋವರ್ಸ್ ಭಾಗವಹಿಸಿದ್ದರು.



* ಮಾರ್ಚ್ 17 ರಂದು ಕುಶಾಲನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಪುನೀತ್‌ರಾಜ್ ಕುಮಾರ್‌ರವರ 50ನೇ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರವನ್ನು ನಡೆಸಲಾಯಿತ್ತು.ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಡಾ. ಪ್ರವೀಣ್ ದೇವರಗೊಂಡ ಹಾಗೂ ಇದೀಗ ಆಯುಕ್ತರ ತರಬೇತಿ ಮುಗಿಸಿ ಬಂದಿರುವ ಸ್ಥಳೀಯ ಸಂಸ್ಥೆಯ ಸದಸ್ಯರು ಆಗಿರುವ ಶ್ರೀ ಗಣೇಶ್ ಕೆ.ಬಿ. ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಕುಶಾಲನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ ಸಂತ ಅಂತೋಣಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸುಂಟಿಕೊಪ್ಪದ ಕಬ್ಸ್, ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಕುಶಾಲನಗರ ಸ್ಥಳೀಯ ಸಂಸ್ಥೆ ಸದಸ್ಯರು ಹಾಗೂ ಆಯುಕ್ತರ ತರಬೇತಿ ಪೂರ್ಣಗೊಳಿಸಿರುವ ಶ್ರೀ ಗಣೇಶ್ ಕೆ.ಬಿ. ಇವರ ಮಾರ್ಚ್ 14 ರಂದು ಜಿಲ್ಲಾ ಪುರಸ್ಕಾರ ಪ್ರಶಸ್ತಿ ಪತ್ರವನ್ನು ವಿತರಿಸಿದ್ದರು.

## ಕೋಲಾರ

* ಫೆಬ್ರವರಿ 15 ರಂದು ಸಾಧಕ್ ನ್ಯಾಷನಲ್ ಶಾಲೆ ಕಾರಹಳ್ಳಿ ಬಂಗಾರಪೇಟೆ ಇಲ್ಲಿ ಅಡುಗೆ ತಯಾರಿಕೆಯ ಪರೀಕ್ಷಾ ಶಿಬಿರವನ್ನು ಗೈಡ್ ಕ್ಯಾಪ್ಟನ್ ಶ್ರೀಮತಿ ರಾಗಿಣಿರವರ ನಾಯಕತ್ವದಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರಕ್ಕೆ ಪರೀಕ್ಷಕರಾಗಿ ಶ್ರೀ ನಂಜುಂಡಪ್ಪ, ಶ್ರೀ ಕೃಷ್ಣಮೂರ್ತಿ, ಶ್ರೀಮತಿ ಹೇಮಾವತಿ, ಶ್ರೀ ಬಾಬುರವರು ಭಾಗವಹಿಸಿದ್ದರು. ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ತ್ರಿವಿಕ್ರಮ್, ಶಾಲಾ ಕಾರ್ಯದರ್ಶಿ ಶ್ರೀಮತಿ ಕೃಪರವರು ಉತ್ತಮವಾಗಿ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿದರು. ಈ ಶಿಬಿರದಲ್ಲಿ 250 ಕಬ್, ಬುಲ್‌ಬುಲ್ ಸ್ಕೌಟ್-ಗೈಡ್‌ಗಳು ಭಾಗವಹಿಸಿದ್ದರು.



* ಫೆಬ್ರವರಿ 17 ರಂದು ನಗರದ ಸ್ಕೌಟ್ ಭವನದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರೇರಣಾ ಶಿಬಿರವನ್ನು ಆಯೋಜಿಸಿ, ಅಂಕಗಳಿಕೆಗೆ ಬೇಕಾದ ವಿವಿಧ ತಂತ್ರಗಳನ್ನು ಹಾಗು ಓದಿದ ವಿಷಯಗಳನ್ನು ನೆನಪಿನಲ್ಲಿ ಉಳಿಯಲು ಮಾಡಬೇಕಾದ ಸರಳ ವಿಧಾನಗಳನ್ನು, ಪರೀಕ್ಷೆಯಲ್ಲಿ ಭಯಪಡದೆ ಪರೀಕ್ಷೆಯನ್ನು ಎದುರಿಸಲು ಆತ್ಮಸ್ಥೈರ್ಯ ತುಂಬಲಾಯಿತು. ಈ ಸಂದರ್ಭದಲ್ಲಿ ಡಯಟ್ ಪ್ರಾಂಶುಪಾಲರಾದ ಶ್ರೀ ಬಾಲಾಜಿ, ಜಿಲ್ಲಾ ಸಂಘಟಕರಾದ ಬಾಬು ರವರು ಭಾಗವಹಿಸಿದ್ದರು.

* ಫೆಬ್ರವರಿ 18 ರಂದು ನಗರದ ಸ್ಕೌಟ್ ಭವನದಲ್ಲಿ ಹಸಿರು ನಾರಿ ಎಂಬ ವಿಶೇಷ ಕಾರ್ಯಕ್ರಮವನ್ನು ರೋಟರಿ ಕೋಲಾರ ನಂದಿನಿ, ಜಿಲ್ಲಾ ಪರ್ಯಾವರಣ ಗತಿ ವಿಧಾನ ಸಂಸ್ಥೆಗಳ ಮೂಲಕ ಮಹಿಳೆಯರು ಮನೆಯಲ್ಲಿ ನೀರನ್ನು ಉಳಿಸುವ ಕ್ರಮ, ಮನೆಯಲ್ಲಿ ಕೈತೋಟ ನಿರ್ಮಾಣ, ಹಸಿರು ಗೊಬ್ಬರ ತಯಾರಿಸುವ ವಿಧಾನ, ಹಳೇ ಬಟ್ಟೆಗಳ ಮರುಬಳಕೆ, ಮನೆ ಮದ್ದು ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಮಂಜುಳ ಭೀಮ್ ರಾವ್, ಶ್ರೀಮತಿ ವನಜಾಕ್ಷಿ, ಶ್ರೀಯುತ ಮಹೇಶ್ ಕದಂ, ಸ್ಕೌಟ್ ಶ್ರೀ ಬಾಬು ಸೇವೆ ಸಲ್ಲಿಸಿದರು.



* ಫೆಬ್ರವರಿ 18 ರಂದು ಬಂಗಾರಪೇಟೆಯ ಸ್ಥಳೀಯ ಸಂಸ್ಥೆಯ ವತಿಯಿಂದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು, ಈ ಶಿಬಿರದಲ್ಲಿ ಶ್ರೀ ಕೃಷ್ಣಮೂರ್ತಿ, ಶ್ರೀ ನಂಜುಂಡಪ್ಪ, ಶ್ರೀ ನಾರಾಯಣಸ್ವಾಮಿ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀಮತಿ ವರಲಕ್ಷ್ಮೀ, ಶ್ರೀ ವೇಣುಗೋಪಾಲ್, ಶ್ರೀ ರಾಮಚಂದ್ರಪ್ಪ ಮತ್ತು ಶ್ರೀಮತಿ ರಾಗಿಣಿ ಮುಂತಾದವರು ಸೇವೆ ಸಲ್ಲಿಸಿದರು.



* ಫೆಬ್ರವರಿ 22 ರಂದು ಜಿಲ್ಲಾ ಮಟ್ಟದ ಸಂಸ್ಥಾಪಕರ ದಿನವನ್ನು ಬಂಗಾರಪೇಟೆಯ ಆದರ್ಶ ಶಾಲೆಯಲ್ಲಿ ಆಯೋಜಿಸಲಾಗಿತ್ತು. "ಎಲ್ಲಾ ಮಕ್ಕಳು ಸ್ಕೌಟ್ಸ್ ಗೈಡ್ಸ್ ಶಿಕ್ಷಣದಲ್ಲಿ ಭಾಗವಹಿಸಿ ತಮ್ಮ ಮುಂದಿನ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಿ" ಎಂದು ಕೋಲಾರ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ಸಮಿತಿಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ತಿಳಿಸಿದರು. ಬಂಗಾರಪೇಟೆಯ ಆದರ್ಶ ವಿದ್ಯಾಲಯದಲ್ಲಿ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಸಂಸ್ಥಾಪಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಗುರುಮೂರ್ತಿರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ತಲುಪುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಶಾಲೆಗಳಲ್ಲಿ ನಿರಂತರವಾಗಿ ಸ್ಕೌಟ್ಸ್–ಗೈಡ್ಸ್ ತರಗತಿಗಳು ನಡೆಯಲು ಬೇಕಾದ ಎಲ್ಲಾ ರೀತಿಯ ಸಹಕಾರ ಮತ್ತು ಮಾರ್ಗದರ್ಶನ ನೀಡಲು ಸದಾ ಸಿದ್ಧ ಎಂದು ತಿಳಿಸಿದರು. ಬಂಗಾರಪೇಟೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಂಕರಪ್ಪರವರು, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀಮತಿ ಸುಜಾತರವರು, ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಶಿಕಲಾರವರು ಮಾತನಾಡಿದರು. ಈ ಸಂದರ್ಭದಲ್ಲಿ ಪಧಾಧಿಕಾರಿಗಳು ಶಾಲಾ ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ದಿನದಂದು ಜಿಲ್ಲೆಯ ಮಹಿಳಾ ಸಮಾಜ ಶಾಲೆ, ಗೊಲ್ಲಹಳ್ಳಿ ಶಾಲೆ, ತೊರ್ನಹಳ್ಳಿ ಶಾಲೆ, ನಗವಾರ ಶಾಲೆ, ಕ.ಜಿ.ಬಿ.ವಿ ಶಾಲೆ ಸೋಮಯಾಜಲಹಳ್ಳಿ, ಕೆ.ಪಿ.ಎಸ್. ಶಾಲೆ ಸೋಮಯಾಜಹಳ್ಳಿ, ಪ್ರೀತಿ ವಿದ್ಯಾ ಸಂಸ್ಥೆ ಯಲ್ದೂರು ಶಾಲೆಗಳಲ್ಲಿ ಸರಳವಾಗಿ ಆಚರಣೆ ಮಾಡಲಾಯಿತು.

* ಫೆಬ್ರವರಿ 24 ಮತ್ತು 25 ರಂದು ಕೋಲಾರ ಜಿಲ್ಲೆಯಲ್ಲಿ ನಡೆದ ರಾಜ್ಯ ಮಟ್ಟದ ಜನಪರ ಉತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ 35 ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆಯನ್ನು ಸಲ್ಲಿದರು.

* ಫೆಬ್ರವರಿ 26 ರಂದು ಕೋಲಾರ ತಾಲ್ಲೂಕಿನ ವಿದ್ಯಾಬೋದಿನಿ ಶಾಲೆಯಲ್ಲಿ ಪದಕ ಪರೀಕ್ಷಾ ಶಿಬಿರವನ್ನು ಶಾಲೆಯ ಗೈಡ್ ಶಿಕ್ಷಕಿ ಶ್ರೀಮತಿ ಶ್ರೀದೇವಿರವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು, ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ನಂದಕುಮಾರ್, ಮುಖ್ಯ ಶಿಕ್ಷಕಿ ಶ್ರೀಮತಿ ಅನಾ ರಾಜೇಶ್ವರಿ, ಫ್ಲಾಕ್ ಲೀಡರ್ ಶ್ರೀಮತಿ ಹೇಮಾವತಿ, ಜಿಲ್ಲಾ ಸಹ ಕಾರ್ಯದರ್ಶಿ ಸ್ಕೌಟ್ ಶ್ರೀ ಬಾಬು, ಯುವ ಸಮಿತಿ ಅಧ್ಯಕ್ಷ ಶ್ರೀ ತೇಜೋನಂದ ಮುಂತಾದವರು ಉಪಸ್ಥಿತರಿದ್ದರು.

* ಫೆಬ್ರವರಿ 28 ರಂದು ಶ್ರೀ ಕ್ಷೇತ್ರ ಆವನಿಯ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಜಾತ್ರೆಯಲ್ಲಿ ಜಿಲ್ಲೆಯ ರೋವರ್ಸ್–ರೇಂಜರ್ಸ್‌ಗಳು ಊಟ, ನೀರನ್ನು ಸಾರ್ವಜನಿಕರಿಗೆ ಹಂಚುವ ಸೇವಾ ಕಾರ್ಯದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕರಿಗೆ ಊಟ ಮತ್ತು ನೀರನ್ನು ನಮ್ಮ ಸಂಸ್ಥೆಯ ದಾನಿಗಳು ಮತ್ತು ಸಮಾಜ ಸೇವಕರಾದ ಶ್ರೀಯುತ ಆವನಿ ಬಾಬುರವರು ವ್ಯವಸ್ಥೆ ಮಾಡಿದ್ದರು.

* ಮಾರ್ಚ್ 2 ರಂದು ಕೋಲಾರ ನಗರದಲ್ಲಿ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಹಮ್ಮಿಕೊಂಡಿರುವ 'ಹಸಿರು ಬೆಳಸಿ ಕೋಲಾರ ಉಳಿಸಿ 'ಅಭಿಯಾನಕ್ಕೆ ಬೆಂಗಳೂರು ಪೂರ್ವ ವಲಯದ ಡಿ.ಸಿ.ಪಿ.ಗಳಾದ ಶ್ರೀಯುತ ದೇವರಾಜ್‌ರವರು ಗಿಡಗಳನ್ನು ನೆಡುವ ಮೂಲಕ ಸ್ಕೌಟ್ಸ್–ಗೈಡ್ಸ್ ಸೇವೆಯನ್ನು ಪ್ರಶಂಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪ, ಜಿಲ್ಲಾ ಅಧ್ಯಕ್ಷರಾದ ಶ್ರೀಯುತ ಬಿಸಪ್ಪ ಗೌಡ, ಸಿ.ಬಿ.ಐ.ಟಿ. ಕಾಲೇಜಿನ ಮಾಲೀಕರಾದ ಶ್ರೀಯುತ ಕೃಷ್ಣಾರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.

* ಮಾರ್ಚ್ 2 ರಂದು ನಗರದ ಸ್ಕೌಟ್ ಭವನದಲ್ಲಿ ಮಾಜಿ ಜಿಲ್ಲಾ ಕಾರ್ಯದರ್ಶಿಗಳಾದ ದಿವಂಗತ ಡಬ್ಲ್ಯೂ.ಇ.ಎಸ್. ಕುಮಾರ್‌ರವರಿಗೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪರವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು, ಈ ಸಂದರ್ಭದಲ್ಲಿ ಪಧಾಧಿಕಾರಿಗಳು ಮತ್ತು ಮೃತರ ಕುಟುಂಬಸ್ಥರು ಭಾಗವಹಿಸಿದ್ದರು.




* ಮಾರ್ಚ್ 5 ರಿಂದ 7 ರವರೆಗೆ ಮಾಲೂರು ಪ್ರಥಮ ದರ್ಜೇ ಕಾಲೇಜು ರೋವರ್ ಮತ್ತು ರೇಂಜರ್ ದಳಗಳಿಂದ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಕಾಲೇಜಿನ ಪ್ರಾಂಸುಪಾಲರಾದ ಶ್ರೀಯುತ ಅಶ್ವತ್ ನಾರಾಯಣರವರು ಉದ್ಘಾಟಿಸಿದರು. ಇದೇ ದಿನ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಣೆ ಮಾಡಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಜಿಲ್ಲಾ ಸಂಘಟಕರಾದ ಸ್ಕೌಟ್ ಶ್ರೀ ಬಾಬು, ರೋವರ್ ಲೀಡರ್ ಶ್ರೀ ನಿರಂಜನ್ ಕುಮಾರ್ ಸೇವೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಸ್ಥಳಿಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಅಶ್ವಥ್ ರೆಡ್ಡಿ, ಶ್ರೀ ರೇವಣ್ಣ, ಕಾಲೇಜಿನ ಉಪನ್ಯಾಸಕರಾದ ಶ್ರೀ ಗುರುಪ್ರಕಾಶ್, ಶ್ರೀಮತಿ ನಾಗಮಣಿ, ಶ್ರೀ ವಂದನ, ಶ್ರೀ ವೇಣುಗೋಪಾಲ್ ಮುಂತಾದವರು ಉಪಸ್ಥಿತರಿದ್ದರು.



* ಮಾರ್ಚ್ 7 ರಂದು ಸಮುದಾಯ ಸೇವಾ ಶಿಬಿರವನ್ನು ಮಾಲೂರು ಪ್ರಥಮ ದರ್ಜೇ ಕಾಲೇಜಿನ ರೋವರ್ ಮತ್ತು ರೇಂಜರ್‌ಗಳು ವಕ್ಕಲೇರಿಯ ಶ್ರೀ ಮಾರ್ಕಂಡೇಶ್ವರ ದೇವಾಲಯ ಬೆಟ್ಟದಲ್ಲಿನ ಪ್ಲಾಸ್ಟಿಕ್ ಕಸ ಸಂಗ್ರಹ ಸೇವಾ ಕಾರ್ಯದಲ್ಲಿ ಭಾಗವಹಿಸಿದ್ದರು. "ಸಾರ್ವಜನಿಕ ಆಸ್ತಿಯನ್ನು ತಮ್ಮ ಸ್ವಂತ ಆಸ್ತಿಯಂತೆ ಭಾವಿಸಬೇಕು ಹಾಗೂ ಯುವಕರು ಸಾರ್ವಜನಿಕ ಆಸ್ತಿಯನ್ನು ಸಂರಕ್ಷಣೆ ಮಾಡುವ ಕಾರ್ಯಕ್ಕೆ





ಯೋಜನೆಯನ್ನು ರೂಪಿಸಿಕೊಂಡು ತಿಂಗಳಲ್ಲಿ ಒಂದು ದಿನ ಸೇವಾ ಕಾರ್ಯದಲ್ಲಿ ಭಾಗವಹಸುವ ಮೂಲಕ ಈ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಬೇಕು" ಎಂದು ಜಿಲ್ಲಾ ಉಪಾಧ್ಯಕ್ಷರಾದ ಚೌಡೇಶ್ವರಿ ಶ್ರೀ ರಾಮುರವರು ತಿಳಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಶ್ರೀ ಗುರುಪ್ರಕಾಶ್, ಶ್ರೀಮತಿ ನಾಗಮಣಿ, ಶ್ರೀ ವಂದನ, ಶ್ರೀ ವೇಣುಗೋಪಾಲ್, ಶ್ರೀ ನಿರಂಜನ್, ಶ್ರೀ ತೇಜೋನಂದ, ಸ್ಕೌಟ್ ಶ್ರೀ ಬಾಬು ಮುಂತಾದವರು ಉಪಸ್ಥಿತರಿದ್ದರು.

* ಮಾರ್ಚ್ 8 ರಂದು ಕೋಲಾರ ಜಿಲ್ಲಾ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಕೋಲಾರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಮಂಗಳ ಎಸ್.ಎಂ.ರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಖಜಾಂಚಿ ಶ್ರೀ ಉಮೇಶ್, ರೋಟರಿ ಕೋಲಾರ ಶ್ರೀಮತಿ ನಂದಿನಿ ಅಧ್ಯಕ್ಷರಾದ ಶ್ರೀ ಬಾಬು, ಕಾರ್ಯದರ್ಶಿ ಬೇವಹಳ್ಳಿ ಶ್ರೀ ಶಂಕರ್, ಉಪಾಧ್ಯಕ್ಷರಾದ ಶ್ರೀಮತಿ ರಾಜರಾಜೇಶ್ವರಿ, ಪಧಾದಿಕಾರಿಗಳಾದ, ಶ್ರೀಮತಿ ಉಮಾದೇವಿ, ಶ್ರೀಮತಿ ಮಂಗಳಾಗೌಡ, ಶ್ರೀ ಅಶೋಕ್, ಶ್ರೀ ಶಶಿಕುಮಾರ್, ಶ್ರೀಮತಿ ಸುಷ್ಮಾ, ಶ್ರೀಮತಿ ಸುಮಗಲಿ ನೋಹಾ, ಶ್ರೀಮತಿ ರಶ್ಮೀ, ಶ್ರೀಮತಿ ದೇವಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶ್ರೀಮತಿ ಶ್ರೀವಾಣಿ ಪ್ರಹ್ಲಾದರಾವ್, ಶ್ರೀ ಚೈತನ್ಯ, ಶ್ರೀ ಇಂದಿರಾ, ಶ್ರೀಮತಿ ಶೈಲಾ, ಶ್ರೀಮತಿ ಗೌರಾಬಾಯಿ ಮುಂತಾದವರು ಉಪಸ್ಥಿತರಿದ್ದರು. ಶ್ರೀಯುತ ಕೆ.ವಿ. ಶಂಕರಪ್ಪರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳ ಮತ್ತು ಪದಾಧಿಕಾರಿಗಳ ಸಭೆಯನ್ನು ನಡೆಸಲಾಯಿತು.

* ಮಾರ್ಚ್ 10 ರಂದು ಮಾಲೂರು ಪ್ರಥಮ ದರ್ಜೆ ಕಾಲೇಜು ರೋವರ್ ಮತ್ತು ರೇಂಜರ್‌ಗಳಿಗೆ ಪದಕ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಯುತ ಅಶ್ವತ್ ನಾರಾಯಣರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಡಾ|| ಶಿಲ್ಪಾ, ಶ್ರೀ ಗುರುಪ್ರಕಾಶ್, ಶ್ರೀಮತಿ ನಾಗಮಣಿ, ಶ್ರೀಮತಿ ವಂದನ, ಶ್ರೀ ವೇಣುಗೋಪಾಲ್ ಮುಂತಾದವರು ಉಪಸ್ಥಿತರಿದ್ದರು.

* ಮಾರ್ಚ್ 10 ರಂದು ಬಂಗಾರಪೇಟೆ ಸ್ಥಳೀಯ ಸಂಸ್ಥೆಯ ಕಾಮಸಮುದ್ರಂ ಗ್ರಾಮದ ಶ್ರೀ ಆತ್ರೇಯ ಇಂಗ್ಲೀಷ್ ಶಾಲೆಯಲ್ಲಿ ಪದಕ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಶಾಲೆಯ ಕಾರ್ಯದರ್ಶಿಗಳಾದ ಶ್ರೀಯುತ ಸುರೇಶ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಲಾ ಆಡಳಿತಾಧಿಕಾರಿ ಶ್ರೀಮತಿ ಕಾವ್ಯ, ಮುಖ್ಯ ಶಿಕ್ಷಕಿ ಶ್ರೀಮತಿ ಚೈತ್ರ, ಶಾಲಾ ತರಬೇತಿ ಶಿಕ್ಷಕಿಯರಾದ ಶ್ರೀಮತಿ ವರಲಕ್ಷ್ಮೀ, ಶ್ರೀಮತಿ ಜಯಲಕ್ಷ್ಮೀ, ಖಜಾಂಚಿ ಶ್ರೀಯುತ ಮಹೇಶ್, ಪರೀಕ್ಷಕರಾಗಿ ಶ್ರೀ ನಂಜುಂಡಪ್ಪ, ಶ್ರೀ ಕೃಷ್ಣಮೂರ್ತಿ ಕಾರ್ಯದರ್ಶಿಗಳು ಭಾಗವಹಿಸಿದ್ದರು.

## ಕೊಪ್ಪಳ

* ಮಾರ್ಚ್ 09 ರಂದು ಸ್ಥಳೀಯ ಸಂಸ್ಥೆ ಗಂಗಾವತಿ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಉಪಾಧ್ಯಕ್ಷರು ಜಿಲ್ಲಾ ಪ್ರಧಾನ ಆಯುಕ್ತರು ಶ್ರೀ ಎಚ್.ಎಮ್. ಸಿದ್ದರಾಮಸ್ವಾಮಿ ಯವರು ವಹಿಸಿ ಕೊಂಡಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯಕಾರಿಣಿ ಸಮಿತಿಯ ಅಧ್ಯಕ್ಷರಾದಂತಹ ಶ್ರೀ ಸಯ್ಯದ್ ಮೊಹಮ್ಮದ್, ಗುತ್ತಿ ಹಾಗೂ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರು ಗೈಡ್ಸ್ ಆಯುಕ್ತರು ಶ್ರೀಮತಿ ಅರುಣಾ ವಸ್ತ್ರದ್, ಜಿಲ್ಲಾ ಸಂಸ್ಥೆಯ ತರಬೇತಿ ಆಯುಕ್ತರು (ಗೈಡ್ಸ್) ಶ್ರೀಮತಿ ಸರೋಜಾ, ಶ್ರೀ ಯರ್ರಣ್ಣ, ಹಿರಿಯ ಸ್ಕೌಟ್ ಶಿಕ್ಷಕರು, ಉರ್ದು ಸಿ.ಆರ್.ಪಿ.ಗಳು, ಫ್ಲಾಕ್ ಲೀಡರ್ ಶ್ರೀಮತಿ ಫರೀದಾ ಅಖ್ತರ್, ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಸುಮಾ, ಸ್ಕೌಟ್ ಮಾಸ್ಟರ್ ಶ್ರೀ ಯಮುನೂರಪ್ಪ ವರದಿಗಾರರಾದಂತಹ ಶ್ರೀ ಸಂಜೀವರೆಡ್ಡಿ ಉಪಸ್ಥಿತರಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಸಂಸ್ಥೆಯ ತರಬೇತಿ ಆಯುಕ್ತರು (ಗೈಡ್ಸ್) ಶ್ರೀಮತಿ ಸರೋಜಾ ಇವರು ಸಸಿಗೆ ನಿರು ಹಾಕುವದರೂಂದಿಗೆ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಹುಸೇನಸಾಬ ಮಕಾಂದಾರ ಇವರು ನಿರ್ವಹಿಸಿದರು. ಸದರಿ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ರೋವರ್-ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಮಾರ್ಚ್ 09 ರಂದು ಕೂಪ್ಪಳ ಜಿಲ್ಲಾ ಪೋಲೀಸ್ ಅಧಿಕ್ಷಕರ, ಆದೇಶದಂತೆ "ನಮ್ಮ ಪೂಲೀಸ್ ನಮ್ಮ ಹೆಮ್ಮೆ. ಪೀಟ್ ಪಾರ್ ಆಲ್" ಎಂಬಂತೆ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಿಂದ. ಗವಿಮಠದ ವರೆಗೆ ನಡೆದ ಮ್ಯಾರಥಾನ್ ಓಟದಲ್ಲಿ, ಸ್ಥಳೀಯ ಶಾಲೆಯ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶರೀಫ್ ಹತ್ತಿಮತ್ತೂರ್ ಸಂಘಟಕರು, ಸ್ಕೌಟ್ಸ್-ಗೈಡ್ಸ್ ಶಿಕ್ಷಕರು, ಕಾಲೇಜಿನ ರೋವರ್-ರೇಂಜರ್ಸ್‌ಗಳು, ನಮ್ಮ ಪೊಲೀಸ್ ನಮ್ಮ ಹೆಮ್ಮೆ ಎಂಬ ಮ್ಯಾರಾಥಾನ್ ಓಟದಲ್ಲಿ ಭಾಗವಹಿಸಿದ್ದರು. ಶ್ರೀ ರಾಮ ಅರಸಿದ್ದಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಶ್ರೀ ರಾಹುಲ್ ರತ್ನಂಪಾಂಡೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಇಲಾಖೆ ಅಧಿಕಾರಿಗಳ ಪೊಲೀಸ್ ಸಿಬ್ಬಂದಿ ವರ್ಗ ಮತ್ತು ಸರ್ವರೂ ಭಾಗವಹಿಸಿದ್ದರು.

* ಫೆಬ್ರವರಿ 22 ರಂದು ಶಾಲಾ ಶಿಕ್ಷಣ ಇಲಾಖೆ ಗಂಗಾವತಿ ಹಾಗೂ ಸ್ಥಳೀಯ ಸಂಸ್ಥೆ ಗಂಗಾವತಿ ಇವರ ಸಂಯುಕ್ತಾಶ್ರಯದಲ್ಲಿ ಬೇಡನ್ ಪೊವೆಲ್ ಇವರ ಜನ್ಮದಿನಾಚರಣೆ/ವಿಶ್ವ ಚಿಂತನಾ ದಿನಾಚರಣೆ ಹಾಗೂ 37ನೇ ತಾಲ್ಲೂಕು ಮಕ್ಕಳ ರ‍್ಯಾಲಿಯನ್ನು ಹಮ್ಮಿಕೊಂಡಿದ್ದು ಸದರಿ ರ‍್ಯಾಲಿಯಲ್ಲಿ 363 ಮಕ್ಕಳು ಭಾಗವಹಿಸಿದ್ದು, ಗಂಗಾವತಿ ನಗರದ ಟ್ರಾಫಿಕ್ ಪಿ.ಎಸ್.ಐ. ಆದ ಶ್ರೀಮತಿ ಶಾರದವ್ವ ಹಾಗೂ ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕ್ಷಕರಾದಂತಹ ಶ್ರೀಮತಿ ಉಮಾದೇವಿ ಪಾಟೀಲ್ ಇವರುಗಳು ಹಸಿರು ಬಾವುಟ ಹಾಗೂ ಡೊಳ್ಳು ಬಾರಿಸುವುದರ ಮೂಲಕ ಮಕ್ಕಳ ರ‍್ಯಾಲಿಗೆ ಚಾಲನೆಯನ್ನು ಮಾಡಿದರು.

ಸಿ.ಪಿ.ಎಸ್. ಶಾಲೆಯಲ್ಲಿ ಸ್ಕೌಟ್ಸ್ ಧ್ವಜಾರೋಹಣ ನಡೆಸಿ ವಿವಿಧ ಶಾಲೆಗಳಿಂದ ಬಂದಂತಹ ತಂಡಗಳ ವಂದನೆ ಸ್ವೀಕಾರ ಕಾರ್ಯಕ್ರಮ ಜರಗಿತು. ನಂತರ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನವನ್ನು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆಯ ಆಯುಕ್ತರು (ಗೈಡ್) ಆದ ಶ್ರೀಮತಿ ಅರುಣಾಕುಮಾರಿ ವಸ್ತ್ರದ ಇವರು ವಹಿಸಿಕೊಂಡಿದ್ದು ಅತಿಥಿ ಸ್ಥಾನವನ್ನು ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಮಾನ್ಯ ಶ್ರೀಮತಿ ಉಮಾದೇವಿ ಪಾಟೀಲ್ ಇವರು ವಹಿಸಿಕೊಂಡಿದ್ದರು. ಕೆಂದೊಳ್ಳಿ ರಾಮಣ್ಣ ಶಾಲೆಯ ಆಡಳಿತ ಮಂಡಳಿ ಸದಸ್ಯರಾದಂತಹ ಶ್ರೀ ಯಶವಂತ, ನೀವೇಕ ಮಾರ್ತಿ ಶಾಲೆಯ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿಯವರಾದಂತಹ ಶ್ರೀ ಸುಬ್ರಮ್ಹಣ್ಯ, ಶಾಲೆಯ



ಅಧ್ಯಕ್ಷರಾದಂತಹ ಶ್ರೀ ಮೆಹಥಾ ಇವರುಗಳು ಮುಖ್ಯ ಅತಿಥಿ ಸ್ಥಾನವನ್ನು ವಹಿಸಿಕೊಂಡಿದ್ದರು. ಅದೇ ರೀತಿಯಾಗಿ ಅತಿಥಿ ಸ್ಥಾನವನ್ನು ಶ್ರೀ ಸೈಯ್ಯದ್ ಮೊಹಮ್ಮದ್ ಗುತ್ತಿ, ಶ್ರೀ ಅಲಿ ಹುಸೇನ್ ಸಿ.ಪಿ.ಎಸ್. ಕನ್ನಡ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಶಿವಪುತ್ರಪ್ಪ ಹೊಸಮನಿ, ಉರ್ದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಫರೀದಾ ಅಖ್ತರದ ಹಿಸಿಕೊಂಡಿದ್ದರು (ಸಿ.ಪಿ.ಎಸ್.) ಉರ್ದು ಶಾಲೆಯ ಕಬ್–ಬುಲ್‌ಬುಲ್ ಮಕ್ಕಳು ವೆಲ್ಕಮ್ ಸಾಂಗ್ ಹಾಡುವುದರ ಮೂಲಕ ಸಾಮೂಹಿಕವಾಗಿ ಸರ್ವರನ್ನು ಸ್ವಾಗತಿಸಿದರು. ತದನಂತರ ಬೇಡನ್ ಪೊವೆಲ್ ಇವರ ಭಾವಚಿತ್ರಕ್ಕೆ ಎಲ್ಲಾ  ಅತಿಥಿ ಮಹೋದಯರು ಹೂವಿನ ಹಾರವನ್ನು ಹಾಕಿ ಪುಷ್ಪಾರ್ಪಣೆ ಮಾಡುವುದರ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ನಂತರ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸೈಯ್ಯದ್ ಮೊಹಮ್ಮದ್ ಗುತ್ತಿರವರು ನುಡಿದರು. ಕಾರ್ಯಕ್ರಮದ ಸ್ಕೌಟ್‌ನ ಸಂಕ್ಷಿಪ್ತ ಇತಿಹಾಸವನ್ನು ಶ್ರೀ ಶರಣಪ್ಪ ಹಾದಿಮನಿಯವರು ಹೇಳಿದರು ನಂತರ ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕರು ಶ್ರೀಮತಿ ಉಮಾದೇವಿ ಪಾಟೀಲ ತಮ್ಮ ಮುಖ್ಯ ಅತಿಥಿ ನುಡಿಯನ್ನಾಡಿದರು. ನಂತರ ವೇದಿಕೆ ಮೇಲೆ ಆಸೀನರಾಗಿರುವ ಎಲ್ಲಾ ಗಣ್ಯರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಜರಗಿತು. ತದ ನಂತರ ವೇದಿಕೆಯ ಅಧ್ಯಕ್ಷರಾದಂತಹ ಮಾನ್ಯ ಶ್ರೀಮತಿ ಅರುಣಾಕುಮಾರಿ ವಸ್ತ್ರದ ಮಾತನಾಡಿದರು.

ನಿರೂಪಣೆಯನ್ನು ಸ್ಥಳೀಯ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಹುಸೇನ್‌ಸಾಬ್ ಮಕಾಂದಾರ ಇವರು ನಿರ್ವಹಿಸಿದರು. ಸದರಿ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್ ತಮ್ಮ ತಮ್ಮಶಾಲೆಯ ಮಕ್ಕಳೊಂದಿಗೆ ಭಾಗವಹಿಸಿದ್ದರು.

* ಫೆಬ್ರವರಿ 22 ರಂದು ಸ್ಕೌಟ್ಸ್ ಸಂಸ್ಥಾಪಕರಾದ ಲಾರ್ಡ್ ಬೆಡನ್ ಪೊವೆಲ್‌ರವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಸಂಸ್ಥೆ ಕೊಪ್ಪಳ ಹಾಗೂ ಸ್ಥಳೀಯ ಸಂಸ್ಥೆ ಕೊಪ್ಪಳ, ಕುವೆಂಪು ಶತಮಾನೋತ್ಸವ ಮಾದರಿ ಶಾಲೆ ಕಿನ್ನಾಳ ಇವರ ಸಹಯೋಗದೊಂದಿಗೆ, ಆಚರಣೆ ಮಾಡಲಾಯಿತು. ಬೆಳಿಗ್ಗೆ ಸರಿಯಾಗಿ 7.30 ಘಂಟೆಗೆ "ಸರ್ವಧರ್ಮ ಪ್ರಾರ್ಥನೆಯನ್ನು" ಮಾಡಲಾಯಿತು. ನಂತರ ಬೇಡನ್ ಪೊವೆಲ್‌ರವರ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಲಾಯಿತು. ಹಾಗೂ ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಬೆಡನ್ ಪೊವೆಲ್‌ರವರ ಬಗ್ಗೆ ಕುರಿತು ಮಾತನಾಡಿ ಸರ್ವರಿಗೂ ಶುಭ ಕೋರಿದರು. ನಂತರ. 9.00 ಘಂಟೆಗೆ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳೊಂದಿಗೆ 'ಜಾಥಾ' ಕಾರ್ಯಕ್ರಮ ಮಾಡಲಾಯಿತು. ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ರವರು ವಾದ್ಯ ನುಡಿಸುವದರೂಂದಿಗೆ 'ಜಾಥಾ' ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ನಿರೂಪಣೆ ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ಮಾಡಿದರು, ಶ್ರೀ ಪ್ರಭಾಕರ್ ದಾಸರ್, ಜಿಲ್ಲಾ ಸಹ ಕಾರ್ಯದರ್ಶಿಗಳು, ಕಾರ್ಯಕ್ರಮಕ್ಕೆ ಸಹಕರಿಸಿದರು ಶಾಲೆಯ ಗೈಡ್ಸ್ ಶಿಕ್ಷಕಿಯರಾದ ಶ್ರೀಮತಿ ಬಸಮ್ಮ ಗುಜ್ಜಲ್ ಹಾಗೂ ಶಾಲೆಯ ಸರ್ವ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆಯಿಂದ ಆಯೋಜಿಸಿದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಮ್ಯಾರಥಾನ್ ಓಟದ ಚಾಲನೆಯುನ್ನು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿಗಳಾದ ರಾಮ್ ಅರಸಿದ್ದಿ ಸಿ.ಇ.ಓ. ಶ್ರೀ ರಾಹುಲ್ ರತ್ನಂಪಾಂಡೆ ಅವರು ಹಸಿರು ನಿಶಾನೆ ತೋರಿಸುವುದರೊಂದಿಗೆ ಚಾಲನೆ ನೀಡಿದರು.

*   ಫೆಬ್ರುವರಿ 22 ಸಂಸ್ಥಾಪಕರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಮಕ್ಕಳ ಜಾಥಾ   ಕಾರ್ಯಕ್ರಮಕ್ಕೆ ಶ್ರೀ ಮಾರುತಿ ಆರೇರ, ಜಿಲ್ಲಾ ಕಾರ್ಯದರ್ಶಿಗಳು ವಾದ್ಯ ನುಡಿಸುವುದರೊಂದಿಗೆ ಚಾಲನೆ ನೀಡಿದರು.



## ಮಧುಗಿರಿ

* ಫೆಬ್ರವರಿ 14 ರಂದು ಶಿರಾ ಪ್ರೆಸಿಡೆನ್ಸಿ ಪಬ್ಲಿಕ್ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಅಡುಗೆ ಪ್ರಾವೀಣ್ಯತಾಪದಕಕ್ಕೆ ಸಂಬಂಧಿಸಿದ ಪರೀಕ್ಷೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲರು ಶಾಲಾ ಮುಖ್ಯ ಶಿಕ್ಷಕರು ಸ್ಕೌಟ್ ಶಿಕ್ಷಕ ಕ್ಯಾಪ್ಟನ್ ಇವರೊಂದಿಗೆ ಇತರೆ ಶಿಕ್ಷಕರು ಉಪಸ್ಥಿತರಿದ್ದರು.



* ಫೆಬ್ರವರಿ 22 ರಂದು ಮದುಗಿರಿ ಜಿಲ್ಲಾ ಕಚೇರಿಯಲ್ಲಿ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು.

* ಫೆಬ್ರವರಿ 22 ರಂದು ಜಿ.ಎಚ್.ಪಿ.ಎಸ್ ಕೋಟೆ ಶಾಲೆ ಕೊರಟಗೆರೆ ಇಲ್ಲಿ ಸ್ಕೌಟ್–ಗೈಡ್ ವಿದ್ಯಾರ್ಥಿ ಸಂಸ್ಥಾಪಕರ ದಿನಾಚರಣೆ ಕುರಿತಾಗಿ ಭಾಷಣಮಾಡುವ ಮುಖಾಂತರ ಸ್ಕೌಟ್–ಗೈಡ್ ಇತಿಹಾಸವನ್ನು ತಿಳಿಸಿದರು.




* ಜಿ.ಎಚ್.ಪಿ.ಎಸ್ ಚನ್ನಪಟ್ಟಣ ಶಾಲೆಯಲ್ಲಿ ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಬೇಡನ್ ಪಾವಲ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದರು.

* ಕೆ.ಪಿ.ಎಸ್. ಹೊಳವನಹಳ್ಳಿ ಶಾಲೆಯಲ್ಲಿ ಬೇಡನ್ ಪಾವಲ್ ರವರ ಇತಿಹಾಸವನ್ನು ಶಿಕ್ಷಕರು ಮಕ್ಕಳಿಗೆ ತಿಳಿಯಪಡಿಸುವುದರ ಜೊತೆಯಲ್ಲಿ ಜನ್ಮ ದಿನಾಚರಣೆ ಅಂಗವಾಗಿ ಸರ್ವಧರ್ಮ ಪ್ರಾರ್ಥನೆಯನ್ನು ಆಚರಿಸಲಾಯಿತು.

* ಶಿರಾ ಪ್ರೆಸಿಡೆನ್ಸಿ ಪಬ್ಲಿಕ್ ಶಾಲೆಯ ಐಸಿ ಎಸ್ಸಿ ವಿಭಾಗದಲ್ಲಿ ನೂತನವಾಗಿ ಪ್ರಾರಂಭವಾದ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದಲ್ಲಿ ಸ್ಕೌಟ್–ಗೈಡ್ ಕುರಿತು ಶ್ರೀ ಕರಿಸಿದ್ದಪ್ಪ ಎ.ಎಸ್.ಓ.ಸಿ. ಇವರು ಮಾಹಿತಿ ನೀಡಿದರು ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಹಾಗೂ 62 ಸ್ಕೌಟ್ ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮೈಸೂರು

Mysuru Divisional Level Rovers and Rangers Meet – 2025was organized by The Bharat Scouts and Guides District Association, Mysuru in association with Sri K. Puttaswamy First Grade College, VVCE Campus, Mysuru on 7th March 2025. The Programme was started with an introductory note by Dr. M. Shivalingegowda, Principal of the College and also briefed about the objectives of the Rovers and Rangers Meet and the vision of the College.

The meet was inaugurated by the auspicious hands of eminent personality, Environmental expert and actor Sri Suresh Heblikar. In his inaugural speech. He urged youths to join hands in the movement for the conservation of the pristine Western Ghats, Sri P.

Vishwanath, District Chief Commission, District Association, Mysuru was the president of the programme and Sri B K Basavaraja,Assistant State Commissioner (Mysuru Division), Sri Abdul Jameel, District Secretary, Dr. K B Gurumurthy, District Treasurer, District Association, Mysuru, Dr. M. Shivalingegowda, Principal of the College were present in the programme.

The Inauguration followed by panel discussion on Building a Stronger Nation: The Role of Youth in India's Progress was moderated by Prof. C Naganna, Kannada Rajyotsava Awardee and Former Director, Prasaranga, University of Mysore, Mysuru. Dr. Ashok Rao, Director, NIE Society, Mysuru, Prof. Krishna Hombal, Professor and Chairman, DOS in Political Science,University of Mysore, Mysuru, Sri G L Tripurantaka, Coordinating Officer, JSS Educational Institutions,Mysuru, Prof. Lingaraju H G, Associate Professor,JSS Academy of Higher Education and Research, Mysuru were the panel speakers.

In afternoon Session the Meet Continued with Theme Dance Competition on Sustainable Development Goals and Youth Talk Competition. Totally 21 Colleges performed theme dance and 62 students participated in Youth Talk Competition

Sri P.G.R. Sindhia, State Chief Commissioner, Karnataka State delivered the valedictory address. Sri P. Vishwanath, District Chief Commission, District Association, Mysuru was the president of the programme.

Total of 953 Rovers and Rangers and Rovers and Rangers Scout Leaders from 57 different colleges of Mysuru, Mandya, Chamarajanagara and Hassan attended the Meet.







## ರಾಯಚೂರು

* ಫೆಬ್ರವರಿ 06 ರಂದು ರಾಯಚೂರು ಸ್ಥಳೀಯ ಸಂಸ್ಥೆ ವ್ಯಾಪ್ತಿಯ Race Chanakya Raichur ಶಾಲೆಯಲ್ಲಿ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್ ಹಾಗೂ ಗೈಡ್ಸ್ ದಳಗಳನ್ನು ಪ್ರಾರಂಭಿಸಲಾಯಿತು. ಇದೇ ಸಂದರ್ಭದಲ್ಲಿ ಚಾಣಕ್ಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಾವಿತ್ರಿ ಪುರುಷೋತ್ತಮ್‌ರವರು ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಪರಿಮಳಾರೆಡ್ಡಿ, ಸಿಬ್ಬಂದಿಗಳು ಹಾಗೂ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಆರ್.ಹೆಚ್. ಸಾಗರ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎನ್. ಶೇಖರ್ ಹಾಗೂ ಜಿಲ್ಲಾ ಸ್ಕೌಟ್–ಗೈಡ್ಸ್ ಸಹಾಯಕರಾದ ಮಹಮ್ಮದ್ ಶರ್ಫುದ್ದಿನ್‌ರವರು ಉಪಸ್ಥಿತರಿದ್ದರು.




* ಗಾಂಧೀಜಿ ಸ್ಮಾರಕ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಮೃತ ಮಹೋತ್ಸವ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ತಿಮ್ಮಯ್ಯ ಶೆಟ್ಟಿ ನೇತೃತ್ವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು. ಅದರಂತೆ ಭಾರತ್ ಮತ್ತು ಗೈಡ್ಸ್ ವತಿಯಿಂದ ಸ್ಥಳೀಯ ಸಂಸ್ಥೆಯ ತಾಂತ್ರಿಕ ಸಂಯೋಜಕರಾದ ಶ್ರೀ ಉದಯ್‌ಕುಮಾರ್ ಪತ್ತಾರ್ ಮತ್ತು ಜಂಟಿ ಕಾರ್ಯದರ್ಶಿಗಳಾದ ಶ್ರೀ ನರಸಿಂಹಮೂರ್ತಿ ದೇಸಾಯಿ ಅವರನ್ನು ಸನ್ಮಾನಿಸಿ ಸುವರ್ಣ ಗಾಂಧಿ ಸಾಧಕರು ಎಂದು ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



* ಫೆಬ್ರವರಿ 22 ರಂದು ಬೇಡನ್ ಪೊವೆಲ್ ಮತ್ತು ಲೇಡಿ ಬೇಡೆನ್ ಪೊವೆಲ್‌ರವರ ಜನ್ಮ ದಿನಾಚರಣೆ ಅಂಗವಾಗಿ ವಿಶ್ವ ಚಿಂತನಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದು, ನಗರ ಸಭೆಯ ಸದಸ್ಯರಾದ ಶ್ರೀ ಶರಣಬಸವ ಬಲಟಗಿ ಜಾತಕ್ಕೆ ಚಾಲನೆ ನೀಡಿದರು, ಸುಮಾರು 200 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಾಗೂ ಶಿಕ್ಷಕರು ಜಾಥದಲ್ಲಿ ಭಾಗವಹಿಸಿದರು, ಶ್ರೀ ಪವನ್ ಕುಮಾರ್ ಪಾಟೀಲ್ ಸರ್ಕಾರದ ಗ್ಯಾರೆಂಟಿ ಯೋಜನೆಗಳ ಅಧ್ಯಕ್ಷರು ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಶ್ರೀ ಮಹಮ್ಮದ್ ಫಿರೋಜ್ ಹಮ್‌ರಾಜ್, ಶಿಕ್ಷಣ ಸಂಸ್ಥೆಗಳ





ಅಧ್ಯಕ್ಷರು ಅವರು ಮುಖ್ಯ ಆತಿಥಿಗಳಾಗಿ ಭಾಗವಹಿಸಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಒಳ್ಳೆ ಸಮಾಜ ಸೇವಕರಾಗಿ ಉತ್ತಮ ಪ್ರಜೆಗಳಾಗಿ ಎಂದು ಹೇಳಿದರು, ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಪ್ರಬಣ್ಣಗೌಡ ಪಾಟೀಲ್ ಹಾಗೂ ಶ್ರೀ ಈರಣ್ಣ ಚಿತ್ರಗಾರ್ ಇವರು ಕಾರ್ಯಕ್ರಮದಲ್ಲಿ ಆತಿಥಿಗಳಾಗಿ ಆಗಮಿಸಿ, ರೋಟರಿ ಕ್ಲಬ್ ವತಿಯಿಂದ ಧನ ಸಹಾಯ ನೀಡಿದರು. ಟಾಗೋರ್ ಶಾಲೆಯ ರಾಷ್ಟ್ರಪತಿ ಪ್ರಶಸ್ತಿ ಪಡೆದ ಹಳೆಯ ವಿದ್ಯಾರ್ಥಿಗಳಾದ ಶ್ರೀ ಶಿವಯೋಗಿ, ಶ್ರೀ ಈರಣ್ಣ ಪತ್ತಾರ್, ಶ್ರೀ ವಿಜಯ್ ಕುಮಾರ್, ಶ್ರೀ ವಿನೋದ್ ಕುಮಾರ್ ಕುಂಟನಾಳ್ ಕಾರ್ಯಕ್ರಮಕ್ಕೆ ಬಂದು ಸಹಾಯ, ಸಹಕಾರ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಬಸವರಾಜ್ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದರು, ಶ್ರೀ ಆರ್.ಹೆಚ್. ಸಾಗರ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ರಾಜ್ಯ ಸಂಸ್ಥೆ ವತಿಯಿಂದ 2024–25ನೇ ಸಾಲಿನ ಮೇಡಲ್ ಆಫ್ ಮೇರಿಟ್ ಪ್ರಶಸ್ತಿ ಪಡೆದ ಶ್ರೀ ಆರ್.ಹೆಚ್. ಸಾಗರ್, ಅಧ್ಯಕ್ಷರು, ರಾಯಚೂರು ಸ್ಥಳೀಯ ಸಂಸ್ಥೆ ಇವರಿಗೆ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಹಾಗೂ ಹಳೆಯ ರಾಷ್ಟ್ರಪತಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಂದ ಸನ್ಮಾನಿಸಿ ಗೌರವಿಸಲಾಯಿತು, ಶ್ರೀ ಎನ್. ಶೇಖರ್, ಕಾರ್ಯದರ್ಶಿ ಸ್ಥಳೀಯ ಸಂಸ್ಥೆ ರಾಯಚೂರು ಇವರು ಎಲ್ಲರನ್ನು ಸ್ವಾಗತಿಸಿದರು, ಶ್ರೀಮತಿ ಚಾಮುಂಡಿ, ಸ್ಕೌಟ್ ಮಾಸ್ಟರ್, ಇವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು, ಶ್ರೀ ಬಸವರಾಜ್ ಗದಗಿನ, ಜಿಲ್ಲಾ ಕಾರ್ಯದರ್ಶಿಗಳು ಎಲ್ಲರಿಗೆ ವಂದಿಸಿದರು, ಶ್ರೀ ಮಹಮ್ಮದ್ ಶರ್ಫುದ್ದಿನ್‌ರವರು ಕಾರ್ಯನಿರ್ವಾಹಿಸಿದರು.

* ನಗರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಇಲಾಖೆ, ತಾಲೂಕ ಆರೋಗ್ಯ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ಮೇಳವನ್ನು ರಾಜ್ಯ ಆರೋಗ್ಯ ಸಚಿವ ಶ್ರೀ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಸಂದರ್ಭದಲ್ಲಿ ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, ರಾಯಚೂರು ಲೋಕಸಭಾ ಸದಸ್ಯ ಶ್ರೀ ಜಿ. ಕುಮಾರನಾಯಕ್, ಮಾನ್ವಿ ಶಾಸಕ ಶ್ರೀ ಹಂಪಯ್ಯ ಸಾಹುಕಾರ್ ಹಾಗೂ ಇತರೆ ನಾಯಕರುಗಳು ಉಪಸ್ಥಿತರಿದ್ದರು. ಸಹಸ್ರ ಸಂಖ್ಯೆಯಲ್ಲಿ ಸೇರಿದ್ದ ಫಲಾನುಭವಿಗಳ, ರೋಗಿಗಳ ಸಹಾಯಕ್ಕಾಗಿ ಅನೇಕ ಸಂಘ ಸಂಸ್ಥೆಗಳ ಸ್ವಯಂಸೇವಕರು ತಮ್ಮ ಸೇವೆ ಸಲ್ಲಿಸಿದರು. ಮಾನ್ವಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಆದ ಚಂದ್ರಶೇಖರ್ ದೊಡ್ಮನಿ ಅವರ ಆದೇಶದಂತೆ ಮಾನ್ವಿ ಸ್ಕೌಟ್ಸ್ ಅಂಡ್ ಗೈಡ್ಸ್ ಸ್ಥಳೀಯ ಸಂಸ್ಥೆಯ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಸೇವೆಯನ್ನು ಸಲ್ಲಿಸಿದರು.



## ಶಿವಮೊಗ್ಗ

* ಸ್ಕೌಟ್ಸ್–ಗೈಡ್ಸ್‌ನಲ್ಲಿ 25 ವರ್ಷಗಳಿಂದ ನಿರಂತರವಾಗಿ ವಿವಿಧ ಪ್ರಮುಖ ಹುದ್ದೆಯಲ್ಲಿ ಸೇವೆ ಸಲ್ಲಿಸಿ ವೃತ್ತಿಯಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರು ಮಾರ್ಚ್ 08 ರಂದು ಜಿಲ್ಲಾ ಮುಖ್ಯ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದರು. ನಗರದ ಸ್ಕೌಟ್ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಮಾತನಾಡಿ, "ಮಹತ್ತರ ಜವಾಬ್ದಾರಿ ವಹಿಸಿಕೊಂಡಿದ್ದು, ಎಲ್ಲ ಹಿರಿಯರ ಸಲಹೆ ಸಹಕಾರದೊಂದಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ




ಎಲ್ಲ ಕಾರ್ಯಕ್ರಮಗಳನ್ನು ಕ್ರೀಯಾಶೀಲವಾಗಿ ನಡೆಸಿಕೊಂಡು ಹೋಗಲು ಕಾರ್ಯಕ್ರಮಗಳನ್ನು ರೂಪಿಸಲಾಗುವುದು" ಎಂದು ತಿಳಿಸಿದರು. ಜಿಲ್ಲಾ ಮಾಜಿ ಆಯುಕ್ತ ಶ್ರೀ ಹೆಚ್.ಡಿ. ರಮೇಶ್ ಶಾಸ್ತ್ರಿ ಮಾತನಾಡಿ, "ಸ್ಕೌಟ್ ಮತ್ತು ಗೈಡ್ ಸಂಸ್ಥೆಯನ್ನು ಸಾಕಷ್ಟು ಜನ ಹಿರಿಯರು ಕಟ್ಟಿ ಬೆಳೆಸಿದ್ದು, ತನ್ನದೇ ಆದ ಇತಿಹಾಸ ಹೊಂದಿದೆ. ಸಂಸ್ಥೆಯಲ್ಲಿ ತರಬೇತಿ ಪಡೆದವರು ರಾಜ್ಯ, ರಾಷ್ಟ್ರಮಟ್ಟದಲ್ಲಿ ಉನ್ನತ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯದಲ್ಲೇ ಸಂಸ್ಥೆಯು ಮಾದರಿ ಸಂಸ್ಥೆಯಾಗಿದೆ" ಎಂದರು. ಇದೇ ಸಂದರ್ಭದಲ್ಲಿ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

* "ವಿದ್ಯಾಭ್ಯಾಸದ ಜೊತೆಗೆ ಮಕ್ಕಳಲ್ಲಿ ದೇಶಪ್ರೇಮ ಸಂಸ್ಕಾರ ಹಾಗೂ ಶಿಸ್ತನ್ನು ಬೆಳೆಸಲು ಸ್ಕೌಟ್–ಗೈಡ್ಸ್ ಸಂಸ್ಥೆಗಳು ತುಂಬಾ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ" ಎಂದು ಕೋಟೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀ ಸಂತೋಷ್ ಬಾಗೋಜಿ ಹೇಳಿದರು. ಮಾರ್ಚ್ 01 ರಂದು ಶಿವಮೊಗ್ಗ ಜಿಲ್ಲಾ ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಶಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ವತಿಯಿಂದ ಆಯೋಜಿಸಲಾಗಿದ್ದ ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾದ ರ್‍ಯಾಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಿ.ಇ.ಓ. ಕಚೇರಿಯ ಅಧಿಕಾರಿ ಶ್ರೀಮತಿ ಶಶಿರೇಖಾ ಅವರು ಮಾತನಾಡಿ, "ಬಾಲ್ಯದಲ್ಲಿ ಮಕ್ಕಳಿಗೆ ಸ್ಕೌಟ್ಸ್–ಗೈಡ್ಸ್‌ನಲ್ಲಿ ತೊಡಗಿಸಬೇಕು. ಇದರಿಂದ ಪ್ರಾಪಂಚಿಕ ಜ್ಞಾನ ಹಾಗೂ ಸಮಾಜಮುಖಿ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಹಾಗೂ ಪರಸ್ಪರರಲ್ಲಿ ಪ್ರೀತಿ ವಿಶ್ವಾಸ ವೃದ್ಧಿಸಲು ಅತ್ಯಂತ ಸಹಕಾರಿಯಾಗಿದೆ" ಎಂದು ಈ ಜಾಗೃತಿ ಜಾಥಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೈಡ್ ಆಯುಕ್ತ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರ ವಹಿಸಿ ಮಾತನಾಡಿಸಿದರು.




## ಉಡುಪಿ

* ಜನವರಿ 26 ರಂದು ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರ ಮಾರ್ಗದರ್ಶನದಲ್ಲಿ ಪರ್ಯಾಯ ಶ್ರೀ ಪುತ್ತಿಗೆ ಶ್ರೀಕೃಷ್ಣ ಮಠ ಉಡುಪಿ ಇವರ ಆಶ್ರಯದಲ್ಲಿ ಹಾಗೂ ಇತರ ಸಂಘ ಸಂಸ್ಥೆಯ ಸಹಕಾರದಿಂದ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ, ಭಾರತೀಯ ವೈದ್ಯ ಸಂಘ, ಮಹಿಳಾ



ವೈದ್ಯ ಘಟಕ, ಇಂಡಿಯಾ ಡೆಂಟಲ್ ಅಸೋಸಿಯೇಷನ್, ಎ.ಜೆ. ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್.. ಇಲ್ಲಿಯ ತಜ್ಞ ವೈದ್ಯರುಗಳಿಂದ ಎಲ್ಲಾ ತರದ ಆರೋಗ್ಯ ತಪಾಸಣೆಗಳನ್ನು ಉಚಿತವಾಗಿ ಮಾಡುವುದರ ಮೂಲಕ ಶಿಬಿರವು ನಡೆಯಿತು ಹಾಗೂ ಈ ಶಿಬಿರದಲ್ಲಿ ತೃತೀಯ ಸೋಪಾನ್, ನಿಪುಣ್, ರಾಜ್ಯ ಪುರಸ್ಕಾರ ಪರೀಕ್ಷೆಗೆ ಅರ್ಹರಿರುವ ವಿದ್ಯಾರ್ಥಿಗಳ ಆಂಬುಲೆನ್ಸ್ ಮ್ಯಾನ್ ಹಾಗೂ ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿ ಶಿಬಿರವನ್ನು ನಡೆಸಲಾಯಿತು.

* ಉಡುಪಿಯ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ... ಜಿಲ್ಲಾ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡ, ಶಾಸಕ ಶ್ರೀ ಯಶ್‌ಪಾಲ್ ಎ. ಸುವರ್ಣ, ನಗರ ಸಭೆ ಅಧ್ಯಕ್ಷ ಶ್ರೀ ಪ್ರಭಾಕರ್ ಪೂಜಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಶ್ರೀ ದಿನಕರ್ ಹೇರೂರು, ವಿಧಾನ ಪರಿಷತ್ ಶಾಸಕ ಶ್ರೀ ಮಂಜುನಾಥ್ ಭಂಡಾರಿ, ಜಿಲ್ಲಾಧಿಕಾರಿ ಡಾ. ವಿದ್ಯಾಕುಮಾರಿ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ಕೆ. ಕರಾವಳಿ ಕಾವಲು ಪೊಲೀಸ್ ಅಧೀಕ್ಷಕ ಶ್ರೀ ಮಿಥುನ್ ಹೆಚ್.ಎನ್., ಕಾರ್ಕಳ ವೈಲ್ಡ್ ಲೈಫ್ ಆಈಔ ಶ್ರೀ ಶಿವರಾಮ ಎಂ. ಬಾಬು, ಇತರ ಗಣ್ಯರು ಉಪಸ್ಥಿತರಿದ್ದರು..... ಪಥ ಸಂಚಲನ ಕಾರ್ಯಕ್ರಮದಲ್ಲಿ ಸೈಂಟ್ ಸಿಸಿಲಿ ಆಂಗ್ಲ ಮಾಧ್ಯಮ ಶಾಲೆಯ ಗೈಡ್ ತಂಡವು ದ್ವಿತೀಯ ಸ್ಥಾನವನ್ನು ಪಡೆಯಿತು. ಹಾಗೂ ಸೈಂಟ್ ಸಿಸಿಲಿ ಸ್ಕೌಟ್ಸ್ ವಿಭಾಗ, ಕ್ರಿಶ್ಚನ್ ಹೈಸ್ಕೂಲ್ ಸ್ಕೌಟ್–ಗೈಡ್ಸ್ ವಿಭಾಗ ಪಥಸಂಚಲನದಲ್ಲಿ ಭಾಗವಹಿಸಿದ್ದರು.



* ಜನವರಿ 29 ರಂದು ಸಿಲಾಸ್ ಇಂಟರ್ ನ್ಯಾಷನಲ್ ಸ್ಕೂಲ್ ಇಲ್ಲಿ ಸಾಲಿನ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜನಾರ್ಧನ್ ಕೊಡವ, ಜಿಲ್ಲಾ ಖಜಾಂಚಿ,ಶ್ರೀ ಹರಿಪ್ರಸಾದ್ ರೈ, ಜಿಲ್ಲಾ ಪದಾಧಿಕಾರಿಯಾಗಿರುವ ಶ್ರೀ ಭುವನೇಂದ್ರ ಹೆಗ್ಗಡೆ, ಉಡುಪಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾಗಿರುವ ಶೇಖರ್ ಪೂಜಾರಿ ಇವರೆಲ್ಲರೂ ,ಬೇಸಿಗೆ ಶಿಬಿರ ನಡೆಯುವ ಸ್ಥಳಕ್ಕೆ ಆಗಮಿಸಿ ಮಕ್ಕಳಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಂತಹ ಶಾಲಾ ಪ್ರಾಂಶುಪಾಲರಿಗೆ, ದಳ ನಾಯಕ ನಾಯಕಿಯರಿಗೆ ಹಾಗೂ ಎಲ್ಲಾ ಶಿಕ್ಷಕ ವೃಂದಕ್ಕೆ ಶುಭ ಹಾರೈಸಿದರು.

## ತುಮಕೂರು

* ಸ್ಥಳೀಯ ಸಂಸ್ಥೆ ಹಾಗೂ ಶ್ರೀ ಸಿದ್ದಗಂಗಾ ಮಠದ ಸಮೂಹ ಶಾಲೆಗಳ ಸ್ಕೌಟ್ ದಳಗಳು ಸೇರಿ2024–25ನೇ ಸಾಲಿನ ಬೇಸಿಗೆ ಶಿಬಿರವನ್ನು ಮಾರ್ಚ್ 12 ರಿಂದ 14ರ ವರೆಗೆ ಆಯೋಜಿಸಲಾಗಿತ್ತು. ಬೇಸಿಗೆ ಶಿಬಿರವನ್ನು ಶ್ರೀ ಸಿದ್ದಗಂಗಾ ಮಠದ ಕ್ಷೇತ್ರಾಧ್ಯಕ್ಷರಾದ ಶ್ರೀ ಶ್ರೀ ಸಿದ್ದಲಿಂಗಮಹಾಸ್ವಾಮಿಗಳು ಗಿಡಕ್ಕೆ ನೀರೆಯುವುದರ ಮೂಲಕ ಉದ್ಘಾಟನೆ ಮಾಡಿದರು.





ಫೆಬ್ರವರಿ 12 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಮೌಂಟ್ ರೋಸರಿ ಆಂಗ್ಲ ಮಾಧ್ಯಮ ಶಾಲೆ ಕಲ್ಯಾಣಪುರ ಇಲ್ಲಿಯ ತೃತೀಯ ಸೋಪಾನ, ರಾಜ್ಯ ಪುರಸ್ಕಾರ ಪರೀಕ್ಷೆ ಬರೆಯುವ ಸ್ಕೌಟ್ಸ್ ಮತ್ತು ಗೈಡ್ಸ್ ಭಾಗವಹಿಸಿದ್ದರು.

ಫೆಬ್ರವರಿ 22 ರಂದು ಶ್ರೀ ಕೃಷ್ಣ ರಾಜಾಂಗಣದಲ್ಲಿ ಜಿಲ್ಲಾ ಮಟ್ಟದ ಕಬ್ ಬುಲ್ ಬುಲ್ ಉತ್ಸವವನ್ನು ಶ್ರೀ ಶ್ರೀ ಶ್ರೀ ಪರ್ಯಾಯ ಸುಗುಣೇಂದ್ರತೀರ್ಥ ಸ್ವಾಮೀಜಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಇಂದ್ರಾಳಿ ಜಯಕರ್ ಶೆಟ್ಟಿ, ಸ್ಕೌಟ್ ಅಯುಕ್ತರಾದ ಶ್ರೀ ಜನಾರ್ದನ್ ಕೊಡವರು, ಸಾಂಸ್ಕೃತಿಕ ಕಾರ್ಯಕ್ರಮದ ಕಾರ್ಯದರ್ಶಿಯಾಗಿರುವ ಶ್ರೀ ರಮೇಶ್ ಭಟ್, ಜಿಲ್ಲಾ ಉಪಾಧ್ಯಕ್ಷರಾಗಿರುವ ಶ್ರೀ ಅಡ್ವಿನ್ ಆಳ್ವ, ಜಿಲ್ಲಾ ಕಾರ್ಯದರ್ಶಿಯಾಗಿರುವ ಶ್ರೀ ಆನಂದ್ ಬಿ. ಅಡಿಗ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಉದಯಭಾಸ್ಕರ್ ಶೆಟ್ಟಿ, ಮುಕುಂದ ಕೃಪ ಆಂಗ್ಲ ಮಾಧ್ಯಮ ಶಾಲೆ ಮುಖ್ಯೋಪಾಧ್ಯಾಯರಾಗಿರುವ ಶ್ರೀಮತಿ ಸುಜಾತಶೆಟ್ಟಿ ಹಾಗೂ ಕಬ್–ಬುಲ್‌ಬುಲ್ ಶಿಕ್ಷಕರು ಹಾಗೂ 300ಕ್ಕೆ ಹೆಚ್ಚು ಕಬ್–ಬುಲ್‌ಬುಲ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.







# ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು–6

## ಕಂಪಾಸ್ : ದಿಕ್ಕುಕೆಡಲು ಬಿಡದ ಮಿತ್ರ

– ಎಂ.ಎನ್. ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು



**ಕುಡಿಯಲು ಯೋಗ್ಯ ನೀರು :**

ಕಂಪಾಸ್ ಯಾವಾಗ ಎಲ್ಲಿ ಮೊದಲು ಉಪಯೋಗಿಸಲ್ಪಟ್ಟಿತು ಎನ್ನುವುದನ್ನು ನಿಖರವಾಗಿ ಹೇಳಲು ಕಷ್ಟ, ಆದರೆ ಲೋಡ್ ಸ್ಟೋನ್ ಎಂದರೆ ನಮ್ಮ ಮುಳ್ಳಯ್ಯನಗಿರಿಯಲ್ಲಿ ದೊರೆಯುವ ಮ್ಯಾಗ್ನಟೈಟ್ ಇದರಲ್ಲಿ ಕಬ್ಬಿಣವನ್ನು ಆಕರ್ಷಿಸುವ (ಆಯಸ್ಕಾಂತದ) ಗುಣವಿದೆ. ಎಂದು ಚೀನಿಯರು ಮೊದಲು ಗುರುತಿಸಿದರು. ಮೊದಲ ಕಂಪಾಸ್ ಮಾದರಿಯಲ್ಲಿ, ಒಂದು ಬಟ್ಟಲು ನೀರಲ್ಲಿ, ಕಾರ್ಕಿನ ಮೇಲೆ ಮ್ಯಾಗ್ನಟೈಟ್ ಕಲ್ಲನ್ನು ತೇಲಿಸಿ ದಿಕ್ಕನ್ನು ಗುರುತು ಹಿಡಿಯುತ್ತಿದ್ದರು. ಸುಮಾರು 3000 ವರ್ಷಗಳ ಹಿಂದೆ ಹನ್ನೊಂದು ಮತ್ತು ಹನ್ನರಡನೆಯ ಶತಮಾನದ ಚೀನಿಯರ ಪುಸ್ತಕಗಳಲ್ಲಿ ಮೀನು ಹಾಗೂ ಆಮೆಯ ಆಕಾರದ ದಿಕ್ಸೂಚಿಗಳ ಉಲ್ಲೇಖವಿದೆ.

ಮೊದಲ ದಿಕ್ಸೂಚಿಯ ವಿವರವಾದ ಮಾಹಿತಿಯು 1088ರ ಶೆನ್‌ಕೂ ಎನ್ನುವವನು ಬರೆದಿರುವ ಪುಸ್ತಕದಲ್ಲಿ ದಾಖಲೆ ಇದೆ, ಅಂದರೆ ಇದು ಯುರೋಪಿನವರು ಚಿಂತಿಸುವ ನೂರು ವರ್ಷಗಳ ಹಿಂದೆ! ನಂತರದ ದಿನಗಳಲ್ಲಿ ಮೋಡ ತುಂಬಿದ ವಾತಾವರಣದಲ್ಲಿ ದಿಕ್ಕು ಕಂಡು ಹಿಡಿಯಲು ಹಾಗೂ 1200 ಸುಮಾರಿನಲ್ಲಿ ಅರೇಬಿಯನ್ ವರ್ತಕರು ಮತ್ತು ವೈಕಿಂಗ್‌ಗಳು ಕಂಪಾಸ್ ಉಪಯೋಗಿಸುತ್ತಿದ್ದರೆಂಬ ಮಾಹಿತಿಯಿದೆ.

ಹದಿನಾಲ್ಕನೆ, ಶತಮಾನದ ತನಕ ಕಂಪಾಸ್ ತಯಾರಿಯಲ್ಲಿ ಚೀನಿಯರದೇ ಪಾರಮ್ಯವಿತ್ತು, ಕ್ರಮೇಣವಾಗಿ ಯುರೋಪಿಯನ್ನರು ಜೇಬಿನಲ್ಲಿಡಬಹುದಾದ ಕಂಪಾಸ್ ಅವಿಷ್ಕರಿಸಿದರು. ನಂತರದಲ್ಲಿ ಬಂದಿರುವ ದಿಕ್ಸೂಚಿಗಳು ಇಲ್ಲಿಯ ತನಕ ಉಳಿದುಕೊಂಡು ಬಂದಿವೆ. ವಾಚ್ ಅಥವಾ ಬಾಕ್ಸ್ ಕಂಪಾಸ್ ಬಂದ ನಂತರ, ಮೊದಲನೆಯ ಯುದ್ಧದ ಸಮಯದಲ್ಲಿ ಬ್ರಿಟಿಷ್ ಸೇನೆಯು ಅವಿಷ್ಕರಿಸಿದ ನೀರು ತುಂಬಿದ ದಿಕ್ಸೂಚಿಯು ನಂತರದ ದಿನಗಳಲ್ಲಿ ಬಹಳಷ್ಟು ಮಾರ್ಪಡಾಗುತ್ತಾ ಸಿಲ್ವಾ ಕಂಪಾಸ್ ತನಕ ಬಂದಿವೆ.

ಒಂದು ಶತಮಾನದ ಹಿಂದಿನ ಅಷ್ಟೇನೂ ನಿಖರವಲ್ಲದ, ಭಾರವಾದ, ಒದ್ದೆಯಾಗಬಲ್ಲ ಹಾಗೂ ಬೇರಿಂಗ್ (ಃಜಚಿಡಿಟಿರ) ಕಂಡುಕೊಳ್ಳಲು ಕಷ್ಟವಾಗಿದ್ದ ಕಂಪಾಸ್‌ಗಳ ಜಾಗದಲ್ಲಿ ಇಂದು ಜೇಬಿನಲ್ಲಿಟ್ಟುಕೊಳ್ಳಬಹುದಾದ ಕರಾರುವಕ್ಕಾಗಿ ಅಳತೆ ನೀಡಬಲ್ಲ ಕಡಿಮೆ ಬೆಲೆಯ ದಿಕ್ಸೂಚಿಗಳು ಎಲ್ಲ ಕಡೆಯೂ ಲಭ್ಯ.

**ಐದು ರೀತಿಯ ಕಂಪಾಸ್‌ಗಳು :**

1. ಸ್ಥಿರ ಡಯಲ್ ಕಂಪಾಸ್ (ಸೂಜಿಯು ಮಾತ್ರ ಚಲಿಸುತ್ತದೆ)
2. ಚಲಿಸುವ ಡಯಲ್ (ಕಂಪಾಸ್)
3. ನಾವಿಕರ ದಿಕ್ಸೂಚಿ
4. ಓರಿಯಂಟಿಂಗ್ (ಕಂಪಾಸ್)
5. ಎಲೆಕ್ಟ್ರಾನಿಕ್ ಅಥವಾ ಡಿಜಿಟಲ್ ಕಂಪಾಸ್‌ಗಳು

ಇದಲ್ಲದೆ ಅಂಧರು ಉಪಯೋಗಿಸಲು ಸಾಧ್ಯವಾಗುವಂತಹ ಬ್ರೈಲ್ ಕಂಪಾಸ್ ಕೂಡಾ ದೊರೆಯುತ್ತದೆ.

ಬೇರಿಂಗ್ : ಬೇರಿಂಗ್ ಅಂದರೆ ಮ್ಯಾಗ್ನಟಿಕ್ ಉತ್ತರ ಹಾಗೂ ತಲುಪಬೇಕಾದ ಸ್ಥಳದ ಮಧ್ಯೆ ಇರುವ ಕೋನ ಇದರಿಂದ ನಾವು ಹೋಗಬೇಕಾದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕಿರುವ ದೂರವನ್ನು ಕೂಡಾ ಕಂಡುಕೊಳ್ಳಬಹುದು.

ಮೊದಲು ಕಂಪಾಸಿನ ಕೆಂಪು ಸೂಚಕವು ಮೊದಲ ಗುರಿಯ ಕಡೆಗೆ ಹೊಂದಿಸಿ ನಂತರ ನಿಂತಲ್ಲಿಯೇ ಡಯಲ್ಲನ್ನು ತಿರುಗಿಸಿ ಕಂಪಾಸಿನ ಉತ್ತರ ಸೂಚಿ ಹಾಗೂ ಸೂಜಿಯ ಕೆಂಪು ತುದಿ ಒಟ್ಟಿಗೆ ಬರುವಂತೆ ತಿರುಗಿಸಿದಾಗ ಬೇರಿಂಗ್ ದೊರೆಯುತ್ತದೆ. (ಸ್ವಲ್ಪ ಅಭ್ಯಾಸದ ನಂತರ ಕಲಿತುಕೊಳ್ಳಬಹುದು). ಭೂ ಮಾಪಕರು ಮತ್ತು ವನರಕ್ಷಕರಿಗೆ ಅತೀ ಕರಾರುವಕ್ಕಾದ ಮಾಪನಬೇಕಾಗುತ್ತದೆ, ಆದರೆ ನಮಗೆ ಸುಮಾರು 4 ಡಿಗ್ರಿ ಹೆಚ್ಚು ಕಡಿಮೆಯಿದ್ದರೂ ನಡೆಯುತ್ತದೆ.

**ನಿಖರತೆ : ಎಷ್ಟು ಅವಶ್ಯಕ:–** ಕಂಪಾಸ್‌ನಲ್ಲಿ ಒಂದು ಡಿಗ್ರಿ ವ್ಯತ್ಯಾಸವಾದರೂ, ಒಂದು ಮೈಲಿಗೆ 92 ಅಡಿ ವ್ಯತ್ಯಾಸವಾಗುತ್ತದೆ, 40 ವ್ಯತ್ಯಾಸವಾದರೆ ಒಂದು ಮೈಲಿಗೆ 368 ಅಡಿ ದೂರವಾಗುತ್ತದೆ. ಒಂದು ಬಾರಿ ಬೇರಿಂಗ್ ಮೂಲಕ ಗುರಿಯನ್ನು ಸ್ಥಿರಪಡಿಸಿಕೊಂಡ ಮೇಲೆ ದೂರದ ಒಂದು ಟವರ್, ಎತ್ತರದ ಕಟ್ಟಡ, ಬಂಡೆ, ಗುಡ್ಡದ ಶಿಖರ ಹೀಗೆ ಯಾವುದನ್ನಾದರೂ ಗುರುತು ಮಾಡಿಕೊಂಡು ಅದರೆಡೆಗೆ ನಡೆಯುವುದರಿಂದ ಸರಿಯಾಗಿ ಗುರಿ ತಲುಪಬಹುದು. ಮ್ಯಾಪಿನ ಸಹಾಯದಿಂದ ನಿರ್ದಿಷ್ಟ ಗುರಿ ಕಂಡುಕೊಂಡ ಮೇಲೆ ಮುಂದಿನ ಜಾಗ ತಲುಪುವ ತನಕ ಮ್ಯಾಪಿನ ಅವಶ್ಯಕತೆಯಿರುವುದಿಲ್ಲ.

**ಜ್ಞಾಪಕವಿರಲಿ:–** ಕಂಪಾಸ್ ನಿಮ್ಮ ಕ್ಯಾಂಪಿಂಗ್ ವಸ್ತುಗಳಲ್ಲಿ ಪ್ರಮುಖವಾದದ್ದು, ಹಿಂದಿನ ಕಂಪಾಸ್‌ಗಳಲ್ಲಿ ದಿಕ್ಸೂಚಿಯು ಸ್ಥಿರವಾಗಿ ನಿಲ್ಲಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದವು, ಆದರೆ ಇತ್ತೀಚಿನವು ಒಳಗಡೆ ದ್ರವ ತುಂಬಿರುವುದರಿಂದ ಬೇಗ ಸ್ಥಿರವಾಗುತ್ತದೆ.

**ಕಂಪಾಸಿನ ಮುಳ್ಳು ಏಕೆ ಉತ್ತರ – ದಕ್ಷಿಣ ಮುಖವಾಗಿ ನಿಲ್ಲುತ್ತದೆ?** ಭೂಮಿಯು ಒಂದು ಬೃಹತ್ ಆಯಸ್ಕಾಂತ – ಆದ್ದರಿಂದ ಮುಳ್ಳು ಅದಕ್ಕೆ ಹೊಂದಿಕೊಂಡು ನಿಲ್ಲುತ್ತದೆ.

ಜಿ.ಪಿ.ಎಸ್ : (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಎಲ್ಲಿಯೇ ಇದ್ದರೂ, ನಾವೆಲ್ಲಿದ್ದೇವೆ, ಯಾವದಾರಿ, ಎಷ್ಟು ದೂರ ಎಲ್ಲ ವಿವರಗಳನ್ನು ಕ್ಷಣ ಮಾತ್ರದಲ್ಲಿ ಕೊಡಬಲ್ಲದು!

ಭೂಮಿಯಿಂದ 20,000 ಕಿಲೋಮೀಟರ್ ದೂರದಲ್ಲಿ ಇರಿಸಲಾದ 24 ಉಪಗ್ರಹಗಳು, ಕ್ಷಣ ಮಾತ್ರದಲ್ಲಿ ಮಾಹಿತಿ ಕೇಳುವ ಜಾಗ ಸಮಯ, ದೂರ ಎಲ್ಲವನ್ನೂ ಲೆಕ್ಕ ಹಾಕಿ ನಮಗೆ ನೀಡುತ್ತದೆ.

ಜಾಗ್ರತೆ : ನೆಟ್‌ವರ್ಕ್ ಇಲ್ಲದ ಕಡೆ, ಮೊಬೈಲ್ ಚಾರ್ಜ್ ಇಲ್ಲದಾಗ, ಮರುಭೂಮಿ, ಸಾಗರ, ದಟ್ಟಾರಣ್ಯ ಇಂತಹ ಸ್ಥಳಗಳಲ್ಲಿ – ಕಂಪಾಸೇ ಗತಿ.

**ಕಂಪಾಸ್ ಉಪಯೋಗಿಸುವ ಕ್ರಮ :** 1. ಬಲಗೈನಲ್ಲಿ ದಿಕ್ಸೂಚಿಯನ್ನು ಸ್ಥಿರವಾಗಿ ಹಿಡಿದು ಎಡಗೈ ಬೆರಳುಗಳಿಂದ (ಚಿತ್ರದಲ್ಲಿ ಕಾಣುವ ಹಾಗೆ) ಡಯಲ್‌ನ್ನು ದಿಕ್ಸೂಚಿಯ ಉತ್ತರ (ಕೆಂಪು ಬಾಣ) ಹಾಗೂ ಕಂಪಾಸಿನ ಉತ್ತರ ಎರಡೂ ಕೂಡುವಂತೆ ತಿರುಗಿಸಬೇಕು. ಕಂಪಾಸಿನ ಮುಂಭಾಗ ನಾವು ಹೋಗಬೇಕಾದ ಲ್ಯಾಂಡ್ ಮಾರ್ಕ್ ಕಡೆಗೆ ಸರಿಯಾಗಿ ಒರಿಯಂಟ್ ಮಾಡಿದಾಗ ಡಯಲ್‌ನಲ್ಲಿ ನಮಗೆ ಬೇರಿಂಗ್ ತೋರುತ್ತದೆ. ಅದನ್ನೇ ಅನುಸರಿಸಬೇಕು.



2. ಸ್ಥಿರ ಡಯಲ್ ಕಂಪಾಸ್ – ಚಿತ್ರದಲ್ಲಿ ಕಾಣಿಸಿರುವ ಹಾಗೆ ಎರಡೂ ಕೈನಲ್ಲಿ ಕಂಪಾಸ್ ಹಿಡಿದುಕೊಂಡು

ನಾವು ಹೋಗಬೇಕಾದ ಲ್ಯಾಂಡ್ ಮಾರ್ಕ್ ____ ಕಡೆಗೆ ಮುಖ ಮಾಡಿ ನಿಂತು, ಎರಡೂ ತೋರು ಬೆರಳುಗಳು ಆ ದಿಕ್ಕಿನ ಕಡೆಗೆ ಬಾಣದ ಹಾಗೆ ಮುಖ ಮಾಡಿರಬೇಕು.

ದಿಕ್ಸೂಚಿಯ ಉತ್ತರ ಹಾಗೂ ಕೆಂಪು ಮುಳ್ಳು ಒಂದೇ ಕಡೆ ಬರುವಂತೆ ತಿರುಗಿಸಿ ಸ್ಥಿರವಾಗಿ ಹಿಡಿದುಕೊಂಡು ಹೆಗ್ಗುರುತಿನ ಕಡೆಗೆ ನೋಡಿ ಡಯಲ್‌ನಲ್ಲಿ ಸೂಚಿಸಿರುವ ಬೇರಿಂಗ್ ಕಂಡುಕೊಳ್ಳುವುದು.



**Conclusion :** ಕಂಪಾಸ್ ಮತ್ತು ಮ್ಯಾಪ್ ಉಪಯೋಗ ತಿಳಿದಿದ್ದರೆ, ಒಂಟಿಯಾಗಿ ಅಥವಾ ಗೆಳೆಯರೊಡನೆ ಪ್ರಕೃತಿಯಲ್ಲಿ ಹುದುಗಿರುವ ಹೊಸ ಹೊಸ ಅದ್ಭುತಗಳನ್ನು ಶೋಧಿಸಲು ಹಾಗೂ ಸುರಕ್ಷಿತವಾಗಿ ಹಿಂತಿರುಗಲು ಸಾಧ್ಯವಾಗುವುದರ ಜೊತೆಗೆ ಆತ್ಮಸ್ಥೈರ್ಯ ಹೆಚ್ಚಿಸುವುದರಲ್ಲಿ ಎರಡು ಮಾತಿಲ್ಲ.

# ಭಾರತ ಮತ್ತು ಅಮೇರಿಕಾದಲ್ಲಿ ಸ್ಕೌಟಿಂಗ್ ಚಟುವಟಿಕೆ ಒಂದು ತುಲನೆ

– ಎನ್. ಶ್ರೀನಿವಾಸನ್, ಎಲ್.ಟಿ.(ಸ್ಕೌಟ್)
ಸಹಾಯಕ ರಾಜ್ಯ ಆಯುಕ್ತರು

ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ . . . .

ಅಮೇರಿಕಾದಲ್ಲಿಯೂ ಸಹ ಬಾಲಕರ ಗುಂಪನ್ನು "ಟ್ರೂಪ್" ಎಂದೇ ಹೇಳುತ್ತಾರೆ. ಆದರೆ ಇಲ್ಲಿ, ಒಂದು "ಟ್ರೂಪ್"ನಲ್ಲಿ ಇರಬಹುದಾದ ಬಾಲಕರ ಸಂಖ್ಯೆಗೆ ಮಿತಿಯಿಲ್ಲ. ಇಲ್ಲಿ "ಟ್ರೂಪ್" ಗಳನ್ನು ಹೆಸರುಗಳಿಂದ ಗುರುತಿಸುವುದಿಲ್ಲ, ಬದಲಾಗಿ ಅವುಗಳಿಗೆ ಸಂಖ್ಯೆಗಳನ್ನು ನೀಡುತ್ತಾರೆ. ಉದಾ: ಟ್ರೂಪ್ 430, ಟ್ರೂಪ್ 320 ಇತ್ಯಾದಿ. ಅದರಲ್ಲಿ ಪೆಟ್ರೋಲ್‌ಗಳೆಂಬ ಉಪ ಗುಂಪುಗಳು ಇರುತ್ತವೆ. ಅವುಗಳ ಹೆಸರುಗಳು, "Atomic Biscuits", "Ice Dragons" ಇತ್ಯಾದಿ. ಇವುಗಳನ್ನು ಆಯಾ ಪೆಟ್ರೋಲ್‌ನ ಸದಸ್ಯರುಗಳೇ ತಮ್ಮ ಭಾವನೆಗಳಿಗೆ ಅನುಗುಣವಾಗಿ ರಚನಾತ್ಮಕವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ.

ಇಲ್ಲಿ, ಸ್ಕೌಟ್ ಮಾಸ್ಟರ್ ಹುದ್ದೆ ಶಾಶ್ವತವಲ್ಲ. ಹಲವಾರು ವರ್ಷಗಳಿಗೊಮ್ಮೆ ಸ್ಕೌಟ್ ಮಾಸ್ಟರ್ ಬದಲಾಗುತ್ತಾರೆ. ಆ ಟ್ರೂಪ್‌ಗೆ ಸಂಬಂಧಪಟ್ಟ ಹಲವಾರು ಅಸಿಸ್ಟೆಂಟ್ ಸ್ಕೌಟ್ ಮಾಸ್ಟರ್‌ಗಳ ಪೈಕಿ ಸರದಿಯ ಪ್ರಕಾರ ಸ್ಕೌಟ್ ಮಾಸ್ಟರ್‌ಗಳಾಗಿ ಕಾರ್ಯ ನಿರ್ವಹಿಸುತ್ತಾರೆ.

ಹಾಗೆಯೇ ಅಮೇರಿಕೆಯಲ್ಲಿ ಶಾಲಾ ಪ್ರಾಯೋಜಿತ ಟ್ರೂಪ್‌ಗಳು ಇಲ್ಲವೇ ಇಲ್ಲ. ಎಲ್ಲವೂ ಮುಕ್ತ ಟ್ರೂಪ್‌ಗಳೇ ಆಗಿವೆ. ಆದರೆ, ಅವರು ಟ್ರೂಪ್ ಮೀಟಿಂಗ್ ನಡೆಸಲು, ಕೆಲವು ಶಾಲೆಗಳ ಮುಖ್ಯಸ್ಥರು ರಜಾದಿನಗಳಲ್ಲಿ ತಮ್ಮ ಶಾಲಾ ಆವರಣವನ್ನು ಬಿಟ್ಟುಕೊಡುತ್ತಾರೆ. ಹೆಚ್ಚಿನ ಸಂಖ್ಯೆಯ ಟ್ರೂಪ್‌ಗಳು ಚರ್ಚ್ ಆವರಣದಲ್ಲಿ ತಮ್ಮ ಚಟುವಟಿಕೆ ನಡೆಸುತ್ತವೆ. ಪೋಷಕರಿಂದ ಹಾಗೂ ಚರ್ಚ್‌ಗಳಿಂದ ಇವರಿಗೆ ಆರ್ಥಿಕ ಸಹಾಯ ದೊರಕುತ್ತದೆ.

ಇಲ್ಲಿಯೂ ಸಹ ವಾರಕ್ಕೊಮ್ಮೆ ಟ್ರೂಪ್ ಮೀಟಿಂಗ್ ನಡೆಯುತ್ತದೆ. ಇದು ಒಂದು ಗಂಟೆಗಿಂತಲೂ ಹೆಚ್ಚು ಕಾಲ ನಡೆಯುತ್ತದೆ. ಇದರ ಪ್ರಾರಂಭ ಮತ್ತು ಅಂತ್ಯ ವಿಧ್ಯುಕ್ತವಾಗಿದ್ದರೂ ಸಹ ಭಿನ್ನವಾಗಿದೆ. ನಮ್ಮಲಿರುವಂತೆ ಪ್ರತ್ಯೇಕ ಸ್ಕೌಟ್ ಧ್ವಜ ಇಲ್ಲ. ಬದಲಾಗಿ ರಾಷ್ಟ್ರ ಧ್ವಜ, ರಾಜ್ಯ ಧ್ವಜ ಮತ್ತು ಟ್ರೂಪ್ ಧ್ವಜ ಇರುತ್ತದೆ. ಆದರ, ವಿಧ್ಯುಕ್ತ ಪ್ರಾರಂಭವನ್ನು ಹೊರಾಂಗಣದಲ್ಲಿ ಮಾಡುವುದಿಲ್ಲ. ಒಳಾಂಗಣದಲ್ಲಿ ಸೂಕ್ತ ವಿಧಿ ವಿಧಾನಗಳ ಮೂಲಕ ಮಾಡುತ್ತಾರೆ. ಇಲ್ಲಿ ಕುದುರೆಲಾಳಾ ಕೃತಿಯಲ್ಲಿ ನಿಲ್ಲುವುದಿಲ್ಲ.



ಮೂರು ಧ್ವಜಗಳನ್ನು ಶಿಸ್ತು ಬದ್ಧವಾಗಿ ಒಳಗರ ತರಲಾಗುತ್ತದೆ ಹಾಗೂ ಸೂಕ್ತ ಸ್ಥಳದಲ್ಲಿ ನಿಲ್ಲಿಸಲಾಗುತ್ತದೆ. ನಂತರ ಎಲ್ಲರೂ ಸವಧಾನದಲ್ಲಿ ನಿಂತು ಅಮೇರಿಕಾ ದೇಶಕ್ಕೆ ತನ್ನ ನಿಷ್ಠೆ (Allegiance) ತೋರುವ ಪ್ರತಿಜ್ಞೆಯನ್ನು ಎದೆಯ ಮೇಲೆ ಕೈ ಇಟ್ಟು ಪುನರುಚ್ಚರಿಸುತ್ತಾರೆ. ಉಳಿದ ಚಟುವಟಿಕೆಗಳನ್ನು ಹೊರಾಂಗಣದಲ್ಲಿ ಮಾಡುತ್ತಾರೆ. ಇಲ್ಲಿ ಸ್ವಯಂ ಕಲಿಕೆಗೆ ಹೆಚ್ಚು ಉತ್ತೇಜನ ನೀಡಲಾಗುತ್ತದೆ. ಸ್ಕೌಟ್‌ಗಳು ತಾವೇ ಸ್ವಂತವಾಗಿ ಪುಸ್ತಕ ಹಿಡಿದು ಕಲಿಯಲು ಪ್ರಯತ್ನಿಸುತ್ತಾರೆ. ಅವಶ್ಯಕತೆ ಇದ್ದಲ್ಲಿ ಮಾತ್ರ ಹಿರಿಯ ಸ್ಕೌಟ್‌ಗಳು ಬಂದು ಸಹಾಯ ಮಾಡುತ್ತಾರೆ.



ಟ್ರೂಪ್ ಮೀಟಿಂಗ್ ನಡೆಸುವವರು ಸೀನಿಯರ್ ಪೆಟ್ರೋಲ್ ಲೀಡರ್ (ಹಿರಿಯ ಸ್ಕೌಟ್) ಆಗಿರುತ್ತಾರೆ.. ಸ್ಕೌಟ್ ಮಾಸ್ಟರ್ ಆಗಲಿ, ಅಥವಾ ಅಸಿಸ್ಟೆಂಟ್ ಸ್ಕೌಟ್ ಮಾಸ್ಟರ್ ಆಗಲಿ ಹೊರಗೆ ನಿಂತಿರುತ್ತಾರೆ. ಹಿರಿಯ ಸ್ಕೌಟ್ ನೀಡುವ ಆದೇಶವನ್ನು ಎಲ್ಲರೂ ಪಾಲಿಸುತ್ತಾರೆ. ಯಾರಾದರೂ ಏನಾದರೂ ಹೇಳಬೇಕಿದ್ದಲ್ಲಿ ಆ ಹಿರಿಯ ಸ್ಕೌಟ್‌ನ ಅನುಮತಿ ಪಡೆಯಬೇಕು. ಟ್ರೂಪ್ ಮೀಟಿಂಗ್‌ನಲ್ಲಿ ಹಾಡುಗಳಿಗೆ ಮತ್ತು ಆಟಗಳಿಗೆ ಪ್ರಾಶಸ್ತ್ಯವಿಲ್ಲ.

ಇನ್ನು ಸಮವಸ್ತ್ರದ ವಿಷಯಕ್ಕೆ ಬರೋಣ. ನಮ್ಮಲ್ಲಿರುವಂತೆ ಇಲ್ಲಿ ಪೂರ್ಣ ಸಮವಸ್ತ್ರ ಕಡ್ಡಾಯವಲ್ಲ. ಷರ್ಟ್ ಮಾತ್ರ ಸ್ಕೌಟ್ ಷರ್ಟ್ ಆಗಿದ್ದರೆ ಸಾಕು. ಉಳಿದಂತೆ ಪ್ಯಾಂಟ್, ಹಾಫ್ ಪ್ಯಾಂಟ್, ಶೂ ಮುಂತಾದುವು ಅವರಿಷ್ಟದಂತೆ ಧರಿಸಬಹುದು. ಸೀನಿಯರ್ ಪೆಟ್ರೋಲ್ ಲೀಡರ್ ಮಾತನಾಡಲು ಆರಂಭಿಸಿದಾಗ ಎಲ್ಲರೂ ಶಿಸ್ತಾಗಿ ನಿಂತು ಕೇಳಬೇಕೆಂದೇನಿಲ್ಲ. ಕೆಲವರು ಮಾತನಾಡುತ್ತಿದ್ದರೆ, ಇನ್ನು ಕೆಲವರು ಹೊರಗೆ ಕುಳಿತಿರುತ್ತಾರೆ. ಎಲ್ಲರ ಗಮನವನ್ನು ಸೆಳೆಯಲು, ಆ ಹಿರಿಯ ಸ್ಕೌಟ್‌ತನ್ನ ಬಲಗೈ ಎತ್ತಿ ಸ್ಕೌಟ್ ಖುರಟಿ ಮಾಡುತ್ತಾನೆ.

ನಮ್ಮಲ್ಲಿರುವಂತೆ, ಅಮೇರಿಕೆಯಲ್ಲಿಯೂ Court of Honor (COH) ಇದೆ. ಆದರೆ ಅದು ಟ್ರೂಪ್‌ನ ಒಂದು ಭಾಗವಲ್ಲ. ಬದಲಾಗಿ, ಒಬ್ಬ ಸ್ಕೌಟ್‌ಗೆ ಪ್ರಗತಿಪರ ಪದಕಗಳನ್ನು ನೀಡುವ ಸಮಾರಂಭ ಆಗಿರುತ್ತದೆ. ಭಾರತದಲ್ಲಿನ ರಾಷ್ಟ್ರಪತಿ ಸ್ಕೌಟ್ ಪದಕಕ್ಕೆ ಸಮಾನವಾದ "ಈಗಲ್ ಸ್ಕೌಟ್ ಪದಕ" ಇಲ್ಲಿದೆ. ಈ ಪದಕವೂ ಸೇರಿದಂತೆ ಎಲ್ಲಾ ಪ್ರಗತಿಪರ ಪದಕಗಳನ್ನು ವಿಜೇತನ ತಾಯಿ ನೀಡುತ್ತಾಳೆ. ಆ ಪದಕಗಳನ್ನು ಪಡೆಯುವಲ್ಲಿ ಒಬ್ಬ ತಾಯಿಯ ತ್ಯಾಗ ಗುರುತಿಸುವ ಸಂದರ್ಭ ಇದಾಗಿರುತ್ತದೆ. ನಂತರ ಬಾಲಕನು ತಾಯಿಗೆ ಒಂದು ಥ್ಯಾಂಕ್ಸ್ ಬ್ಯಾಡ್ಜ್ ನೀಡುತ್ತಾನೆ. ಇದೊಂದು ಭಾವಪೂರ್ಣ ಸಮಾರಂಭ ಆಗಿರುತ್ತದೆ.



ಈಗಲ್ ಸ್ಕೌಟ್ ಪದಕ ಪಡೆಯಲು ಇಚ್ಛಿಸುವ ಸ್ಕೌಟ್ ಒಂದು ಯೋಜನೆ ಆರಿಸಿಕೊಳ್ಳಬೇಕಾಗುತ್ತದೆ. ಅದು ಸಮಾಜಮುಖಿಯಾದ ಮತ್ತು ಜನಸ್ನೇಹಿಯಾದ ಯೋಜನೆಯಾಗಿರಬೇಕು. ಉದಾ: ಚರ್ಚ್, ದೇವಸ್ಥಾನ, ಪಾರ್ಕ್ ಮುಂತಾದ ಸ್ಥಳಗಳಲ್ಲಿ ಕುಳಿತುಕೊಳ್ಳಲು ಬೆಂಚ್ ತಯಾರಿಸುವುದು. ಈ ಯೋಜನೆಯನ್ನು ಒಂದು ಸಮಿತಿಯ ಮುಂದೆ ಪ್ರಸ್ತುತ ಪಡಿಸಿ ಅದರ ಅನುಮತಿ ಪಡೆಯಬೇಕು. ಅನಂತರ ಆ ಸಮಿತಿಯು ತಿಳಿಸಿದ ತಿದ್ದುಪಡಿಗಳೊಂದಿಗೆ ಯೋಜನೆಯನ್ನು ಪೂರೈಸಿ, ಅದರ ವರದಿಯನ್ನು ಸೂಕ್ತ ದಾಖಲೆಗಳೊಂದಿಗೆ ಮತ್ತೆ ಸಮಿತಿಯ ಮುಂದೆ ಪ್ರಸ್ತುತ ಪಡಿಸಬೇಕು. ಆನಂತರ, ಸಮಿತಿಯು ನೀಡಿದ ಪ್ರಮಾಣ ಪತ್ರವನ್ನು ಸ್ಕೌಟ್ ಶಾಪ್‌ನಲ್ಲಿ ತೋರಿಸಿ ಪದಕವನ್ನು ಖರೀದಿಸಬಹುದು.

ಬಾಲಕ ಸ್ಕೌಟ್ ತಾನು ಧರಿಸಿದ ಈಗಲ್ ಸ್ಕೌಟ್ ಪದಕವನ್ನು ವಯಸ್ಕನಾದ ನಂತರವೂ ಸಹ ಧರಿಸುತ್ತಿರುತ್ತಾನೆ ಮತ್ತು ಈಗಲ್ ಸ್ಕೌಟ್ ಗ್ರೂಪ್‌ನ ಒಬ್ಬ ಸದಸ್ಯನಾಗಿರುತ್ತಾನೆ.

ಹೀಗೆ ಭಾರತದಲ್ಲಿ ಮತ್ತು ಅಮೇರಿಕಾದಲ್ಲಿ ಇರುವ ಸ್ಕೌಟಿಂಗ್ ಚಟುವಟಿಕೆಗಳಲ್ಲಿ ಹಲವಾರು ಭಿನ್ನತೆಗಳು ಇದ್ದರೂ ಸಹ ಕೆಲವು ಸಾಮ್ಯತೆಗಳಿವೆ. ಎರಡೂ ದೇಶಗಳ ಒಳ್ಳೆಯ ವಿಷಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಅಳವಡಿಸಿಕೊಂಡರೆ ಇದೊಂದು ಸಾರ್ಥಕ ವಿಶ್ವ ಚಳುವಳಿ ಆಗುತ್ತದೆ.

# ಶ್ರದ್ಧಾಂಜಲಿ



**ಶ್ರೀ ವಿ.ವಿ. ನಾಯ್ಕ್,** ಹಿರಿಯ ಸ್ಕೌಟರ್, ಮಾಜಿ ಜಿಲ್ಲಾ ಕಾರ್ಯದರ್ಶಿ ಹಾಗೂ ಮಾಜಿ ಜಿಲ್ಲಾ ಸಂಘಟನಾ ಆಯುಕ್ತ ಉತ್ತರ ಕನ್ನಡ ಜಿಲ್ಲೆ ಇವರು ಮಾರ್ಚ್ 10, 2025 ರಂದು ಹೊನ್ನಾವರದಲ್ಲಿ ನಿಧನರಾದರು. ಇವರಿಗೆ 89 ವರ್ಷ ವಯಸ್ಸಾಗಿತ್ತು. ಶ್ರೀಯುತರು ತಮ್ಮ ಸೇವಾವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಸ್ಕೌಟ್ಸ್-ಗೈಡ್ಸ್ ಬೆಳವಣಿಗೆಗೆ ತಮ್ಮನ್ನು ತೊಡಗಿಸಿಕೊಂಡಿದ್ದರಲ್ಲದೆ, ಜಿಲ್ಲೆಯ ಸ್ಕೌಟ್-ಗೈಡ್‌ಗಳಿಗೆ ದಳನಾಯಕರುಗಳಿಗೆ ಮಾರ್ಗದರ್ಶಕರಾಗಿ, ಸಹಾನುಭೂತಿಗಳಾಗಿ, ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದರು. ಇವರು ತಮ್ಮ ಧರ್ಮಪತ್ನಿ, ಮೂರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



**ಶ್ರೀ ಟಿ.ಸಿ. ಚಂದ್ರಶೇಖರ್,** ಹೆಚ್.ಡಬ್ಲ್ಯೂ.ಬಿ.(ಎಸ್) ಮುಖ್ಯ ಶಿಕ್ಷಕರು ಹಾಗೂ ಕೊಡಗು ಜಿಲ್ಲೆಯ ಸೋಮವಾರಪೇಟೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಮಾರ್ಚ್ 20, 2025 ರಂದು ನಿಧನರಾಗಿರುತ್ತಾರೆ. ಇವರಿಗೆ 57 ವರ್ಷ ವಯಸ್ಸಾಗಿತ್ತು. ಇವರು ಜಿಲ್ಲೆಯ ಮತ್ತು ಸ್ಥಳೀಯ ಸಂಸ್ಥೆಯ ಎಲ್ಲಾ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಹಾಗೂ ಉತ್ತಮ ಸ್ಕೌಟ್ ಶಿಕ್ಷಕರಾಗಿದ್ದರು. ಇವರು ತಮ್ಮ ಧರ್ಮಪತ್ನಿ, ಒಬ್ಬ ಮಗ, ಒಬ್ಬ ಮಗಳು ಮತ್ತು ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



ಕೊಡಗು ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಅವರ ಸಹೋದರಿ **ಶ್ರೀಮತಿ ಯು.ಸಿ. ಸಾಮಿತ್ರಿ** ಮಾರ್ಚ್ 20, 2025 ರಂದು ಮೃತರಾಗಿರುತ್ತಾರೆ. ಇವರಿಗೆ 58 ವರ್ಷ ವಯಸ್ಸಾಗಿತ್ತು. ಇವರು ಕೊಡಗು ಜಿಲ್ಲಾ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಹೆಚ್ಚಿನ ಸಹಾಯವನ್ನು ಮಾಡಿರುತ್ತಾರೆ. ಇವರು ಒಬ್ಬ ಮಗಳು ಮತ್ತು ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಎ. ನಾಗರಾಜ್,** ದೈಹಿಕ ಶಿಕ್ಷಕರು ಹಾಗೂ ಸ್ಕೌಟ್ ಮಾಸ್ಟರ್ ಇವರು ಮಾರ್ಚ್ 24, 2025ರಂದು ಚಿತ್ರದುರ್ಗದಲ್ಲಿ ನಿಧನರಾದರು. ಇವರಿಗೆ 53 ವರ್ಷ ವಯಸ್ಸಾಗಿತ್ತು. ಇವರು 2016ರಲ್ಲಿ ಸ್ಕೌಟ್ ವಿಭಾಗದಲ್ಲಿ ಮೂಲ ತರಬೇತಿಯನ್ನು ಮುಗಿಸಿದ್ದು ಜಿಲ್ಲಾ ಹಾಗೂ ರಾಜ್ಯ ಸಂಸ್ಥೆ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮಕ್ಕಳೊಂದಿಗೆ ಭಾಗವಹಿಸುತ್ತಿದ್ದರು. ಶ್ರೀಯುತರು ಸುಮಾರು 10 ವರ್ಷಗಳ ಕಾಲ ಚಳ್ಳಕೆರೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಇವರು ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಜಾಂಬೂರಿ, ದೊಡ್ಡಬಳ್ಳಾಪುರದಲ್ಲಿ ನಡೆದ ರಾಜ್ಯ ಜಾಂಬೋರೇಟ್ ಹಾಗೂ ಮೂಡಬಿದರೆಯಲ್ಲಿ ಜರುಗಿದ ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀಯುತರು ತಮ್ಮ ಧರ್ಮಪತ್ನಿ ಶ್ರೀಮತಿ ಬ್ಯಾಳಮ್ಮ, ಒಬ್ಬ ಮಗ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಮೌನೇಶ್,** ಕಬ್ ಮಾಸ್ಟರ್ ಜೆ.ಎಸ್.ಎಸ್. ಪಬ್ಲಿಕ್ ಶಾಲೆ ಸಿದ್ಧಾರ್ಥನಗರ, ಮೈಸೂರು ಇವರು 27 ಮಾರ್ಚ್ 2025 ರಂದು ಮೈಸೂರಿನಲ್ಲಿ ನಿಧರಾದರು. ಇವರಿಗೆ 44 ವರ್ಷ ವಯಸ್ಸಾಗಿತ್ತು. ಶ್ರೀಯುತರು ಕಬ್ ವಿಭಾಗದಲ್ಲಿ ಅಡ್ವಾನ್ಸ್ ತರಬೇತಿಯನ್ನು ಪಡೆದಿದ್ದು 5 ವರ್ಷಗಳಿಂದ ಕಬ್ ಮಾಸ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇವರು ತಮ್ಮ ಧರ್ಮಪತ್ನಿ ಮತ್ತು ಒಬ್ಬ ಮಗಳನ್ನು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

## ಮಾರ್ಚ್ ತಿಂಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿರುವ ಸ್ಕೌಟ್ಸ್-ಗೈಡ್ಸ್ ಮತ್ತು ಕಬ್ಸ್-ಬುಲ್‌ಬುಲ್ಸ್ ಹಾಗೂ ರೋವರ್ಸ್-ರೇಂಜರ್ಸ್‌ಗಳ ವಿಹಂಗಮ ನೋಟ


ಬೆಂಗಳೂರು ಪೂರ್ವ


ರಾಯಚೂರು


ಬೆಂಗಳೂರು ಉತ್ತರ


ಬೀದರ್


ಬೆಳಗಾವಿ


ಚಿತ್ರದುರ್ಗ


ಮಧುಗಿರಿ


ಮಂಡ್ಯ

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)

SHAHEEN
GROUP OF INSTITUTIONS

COURSES OFFERED

**CLASS XI-XII/PUC (SCIENCE)**
INTEGRATED WITH NEET/JEE

**CLASS XI-XII/PUC (ARTS)**
INTEGRATED WITH UPSC/CLAT

**NEET LONG TERM**
REPEATERS BATCH

**CLASS XI-XII/PUC (COMMERCE)**
INTEGRATED WITH CA FOUNDATION

**SHAHEEN DEGREE COLLEGE & IAS ACADEMY**
Boost Your Career with **1 Degree and 3 Certifications**

- **BA** - Integrated with UPSC
- **B.Sc** - Integrated with UPSC
- **B.Com** - Integrated with UPSC
- **BCA** - Integrated with UPSC
- **UPSC** - One year UPSC Course for Graduates

- Diploma in AI and Machine Learning
- Diploma in Journalism
- Diploma in Industrial Accounting and Business Leadership
- Diploma in Islamic Studies and Hospitality Management




**Head Office:**
Shaheen Nagar, BIDAR-585403.

www.shaheengroup.org
1800 121 6235

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26